ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 15 ಗುರುವಾರ 2024

ಸಂಪುಟ: 44 | ಸಂಚಿಕೆ: 298 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ ಅಳವಡಿಕೆಗೆ

ಇನ್ನು ಮೂರು ತಿಂಗಳು ಕಾಲಾವಕಾಶ

ವಾಹನ ಮಾಲೀಕರ ವಂಚಿಸುತ್ತಿರುವ ಫೇಕ್ ವೆಬ್‌ಸೈಟ್ ವಿರುದ್ಧ ಕ್ರಮ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಎಚ್ಚರಿಕೆ



> 2019ರ ಏಪ್ರಿಲ್ 2ರ ಬಳಿಕ ಖರೀದಿಸಲ್ಪಡುವ ವಾಹನಗಳಿಗೆ ಶೋರೂಂನಿಂದ ಖರೀದಿಸುವಾಗಲೇ HSRP ನಂಬರ್ ಪ್ಲೇಟ್ ಅಳವಡಿಸಲಾಗುತ್ತಿದೆ. ಆದರೆ ಅದಕ್ಕಿಂತ ಹಿಂದೆ ಖರೀದಿಸಿದ ವಾಹನಗಳಿಗೆ ಅಳವಡಿಸಲು ನವೆಂಬರ್ 17ರವರೆಗೆ ಸರ್ಕಾರ ಗಡುವು ನೀಡಿತ್ತು. ಆದರೆ ವಾಹನ ಮಾಲೀಕರಿಂದ ನಿರೀಕ್ಷಿತ ಸ್ಪಂದನೆ ಸಿಗದ ಹಿನ್ನೆಲೆಯಲ್ಲಿ 3 ತಿಂಗಳು ಅಂದರೆ ಫೆಬ್ರವರಿ 17ರವರೆಗೂ ಗಡುವು ವಿಸ್ತರಿಸಲಾಗಿತ್ತು. ಈ ಅವಧಿಯಲ್ಲಾದರೂ ಬಹುತೇಕ ವಾಹನಗಳ ನೋಂದಣಿ ಪ್ರಕ್ರಿಯೆ ಮುಗಿಯಬಹುದು ಎಂಬುದು ಸರ್ಕಾರದ ಲೆಕ್ಕಾಚಾರವಾಗಿತ್ತು. ಆದರೆ ಅದು ಈಗಲೂ ಸುಳ್ಳಾಗಿದ್ದು ಮತ್ತೆ 3 ತಿಂಗಳು ಗಡುವು ವಿಸ್ತರಣೆ ಮಾಡಲಾಗಿದೆ.

ಬೆಂಗಳೂರು: ವಾಹನಗಳಿಗೆ ಅತೀ ಸುರಕ್ಷಿತ ನೋಂದಣಿ ಫಲಕ (High Security Registration Plates –HSRP) ಅಳವಡಿಕೆಗಿದ್ದ ಗಡುವನ್ನು ರಾಜ್ಯ ಸರ್ಕಾರ ಮತ್ತೆ 3 ತಿಂಗಳ ಕಾಲ ವಿಸ್ತರಿಸಿರುವುದಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಘೋಷಿಸಿದ್ದಾರೆ. ಇದರಿಂದಾಗಿ ಕೊನೆ ಕ್ಷಣದಲ್ಲಿ ನೋಂದಣಿಗಾಗಿ ಪರದಾಡುತ್ತಿದ್ದ ವಾಹನ ಮಾಲೀಕರು ಕೊಂಚ ನಿಟ್ಟುಸಿರು ಬಿಡುವಂತಾಗಿದೆ.

ಈ ವಿಚಾರವಾಗಿ ಬುಧವಾರ ವಿಧಾನ ಪರಿಷತ್‌ನಲ್ಲಿ ಸ್ವತಃ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿಕೆ ನೀಡಿ, ಯೋಜನೆ ಪಾರದರ್ಶಕವಾಗಿದ್ದು, ವಾಹನ ಮಾಲೀಕರ ವಂಚಿಸುತ್ತಿರುವ ಫೇಕ್ ವೆಬ್‌ಸೈಟ್‌ಗಳ ವಿರುದ್ಧ ಕ್ರಮ ವಹಿಸುವುದಾಗಿ ಭರವಸೆ ನೀಡಿದರು. ವಿಧಾನಪರಿಷತ್ ಕಲಾಪದಲ್ಲಿ ಸದಸ್ಯ ಮಾದೇಗೌಡ ಅವರು, ಹಳ್ಳಿಗಾಡಿನ ವಾಹನಗಳಿಗೂ ಹೆಚ್‌ಎಸ್‌ಆರ್‌ಪಿ ನೇಮ್ ಪ್ಲೇಟ್ ಹಾಕಿಸಬೇಕಿದೆ. ಸರ್ಕಾರ ನೀಡಿರುವ ಗಡುವು ವಿಸ್ತಾರ ಮಾಡಬೇಕು ಹಾಗೂ ಆನ್‌ಲೈನ್‌ನಲ್ಲಿ ನೋಂದಣಿ ಮಾಡಬೇಕಿರುವ ಹಿನ್ನೆಲೆಯಲ್ಲಿ ಫೇಕ್ ವೆಬ್‌ಸೈಟ್ ಹಾವಳಿ ಹೆಚ್ಚಾಗಿದೆ. ಇದರ ಬಗ್ಗೆ ಸಾರಿಗೆ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ರಾಮಲಿಂಗಾ ರೆಡ್ಡಿ ಅವರು, ರಾಜ್ಯದಲ್ಲಿ ಎರಡು ಕೋಟಿಗೂ ಹೆಚ್ಚಿನ ವಾಹನಗಳಿದ್ದು ಇನ್ನೂ ಬಹುತೇಕ ವಾಹನಗಳ ನೋಂದಣಿ ಬಾಕಿ ಇದೆ. ಹೀಗಾಗಿ HSRP ಅನ್ನು ಹಾಕಿಸಲು ಮೂರು ತಿಂಗಳ ● 7ನೇ ಪುಟಕ್ಕೆ

ವಿಧಾನಸಭೆಯಿಂದ ರಾಜ್ಯಸಭೆಗೆ ಚುನಾವಣೆ

ಅಜಯ್ ಮಾಕೆನ್, ಜಿ.ಸಿ.ಚಂದ್ರಶೇಖರ್, ಡಾ.ಸಯ್ಯದ್ ನಾಸಿರ್ ಹುಸೇನ್ ಕಾಂಗ್ರೆಸ್ ಅಭ್ಯರ್ಥಿಗಳು


ಮಾಕೆನ್


ಚಂದ್ರಶೇಖರ್


ನಾಸಿರ್ ಹುಸೇನ್

ಬೆಂಗಳೂರು, ಫೆ.14(ಕೆಎಂಶಿ)–ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27ರಂದು ನಡೆಯುತ್ತಿರುವ ಚುನಾವಣೆಗೆ ಕಾಂಗ್ರೆಸ್ ತನ್ನ ಮೂವರು ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಎಐಸಿಸಿ ವಕ್ತಾರ ಅಜಯ್ ಮಾಕೆನ್, ಜಿ.ಸಿ.ಚಂದ್ರಶೇಖರ್ ಹಾಗೂ ಡಾ.ಸಯ್ಯದ್ ನಾಸಿರ್ ಹುಸೇನ್ ಅಭ್ಯರ್ಥಿಗಳಾಗಿದ್ದಾರೆ. ಲೋಕಸಭೆ ಮತ್ತು ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಇಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಮೂವರ ಹೆಸರುಗಳನ್ನು ವರಿಷ್ಠರಿಗೆ ಶಿಫಾರಸು ಮಾಡಿತ್ತು. ಶಿಫಾರಸು ಮಾಡಿದ ಕೆಲವೇ ನಿಮಿಷಗಳಲ್ಲಿ ಎಐಸಿಸಿ ಈ ಮೂವರನ್ನು ಅಭ್ಯರ್ಥಿಗಳನ್ನಾಗಿ ಪ್ರಕಟಿಸಿದೆ. ● 7ನೇ ಪುಟಕ್ಕೆ

ಮಾರ್ಚ್ ಮೊದಲ ವಾರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಬೆಂಗಳೂರು, ಫೆ.14(ಕೆಎಂಶಿ)–ಮುಂಬರುವ ಲೋಕಸಭಾ ಚುನಾವಣೆಗೆ ರಾಜ್ಯದ 28 ಕ್ಷೇತ್ರಗಳ ಅಭ್ಯರ್ಥಿಗಳನ್ನು ಮಾರ್ಚ್ ಮೊದಲ ವಾರದಲ್ಲೇ ಪ್ರಕಟಿಸಲು ಕಾಂಗ್ರೆಸ್ ತೀರ್ಮಾನಿಸಿದೆ.


ಕನಿಷ್ಠ 25 ಕ್ಷೇತ್ರಗಳನ್ನು ಗೆಲ್ಲಲೇಬೇಕೆಂದು ಗುರಿ ಇಟ್ಟುಕೊಂಡಿರುವ ಕೆಪಿಸಿಸಿ ಚುನಾವಣಾ ಕಣಕ್ಕೆ ಕೆಲವು ಸಚಿವರು, ಶಾಸಕರು ಹಾಗೂ ವರ್ಚಸ್ವಿ ನಾಯಕರನ್ನು ಕಣಕ್ಕಿಳಿಸುವ ಬಗ್ಗೆ ಇಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ಪ್ರಸ್ತಾಪವಾಗಿ ಕೆಲವು ಕ್ಷೇತ್ರಗಳಿಗೆ ಸಂಭವನೀಯರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಆದರೆ, ಅಭ್ಯರ್ಥಿಗಳ ಆಯ್ಕೆ ಸಂಬಂಧ ● 7ನೇ ಪುಟಕ್ಕೆ

ರಾಜಸ್ಥಾನದಿಂದ ರಾಜ್ಯಸಭೆಗೆ ಸೋನಿಯಾ ನಾಮಪತ್ರ ಸಲ್ಲಿಕೆ



ಜೈಪುರ, ಫೆ14– ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರು ರಾಜ್ಯಸಭಾ ಚುನಾವಣೆಯಲ್ಲಿ ರಾಜಸ್ಥಾನದಿಂದ ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಪಕ್ಷದ ಸಂಸದ ರಾಹುಲ್ ಗಾಂಧಿ, ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಮತ್ತು ಪಕ್ಷದ ರಾಜ್ಯ ಅಧ್ಯಕ್ಷ ಗೋವಿಂದ್ ಸಿಂಗ್ ದೋತಾಸ್ರಾ ಕೂಡ ಉಪಸ್ಥಿತರಿದ್ದರು. ಫೆಬ್ರವರಿ 8 ರಿಂದ ರಾಜ್ಯಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆ ಆರಂಭವಾಗಿದೆ. ಫೆಬ್ರವರಿ 16 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಅಭ್ಯರ್ಥಿಗಳು ತಮ್ಮ ಹೆಸರನ್ನು ಫೆಬ್ರವರಿ 20ರವರೆಗೆ ಹಿಂಪಡೆಯಲು ಸಾಧ್ಯವಾಗುತ್ತದೆ. ಅಗತ್ಯ ಬಿದ್ದರೆ ಫೆ.27ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಅದೇ ದಿನ ಸಂಜೆ 5ರಿಂದ ಮತ ಎಣಿಕೆ ನಡೆಯಲಿದೆ. ಹಿರಿಯ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು 1999 ರಿಂದ ನಿರಂತರವಾಗಿ ಲೋಕಸಭಾ ಸದಸ್ಯರಾಗಿದ್ದಾರೆ. ಪ್ರಸ್ತುತ ಉತ್ತರ ಪ್ರದೇಶದ ರಾಯ್ ಬರೇಲಿ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಅವರು ಸಂಸತ್ತಿನ ಮೇಲ್ಮನೆಗೆ ಹೋಗುತ್ತಿರುವುದು ಇದೇ ಮೊದಲು.

ಯುಪಿಎಸ್‌ಸಿ ಪರೀಕ್ಷೆ–2024: ಅಧಿಸೂಚನೆ ಪ್ರಕಟ



ನವದೆಹಲಿ, ಫೆ.14– ನಾಗರಿಕ ಸೇವೆಯನ್ನು ಸೇರ ಬಯಸುವವರಿಗಾಗಿ ಕೇಂದ್ರ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗೆ ಅಧಿಸೂಚನೆ ಪ್ರಕಟಗೊಂಡಿದ್ದು, ಅರ್ಜಿ ಸಲ್ಲಿಸಲು ಮಾರ್ಚ್ 5 ಕೊನೆಯ ದಿನವಾಗಿದೆ.

ಈ ಬಾರಿ 1,056 ಹುದ್ದೆಗಳಿಗೆ ಪರೀಕ್ಷೆ ನಡೆಯಲಿದೆ. ಪೂರ್ವಭಾವಿ ಪರೀಕ್ಷೆ ಮೇ 26ರಂದು ನಡೆಯಲಿದೆ. ಅರ್ಜಿ ಸಲ್ಲಿಸುವವರ ವಯೋಮಾನ 21ರಿಂದ 32 (2024ರ ಆಗಸ್ಟ್ 1ಕ್ಕೆ)ರವರೆಗೆ ಇರಬೇಕು. ಅರ್ಜಿ ಸಲ್ಲಿಸಲು ಅಭ್ಯರ್ಥಿಯ ಕನಿಷ್ಠ ವಿದ್ಯಾರ್ಹತೆ ಪದವಿಯಾಗಿರಬೇಕು. ಲೋಕಸೇವಾ ಆಯೋಗದ ಅಂತರ್ಜಾಲ ಪುಟದ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಯುಪಿಎಸ್‌ಸಿ ಹೇಳಿದೆ. ಪೂರ್ವಭಾವಿ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಎಂಬ ಮೂರು ಹಂತದ ಈ ಪರೀಕ್ಷೆಯನ್ನು ಗರಿಷ್ಠ 6 ಬಾರಿಯಷ್ಟೇ ಎದುರಿಸಲು ಅವಕಾಶ ಕಲ್ಪಿಸಲಾಗಿದೆ.

ಪೂರ್ವಭಾವಿ ಪರೀಕ್ಷೆ: ಇದರಲ್ಲಿ 2 ಕಡ್ಡಾಯ ಪತ್ರಿಕೆಗಳಿವೆ ಪ್ರತಿಯೊಂದಕ್ಕೂ 200 ಅಂಕಗಳು. 2 ಗಂಟೆಯ ಈ ಪರೀಕ್ಷೆಯ ● 7ನೇ ಪುಟಕ್ಕೆ



ಇಂದು ಕೇಂದ್ರ ಸಚಿವರೊಂದಿಗೆ ಸಭೆ; ರೈತ ಮುಖಂಡರ ಸಮ್ಮತಿ

ಚಂಡೀಗಢ, ಫೆ.14–ಕೇಂದ್ರ ಸರ್ಕಾರ ನಾಳೆ (ಗುರುವಾರ) ಚಂಡೀಗಢದಲ್ಲಿ ರೈತರೊಂದಿಗೆ ಸಭೆ ನಡೆಸಲಿದ್ದು, ಪ್ರತಿಭಟನಾಕಾರರು ತಾಳ್ಮೆಯಿಂದಿರುತ್ತಾರೆ. ಅಲ್ಲಿಯವರೆಗೆ ವಿವಿಧ ಗಡಿಗಳಲ್ಲಿನ ಬ್ಯಾರಿಕೇಡ್‌ಗಳು ಮತ್ತು ಇತರ ಅಡೆತಡೆಗಳನ್ನು ದಾಟಲು ಪ್ರಯತ್ನಿಸುವುದಿಲ್ಲ ಎಂದು ರೈತ ಮುಖಂಡರೊಬ್ಬರು ತಿಳಿಸಿದ್ದಾರೆ.

ಚಂಡೀಗಢದಲ್ಲಿ ಬುಧವಾರ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಮಾತನಾಡಿದ ರೈತ ಮುಖಂಡ ಸರ್ವಾನ್ ಸಿಂಗ್ ಪಂಧೇರ್, ಕೇಂದ್ರ ಕೃಷಿ ಸಚಿವ ಅರ್ಜುನ್ ಮುಂಡಾ ಮತ್ತು ಇತರ ಇಬ್ಬರು ಕೇಂದ್ರ ಸಚಿವರಾದ ಪಿಯೂಷ್ ಗೋಯಲ್ ಮತ್ತು ನಿತ್ಯಾನಂದರಾಯ್ ಅವರು ನಗರದಲ್ಲಿ ಪ್ರತಿಭಟನಾನಿರತ ರೈತರ ಪ್ರತಿನಿಧಿಗಳನ್ನು ಗುರುವಾರ ಸಂಜೆ 5 ಗಂಟೆಗೆ ಭೇಟಿ ಮಾಡಲಿದ್ದಾರೆ ಎಂದು ಹೇಳಿದ್ದಾರೆ. ಗೋಯಲ್ ಅವರು ಆಹಾರ ಮತ್ತು ಸಾರ್ವಜನಿಕ ವಿತರಣಾ ಖಾತೆಯನ್ನು ಹೊಂದಿದ್ದು ರಾಯ್ ಅವರು ಗೃಹ ಖಾತೆ ರಾಜ್ಯ ಸಚಿವರಾಗಿದ್ದಾರೆ. ಕಳೆದ ರಾತ್ರಿ ನಮಗೆ ಬಂದ ಸಂದೇಶ ಮತ್ತು ಕೇಂದ್ರ ಸಚಿವ ಅನುರಾಗ್ ಠಾಕೂರ್ ಸಂವಾದಕ್ಕೆ ಕರೆದ ಆಧಾರದ ಮೇಲೆ, ನಾವು ಚಳವಳಿಯಲ್ಲಿ ಎಲ್ಲರೊಂದಿಗೆ ಮಾತನಾಡಿದ್ದೇವೆ. ನಾವು ಇಂದು ಶಾಂತಿಯಿಂದಿರಲು ● 7ನೇ ಪುಟಕ್ಕೆ

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ

ಡಾ.ಸಿ.ಎನ್.ಮಂಜುನಾಥ್ ಎನ್‌ಡಿಎ ಅಭ್ಯರ್ಥಿ

- ಡಿ.ಕೆ.ಸುರೇಶ್ 'ದೇಶ ವಿಭಜನೆ' ಹೇಳಿಕೆ ಗಂಭೀರವಾಗಿ ಪರಿಗಣಿಸಿದ ಬಿಜೆಪಿ ವರಿಷ್ಠರು
- ಬೆಂಗಳೂರು ಉತ್ತರಕ್ಕೆ ಡಿ.ಕೆ.ಸುರೇಶ್ ಸ್ಥಳಾಂತರ ಸಂಭವ



ಬೆಂಗಳೂರು, ಫೆ.14(ಕೆಎಂಶಿ)–ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರರೂ ಆದ ಸಂಸದ ಡಿ.ಕೆ.ಸುರೇಶ್ ವಿರುದ್ಧ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ನಿವೃತ್ತ ನಿರ್ದೇಶಕ ಹಾಗೂ ಖ್ಯಾತ ಹೃದಯ ತಜ್ಞ ಡಾ. ಸಿ.ಎನ್.ಮಂಜುನಾಥ್ ಅವರನ್ನು ಕಣಕ್ಕಿಳಿಸಲು ಬಿಜೆಪಿ ನಿರ್ಧರಿಸಿದೆ.

ಬಿಜೆಪಿ ವರಿಷ್ಠರ ಸಲಹೆಯಂತೆ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಇವರನ್ನು ಸ್ಪರ್ಧಿಗಿಳಿಸಲು ತೀರ್ಮಾನಿಸಲಾಗಿದೆ. ರಾಷ್ಟ್ರ ವಿಭಜನೆ ಕುರಿತು ಸುರೇಶ್ ಹೇಳಿಕೆ ನೀಡಿದ ನಂತರ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಹಿರಿಯ ನಾಯಕರು ಆಕ್ರೋಶಗೊಂಡಿದ್ದಾರೆ. ಇಂಥವರು ಲೋಕಸಭೆಗೆ ಆಯ್ಕೆ ಆಗಬಾರದು ಎಂಬ ಉದ್ದೇಶದಿಂದಲೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು, ವರ್ಚಸ್ಸು ಹೊಂದಿರುವ ಹಾಗೂ ಜನಮನ್ನಣೆ ಗಳಿಸಿರುವ ಮಂಜುನಾಥ್ ಅವರನ್ನು ಕಣಕ್ಕಿಳಿಸಲು ತೀರ್ಮಾನಿಸಲಾಗಿದೆ. ಬಿಜೆಪಿ ನೀಡಿದ ಈ ಸಂದೇಶದ ಬೆನ್ನಲ್ಲೇ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬ ಸಭೆ ಸೇರಿ ಆಂತರಿಕವಾಗಿ ಚರ್ಚೆ ನಡೆಸಿದ್ದಾರೆ. ಇದರ ನಡುವೆಯೇ ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಅವರನ್ನು ಗೌಡರ ಬಳಿ ಕಳುಹಿಸಿ ಪಕ್ಷದ ಸಂದೇಶ ತಿಳಿಸಿದ್ದು, ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಕಣಕ್ಕಿಳಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ಮಂಜುನಾಥ್ ಅವರನ್ನು ಕಣಕ್ಕಿಳಿಸುತ್ತಿರುವ ವಿಚಾರ ಕಾಂಗ್ರೆಸ್‌ನಲ್ಲಿ ತಲ್ಲಣವನ್ನುಂಟು ಮಾಡಿದೆ. ಈ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಸುರೇಶ್ ಅವರು ಚುನಾವಣೆ ಕಣದಿಂದ ಹಿಂದೆ ಸರಿಯುವ ಇಲ್ಲವೇ ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಸ್ಪರ್ಧಿಸುವ ಬಗ್ಗೆ ಚಿಂತಿಸಿದ್ದಾರೆ. ಒಂದು ವೇಳೆ ಸುರೇಶ್ ಕಣಕ್ಕಿಳಿಯದಿದ್ದರೆ, ದಿವಂಗತ ಐಎಎಸ್ ಅಧಿಕಾರಿ ಡಿ.ಕೆ. ರವಿ ಅವರ ಪತ್ನಿ ಕುಸುಮಾ ಅವರನ್ನು ಕಣಕ್ಕಿಳಿಸುವ ಬಗ್ಗೆ ಡಿ.ಕೆ.ಶಿವಕುಮಾರ್ ಅವರ ಕುಟುಂಬದಲ್ಲಿ ಆಂತರಿಕ ಚರ್ಚೆ ನಡೆದಿದೆ.

ರಾಜ್ಯಸಭೆಗೆ ಎನ್‌ಡಿಎ 2ನೇ ಅಭ್ಯರ್ಥಿ ರಾಜೀವ್ ಚಂದ್ರಶೇಖರ್ ಇಲ್ಲವೇ ಕುಪೇಂದ್ರ ರೆಡ್ಡಿ?

ಹಠಾತ್ ಬೆಳವಣಿಗೆಯಲ್ಲಿ ರಾಜ್ಯಸಭೆ ಚುನಾವಣೆಯಲ್ಲಿ ಗೆಲ್ಲಲು ಅಗತ್ಯವಿರುವ ಸಾಮರ್ಥ್ಯ ವಿಧಾನಸಭೆಯಲ್ಲಿ ಇಲ್ಲದಿದ್ದರೂ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಬಿಜೆಪಿ ವರಿಷ್ಠರೇ ಆಸಕ್ತಿ ತೋರಿದ್ದಾರೆ. ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಇಲ್ಲವೇ ರಾಜ್ಯಸಭೆ ಮಾಜಿ ಸದಸ್ಯ ಕುಪೇಂದ್ರರೆಡ್ಡಿ ಅವರು ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ಉಭಯ ಪಕ್ಷಗಳ ನಡುವೆ ತೆರೆಮರೆಯಲ್ಲಿ 2ನೇ ಅಭ್ಯರ್ಥಿ ಕಣಕ್ಕಿಳಿಸುವ ಪ್ರಯತ್ನ ನಡೆದಿದ್ದು, ಈ ವಿಚಾರವನ್ನು ಗೌಪ್ಯವಾಗಿಡಲಾಗಿದೆ. ನಾಳೆ ಸ್ಪಷ್ಟ ಚಿತ್ರಣ ಸಿಗಲಿದೆ. ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಲು ನಾಳೆಯೇ ಕಡೆಯ ದಿನವಾಗಿದೆ.

ಫೆ.27, 28ರಂದು ರಾಜ್ಯ ಸರ್ಕಾರಿ ನೌಕರರಿಗೆ ವಿಶೇಷ ಸಾಂದರ್ಭಿಕ ರಜೆ

ಬೆಂಗಳೂರು, ಫೆ.14– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮತ್ತು ರಾಜ್ಯದ ಎಲ್ಲಾ ಇಲಾಖೆಗಳ ವೃಂದ ಸಂಘಗಳ ವತಿಯಿಂದ ಫೆಬ್ರವರಿ 27ರಂದು ರಾಜ್ಯ ಸರ್ಕಾರಿ ನೌಕರರ ಮಹಾ ಸಮ್ಮೇಳನ ಹಾಗೂ ಪ್ರಜಾಸ್ನೇಹಿ ಕಾರ್ಯಾಗಾರ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಸರ್ಕಾರಿ ನೌಕರರಿಗೆ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಬೆಂಗಳೂರು ನೌಕರರಿಗೆ ಫೆ.27ರಂದು ರಜೆ ನೀಡಿದರೆ, ಇತರೆ ಬೇರೆ–ಬೇರೆ ಜಿಲ್ಲೆಗಳಿಂದ ಬರುವ ನೌಕರರಿಗೆ ಎರಡು ದಿನ ಅಂದರೆ ಫೆ.27 ಮತ್ತು 28ರಂದು ರಜೆ ನೀಡಲಾಗಿದೆ.

ಬೆಂಗಳೂರು ನಗರದ ಅರಮನೆ ಮೈದಾನದ ಕೃಷ್ಣ ವಿಹಾರದಲ್ಲಿ (ಗೇಟ್ ನಂ.1) ಫೆ. 27ರಂದು ಬೆಳಗ್ಗೆ 10.30ಕ್ಕೆ ರಾಜ್ಯ ಸರ್ಕಾರಿ ನೌಕರರ ಮಹಾ ಸಮ್ಮೇಳನ ನಡೆಯಲಿದೆ.

ಅಬುದಾಬಿಯಲ್ಲಿ ಮೊದಲ ಹಿಂದೂ ದೇವಸ್ಥಾನ ಉದ್ಘಾಟಿಸಿದ ಮೋದಿ

ಅಬುಧಾಬಿ, ಫೆ.14– ಭಾರತದಲ್ಲಿ 500 ವರ್ಷಗಳ ಬಳಿಕ ಅಯೋಧ್ಯೆ ರಾಮಮಂದಿರ ಲೋಕಾರ್ಪಣೆಗೊಂಡಿದ್ದರೆ, ಅತ್ತ ಅರಬ್ ಸಂಸ್ಥಾನ ಅಬುದಾಬಿಯಲ್ಲಿ ಮೊದಲ ಹಿಂದೂ ದೇವಸ್ಥಾನ ಉದ್ಘಾಟನೆಗೊಂಡಿದೆ. ಪ್ರಧಾನಿ ಮೋದಿ, ತಮ್ಮ ಅಮೃತಹಸ್ತದಿಂದ ಬೋಚಾ ಸನವಾಸಿ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥಾ ಮಂದಿರವನ್ನು ಪ್ರಧಾನಿ ಮೋದಿ ಉದ್ಘಾಟಿಸಿದ್ದಾರೆ. ವಿಶ್ವದ 3ನೇ ಅತೀ ದೊಡ್ಡ ಹಿಂದೂ ದೇಗುಲವನ್ನು, ಬರೋಬ್ಬರಿ 700 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ.

ಬಾಪ್ಸ್ ಮಂದಿರದ ಒಳ ಪ್ರವೇಶಕ್ಕೂ ಮೊದಲು ಗಂಗಾ ಜಲವನ್ನು ಸಮರ್ಪಿಸಿದ ಪ್ರಧಾನಿ ಮೋದಿ ಬಳಿಕ ಪೂಜ್ಯ ಸಂತರ ಜೊತೆ ಮಂದಿರ ಪ್ರವೇಶಿಸಿದರು. ಮಂದಿರ ಪ್ರವೇಶ ದ್ವಾರದಲ್ಲಿ ಮಹಾಂತ ಸ್ವಾಮಿ ಮಹರಾಜ್ ಗುರುಗಳಿಗೆ ವಂದಿಸಿದ ಪ್ರಧಾನಿ ಮೋದಿ ಭವ್ಯಮಂದಿರ ಒಳ ಪ್ರವೇಶಿಸಿದರು. ಬಳಿಕ ಮಹಾಂತಸ್ವಾಮಿ ಮಹಾರಾಜ್ ಸಂತರ ಜೊತೆ ಮಂದಿರ ಉದ್ಘಾಟಿಸಿದರು. ಸಂತರು, ಸ್ವಾಮೀಜಿಗಳ ಜೊತೆ ಕುಳಿತು ಮಂತ್ರ ಪಠಿಸಿದ ಪ್ರಧಾನಿ ಮೋದಿಗೆ ಸಂತ ಮಹಾರಾಜಸ್ವಾಮಿ ಕುಂಕುಮವಿಟ್ಟು, ಲೋಕಾರ್ಪಣೆ ಸಂಕಲ್ಪ ಕೈಗೊಂಡರು. ಬಳಿಕ ವೈಷ್ವಿಕ ಆರತಿ ಬೆಳಗಿದ ಪ್ರಧಾನಿ ಮೋದಿ ಹಾಗೂ ಸಂತರು ಭವ್ಯ ಮಂದಿರ ದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ವಿಶೇಷ ಅಂದರೆ ಲಾಸ್ ಏಂಜಲೀಸ್ ಸೇರಿದಂತೆ ಅಮೆರಿಕದ 6ಕ್ಕೂ ಹೆಚ್ಚು ಹಿಂದೂ ಮಂದಿರ, ಕೆನಾಡದಲ್ಲಿನ 2 ಹಿಂದೂ ಮಂದಿರ, ಫ್ರಾನ್ಸ್, ಜರ್ಮನಿ, ಆಸ್ಟ್ರಿಯಾ, ಲಂಡನ್, ಸೌತ್ ಆಫ್ರಿಕಾ, ಬೋಟ್ಸವಾನ, ಜಾಂಬಿಯಾ ಸೇರಿದಂತೆ ವಿಶ್ವದ ಇತರ ದೇಶಗಳಲ್ಲಿರುವ ಹಿಂದೂ ಮಂದಿರದಲ್ಲಿ ಆರತಿ ಬೆಳಗಿ ವಿಶೇಷ ಪೂಜೆ ಸಲ್ಲಿಸಲಾಯಿತು.


ಅರಬ್ ಸಂಸ್ಥಾನ ಅಬುದಾಬಿಯಲ್ಲಿ ಮೊದಲ ಹಿಂದೂ ದೇವಾಲಯವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು.

ಅಕ್ಷರ ಪುರುಷೋತ್ತಮ ಚರಣಗಳಿಗೆ ಪುಷ್ಪ ಸಮರ್ಪಿಸಿದ ಪ್ರಧಾನಿ ಮೋದಿ, ರಾಧಾ ಕೃಷ್ಣ ಮೂರ್ತಿಗಳಿಗೆ ಪುಷ್ಪ ಸಮರ್ಪಿಸಿದರು. ಬಳಿಕ ಪ್ರಧಾನಿ ನರೇಂದ್ರ ಮೋದಿಗೆ ಮಹಾಂತ ಸ್ವಾಮೀಜಿ ಕಮಲ ಪುಷ್ಪಗಳ ಹೂವಿನ ಮಾಲೆ ಮೂಲಕ ಗೌರವ ಸಮರ್ಪಿಸಿದರು. ಇಲ್ಲಿ ಕೃಷ್ಣ–ರಾಧೆ, ಶಿವ–ಪಾರ್ವತಿ ಮತ್ತು ಸೀತೆ, ರಾಮ, ಲಕ್ಷ್ಮಣ ಹಾಗೂ ಹನುಮಂತ ಸೇರಿ ಬಹುತೇಕ ಎಲ್ಲ ಹಿಂದೂ ದೇವರುಗಳನ್ನು ಪೂಜಿಸಲಾಗುತ್ತದೆ.

ಮಂದಿರದ ವೈಶಿಷ್ಟ್ಯ

ಮಂದಿರವು 108 ಅಡಿ ಎತ್ತರ, 262 ಅಡಿ ಉದ್ದ ಮತ್ತು 180 ಅಡಿ ಅಗಲವಿದೆ.ಒಟ್ಟು 27 ಎಕರೆ ಪ್ರದೇಶದಲ್ಲಿ ಈ ಮಂದಿರಕ್ಕಾಗಿ ಯುಎಇ ಸರ್ಕಾರ ನೀಡಿದೆ. ಈ ಪೈಕಿ 17 ಎಕರೆ ಪ್ರದೇಶದಲ್ಲಿ ಭವ್ಯ ಮಂದಿರ ನಿರ್ಮಾಣಗೊಂಡಿದೆ. 20000 ಟನ್ ಕಲ್ಲಿನಿಂದ ಈ ಮಂದಿರ ನಿರ್ಮಾಣ ಮಾಡಲಾಗಿದೆ. ಅಯೋಧ್ಯೆ ರಾಮ ಮಂದಿರ ರೀತಿ, ಕಬ್ಬಿಣ ಸೇರಿದಂತೆ ಇತರ ಲೋಹಗಳನ್ನು ಬಳಸಿಲ್ಲ. ದೇಗುಲದ ನಿರ್ಮಾಣ ಕಾರ್ಯದಲ್ಲಿ 2,000 ಭಾರತೀಯ ಶಿಲ್ಪಿಗಳು ಕೆತ್ತನೆ ಕೆಲಸ ಮಾಡಿದ್ದರು.

ಏನಿದರ ವಿಶೇಷತೆ: ಈ ದೇವಾಲಯವನ್ನು ವೈಜ್ಞಾನಿಕ ತಂತ್ರಜ್ಞಾನಗಳೊಂದಿಗೆ ಪ್ರಾಚೀನ ವಾಸ್ತುಶಿಲ್ಪದ ವಿಧಾನಗಳನ್ನು ಬಳಸಿ ನಿರ್ಮಿಸಲಾಗಿದೆ. ಬೋಚಸನ ವ್ಯಾಸಿ ಅಕ್ಷರ ಪುರುಷೋತ್ತಮ ಸ್ವಾಮಿ ನಾರಾಯಣ ಸಂಸ್ಥೆಯ(BAPS) ಹಿಂದೂ ಮಂದಿರವನ್ನು, ತಾಪಮಾನವನ್ನು ಅಳೆಯಲು ಮತ್ತು ಭೂಕಂಪಗಳ ಚಟುವಟಿಕೆಯನ್ನು ಮೇಲ್ವಿಚಾರಣೆ ಮಾಡಲು 300 ಕ್ಕೂ ಹೆಚ್ಚು ಹೈಟೆಕ್ ಸಂವೇದಕಗಳೊಂದಿಗೆ ನಿರ್ಮಿಸಲಾಗಿದೆ, ದೇವಾಲಯದ ನಿರ್ಮಾಣದಲ್ಲಿ ಯಾವುದೇ ಲೋಹವನ್ನು ಬಳಸಲಾಗಿಲ್ಲ ಮತ್ತು ಅಡಿಪಾಯವನ್ನು ತುಂಬಲು ಹಾರುಬೂದಿಯನ್ನು ಬಳಸಲಾಗಿದೆ.ಅಬುದಾಬಿಯಲ್ಲಿನ BAPS ಹಿಂದೂ ಮಂದಿರವನ್ನು ಯುಎಇ ಸರ್ಕಾರವು ದಾನವಾಗಿ ನೀಡಿದ 27 ಎಕರೆ (11 ಹೆಕ್ಟೇರ್) ಜಾಗದಲ್ಲಿ ● 7ನೇ ಪುಟಕ್ಕೆ

ಗ್ರಾಮಸ್ಥರು ಪಂಚಮಿತ್ರ ಸೇವೆ ಸದುಪಯೋಗ ಮಾಡಿಕೊಳ್ಳಿ

ಐಎಎಸ್ ಅಧಿಕಾರಿ ಲಕ್ಷ್ಮಿ ಪ್ರಿಯಾ ಸಲಹೆ



ಮೈಸೂರಿನ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ನಡೆದ 2023–24ರ ಶೈಕ್ಷಣಿಕ ವರ್ಷದ ಯೋಜನಾ ಆಯೋಗ ವೇದಿಕೆಯಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕಿ ಲಕ್ಷ್ಮಿ ಪ್ರಿಯಾ ಮಾತನಾಡಿದರು.

ಮೈಸೂರು, ಫೆ.14(ಬಿಎಲ್‌ಯು)– ಸಾರ್ವಜನಿಕರ ಸೇವೆಗಾಗಿ ಸರ್ಕಾರ ಪಂಚಮಿತ್ರ ಸೇವೆ ಒದಗಿಸಿದ್ದು, ಗ್ರಾಮಸ್ಥರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮೈಸೂರಿನ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕಿ ಲಕ್ಷ್ಮಿ ಪ್ರಿಯಾ ಸಲಹೆ ನೀಡಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಇಂದು 2023–24ರ ಶೈಕ್ಷಣಿಕ ವರ್ಷದ ಯೋಜನಾ ಆಯೋಗ ವೇದಿಕೆ ಉದ್ಘಾಟಿಸಿ ಮಾತನಾಡಿದ ಅವರು, ಪಂಚಮಿತ್ರ ಸೇವೆಯ ಬಗ್ಗೆ ಮೊದಲು ಗ್ರಾಮಸ್ಥರು ಮಾಹಿತಿ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಂಚಮಿತ್ರ ಸೇವೆಯಿಂದ ಬಹಳಷ್ಟು ಉಪಯೋಗವಿದ್ದು, ಜನರು ಇದರ ಸದುಪಯೋಗಪಡಿಸಿಕೊಳ್ಳಬೇಕು. ಈ ಮೂಲಕ ಸರ್ಕಾರದ ಯೋಜನೆಗಳನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಹಳಷ್ಟು ಅನುದಾನ ಬರಲಿದ್ದು, ಯೋಜನೆಗಳನ್ನು ನೀಡಲಾಗುತ್ತದೆ. ಆಡಳಿತಾತ್ಮಕ ಹಾಗೂ ಹಣಕಾಸಿನ ವಿಚಾರವಾಗಿ ಬಹಳಷ್ಟು ಮಹತ್ವದ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಸರ್ಕಾರ ನೀಡಿದೆ. ಇದಲ್ಲದೆ ಹಲವು ರೀತಿಯ ತೆರಿಗೆಗಳಿಂದ ಆದಾಯ ಕ್ರೋಢೀಕರಣವಾಗುತ್ತದೆ. ಇದನ್ನು ಬಳಸಿಕೊಂಡು ಅಭಿವೃದ್ಧಿ ಮಾಡಿ, ಜನರಿಗೆ ಉತ್ತಮ ಸೇವೆಗಳನ್ನು ಒದಗಿಸಬೇಕು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಹಕಾರ ಅಧ್ಯಯನ ವಿಭಾಗ ಆಯೋಜಿಸಿದ್ದ ಸಭೆಯಲ್ಲಿ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಮಹೇಶ್ ಹಾಗೂ ಪ್ರೊ.ನವಿತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮನೆ ಬೀಗ ಮುರಿದು ಚಿನ್ನಾಭರಣ, ಗೃಹಬಳಕೆ ವಸ್ತುಗಳ ಕಳವು

ಮೈಸೂರು, ಫೆ.14(ಎಂಕೆ)– ಬಾಗಿಲ ಬೀಗ ಮುರಿದು ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ಗೃಹಬಳಕೆ ವಸ್ತುಗಳನ್ನು ಕದ್ದೊಯ್ದಿರುವ ಘಟನೆ ಮೈಸೂರಿನ ಚಾಮರಾಜಪುರಂನಲ್ಲಿ ನಡೆದಿದೆ.

ಇಲ್ಲಿನ ಗೀತಾ ರಸ್ತೆ ನಿವಾಸಿ ಹೆಚ್.ಎನ್.ಪ್ರಕಾಶ್ ಎಂಬುವರು ಫೆ.10 ರಂದು ಸಂಬಂಧಿಕರ ಮನೆಗೆ ಹೋಗಿ ಮಾರನೇ(ಫೆ.11) ದಿನ ವಾಪಸ್ ಮನೆಗೆ ಬಂದು ನೋಡಿದಾಗ ಬಾಗಿಲ ಬೀಗ ಮುರಿದು ಚಿನ್ನಾಭರಣ ಹಾಗೂ ಗೃಹಬಳಕೆ ವಸ್ತುಗಳನ್ನು ಕಳ್ಳತನ ಮಾಡಿರುವುದು ಗೊತ್ತಾಗಿದೆ. ಸುಮಾರು 2.35 ಲಕ್ಷ ರೂ., ಮೌಲ್ಯದ 12 ಗ್ರಾಂ ಚಿನ್ನದ ಸರ, 9 ಗ್ರಾಂ ಚಿನ್ನದ ಉಂಗುರ, ಬೆಳ್ಳಿಯ ಎರಡು ತಟ್ಟೆಗಳು, ಒಂದು ಹೀರೋ ಹೊಂಡಾ ಬೈಕ್, ಎರಡು ಪಚ್ಚ ಪಾತ್ರೆ ಮತ್ತು ಒಂದು ಉದ್ದರಣೆ, ಎರಡು ರೋಸ್‌ವುಡ್ ಮಂಟಪ, ಒಂದು ಟಿಪಾಯ್, ಟೀಕ್‌ವುಡ್ ಮರದ 6 ಚೇರ್‌ಗಳು, ಊಟದ ಟೆಬಲ್, ಸಾಗುವಾನಿ ಮರದ ಒಂದು ಟೇಬಲ್, ಒಂದು ಲಾರಿ ಮರ, ಒಂದು ಗ್ಯಾಸ್ ಸ್ಟೌವ್ ಹಾಗೂ ಎರಡು ಸಿಲಿಂಡರ್‌ಗಳ ಕಳ್ಳತನವಾಗಿದೆ ಎಂದು ಹೆಚ್.ಎನ್.ಪ್ರಕಾಶ್ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಲಕ್ಷ್ಮಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರು ವಿಶ್ವವಿದ್ಯಾನಿಲಯವು 2023–24ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಜೆಎಸ್‌ಎಸ್ ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಪ್ರಹಸನ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ಮೂಕಾಭಿನಯದಲ್ಲಿ ದ್ವಿತೀಯ ಸ್ಥಾನ ಪಡೆದು 37ನೇ ದಕ್ಷಿಣ–ಪೂರ್ವ ವಲಯ ಯುವ ಜನೋತ್ಸವಕ್ಕೆ ಆಯ್ಕೆ ಆಗಿದ್ದು, ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಲಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಾದ ಕೃತಿಕ, ಹರ್ಷವರ್ಧನ್, ತೇಜಸ್, ಭಾನುಪ್ರಕಾಶ್, ಲಿಖಿತ, ಪ್ರೇರಣ, ವಿಜಯಲಕ್ಷ್ಮಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಶ್ರೀರಶ್ಮಿಗೆ ಪಿಹೆಚ್.ಡಿ ಪದವಿ



ಮೈಸೂರು,ಫೆ.14–ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರಾದ ಡಾ.ಟಿ.ಡಿ.ಇಷ್ಟಲಿಂಗ ಮೂರ್ತಿ ಮತ್ತು ಡಾ.ಕೆ.ಎಸ್.ಲೋಕೇಶ್ ಅವರ ಮಾರ್ಗದರ್ಶನದಲ್ಲಿ ಶ್ರೀಮತಿ ಎಸ್.ಶ್ರೀರಶ್ಮಿ ಅವರು ಇಂಪ್ಯಾಕ್ಟ್ ಆಫ್ ಇಕೋಲಾಜಿಕಲ್ ಸ್ಯಾನಿಟೇಷನ್ ಆನ್ ಹ್ಯೂಮನ್ ಹೆಲ್ತ್ ಅಂಡ್ ಅಗ್ರಿಕಲ್ಚರ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಪಿ.ಹೆಚ್‌ಡಿಗೆ ಅಂಗೀಕರಿಸಿದೆ ಎಂದು ಪ್ರಕಟಣೆ ತಿಳಿಸಿದೆ.



ರೋಟರಿ ಮೈಸೂರು ಉತ್ತರ ಜೀವರಕ್ಷಕ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಂಬುಲೆನ್ಸ್ ಚಾಲಕರು, ಅನಾಥ ಶವಗಳಿಗೆ ಮುಕ್ತಿದಾಯಕರಾದ ಆಶಾ ಅವರನ್ನು ಗೌರವಿಸಲಾಯಿತು. ಬೋಳಾರ್, ಶ್ರೀಧರ್, ರಾಜಶೇಖರ ಕದಂಬ, ಯಶಸ್ವಿ ಸೋಮಶೇಖರ್, ಜಗದೀಶ್, ವೀರರಾಜೇಂದ್ರ, ಶಾರದ ಶಿವಲಿಂಗಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಶ್ರೀರಾಂಪುರದಲ್ಲಿ ಮೈಸೂರು ಬ್ಯಾಂಕ್ ಕಾಲೋನಿ ನಿವಾಸಿಗಳ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘದಿಂದ ಸ್ವಚ್ಛತಾ ಅಭಿಯಾನ ನಡೆಯಿತು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ಖಂಡಿಸಿ ಶತದಿನ ಪೂರೈಸಿದ ಕಾವೇರಿ ಕ್ರಿಯಾ ಸಮಿತಿ ಧರಣಿ

ಕನ್ನಡಪರ ಸಂಘಟನೆಗಳು, ಸಾಹಿತಿಗಳು, ರೈತರು, ಕಿರುತೆರೆ ಕಲಾವಿದರು ಭಾಗಿ

ಮೈಸೂರು,ಫೆ.14(ಎಂಟಿವೈ)–ತಮಿಳುನಾಡಿಗೆ ಕಾವೇರಿ ನೀರು ಬಿಡುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಆದೇಶ ಖಂಡಿಸಿ ಹಾಗೂ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡದಂತೆ ಆಗ್ರಹಿಸಿ ಮೈಸೂರಿನಲ್ಲಿ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಪ್ರತಿಭಟನೆ ಶತದಿನ ಪೂರೈಸಿದೆ.

ಮೈಸೂರಿನ ದೊಡ್ಡಗಡಿಯಾರ ವೃತ್ತದ ಸಮೀಪ ಕಳೆದ 100 ದಿನಗಳಿಂದ ಪ್ರತಿಭಟನೆ ನಡೆಸುವ ಮೂಲಕ ಕಾವೇರಿ ನೀರು ನಮ್ಮ ಆಸ್ತಿ ಎಂದು ಪ್ರತಿಪಾದಿಸಿದ್ದ ಹೋರಾಟಗಾರರು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಏಕಪಕ್ಷೀಯವಾಗಿ ತೀರ್ಪು ನೀಡುತ್ತಿದೆ. ಮಳೆ ಕೊರತೆಯಿಂದಾಗಿ ರಾಜ್ಯದ ಜಲಾಶಯಗಳಲ್ಲಿ ನೀರಿನ ಸಂಗ್ರಹ ಪ್ರಮಾಣ ಕ್ಷೀಣಿಸಿದ್ದರೂ ಪದೇ ಪದೇ ತಮಿಳುನಾಡಿಗೆ ನೀರು ಬಿಡುವಂತೆ ಆದೇಶ ನೀಡುವ ಮೂಲಕ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿ ನಡೆಸಿದ ಪ್ರತಿಭಟನೆಯಲ್ಲಿ ದಿನಕ್ಕೊಂದು ಸಂಘಟನೆಗಳ ಕಾರ್ಯಕರ್ತರು, ಮುಖಂಡರು ಪಾಲ್ಗೊಂಡು ಬೆಂಬಲ ನೀಡಿದ್ದರು.

ಕಾವೇರಿ ನೀರಿನ ಹೋರಾಟಕ್ಕೆ ಶತದಿನ ಸಂದ ಹಿನ್ನೆಲೆಯಲ್ಲಿ ಬುಧವಾರ ನಡೆದ 100ನೇ ದಿನದ ಪ್ರತಿಭಟನೆಯಲ್ಲಿ ಕನ್ನಡಪರ ಸಂಘಟನೆಗಳ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರು, ಸಾಹಿತಿಗಳು, ರೈತ ಮುಖಂಡರು, ಕಿರುತೆರೆ ನಟಿ ಸೇರಿದಂತೆ ನೂರಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ಮೂಲಕ ಶತದಿನ ಹೋರಾಟಕ್ಕೆ ಸಾಕ್ಷಿಯಾದರು.



ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡದಂತೆ ಹಾಗೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಖಂಡಿಸಿ, ಮೈಸೂರಿನ ಪುರಭವನದ ಬಳಿ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಪ್ರತಿಭಟನೆ ಬುಧವಾರ 100ನೇ ದಿನಕ್ಕೆ ಕಾಲಿಟ್ಟಿತು.

ರಾಜ್ಯದಲ್ಲಿ ಈ ಬಾರಿ ಮಳೆ ಕೊರತೆ ತೀವ್ರಗೊಂಡಿದ್ದು, ಬರಗಾಲದಿಂದಾಗಿ ಜಲಾಶಯಗಳಲ್ಲಿ ನೀರಿನ ಕೊರತೆ ಉಂಟಾಗಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗುವ ಸಾಧ್ಯತೆ ಇದೆ. ಜಾನುವಾರುಗಳಿಗೆ ಕುಡಿಯುವ ನೀರು ಪೂರೈಸಲು ಕಷ್ಟಸಾಧ್ಯವಾಗಲಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಪದೇ ಪದೇ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವಂತೆ ಆದೇಶಿಸುತ್ತಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಕಾವೇರಿ ನೀರು ಹಂಚಿಕೆ ವಿವಾದಕ್ಕೆ ಶಾಶ್ವತ ಪರಿಹಾರ ಸಿಗಬೇಕೆಂಬ ಉದ್ದೇಶದಿಂದ ಸತತ 100 ದಿನ ಪ್ರತಿಭಟನೆ ನಡೆಸುತ್ತಿದ್ದರೂ, ಜನಪ್ರತಿನಿಧಿಗಳು, ಆಡಳಿತ ಪಕ್ಷಗಳ ಶಾಸಕರು, ಅಧಿಕಾರಿಗಳು ಬಂದು ಮನವಿ ಸ್ವೀಕರಿಸದಿರುವುದು ಖಂಡನೀಯ. 'ಕಾವೇರಿ ನಮ್ಮದು' ಘೋಷಣೆಯೊದಿಗೆ ನಡೆಸಿದ ಪ್ರತಿಭಟನೆಯ ಕೂಗು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಣ್ಣು ತೆರೆಸಲಾಗಿಲ್ಲ. ಕನ್ನಡಿಗರ ಆಕ್ರೋಶ ಹಾಗೂ ಹೋರಾಟದ ಕೂಗು ಸಂಬಂಧಪಟ್ಟವರಿಗೆ ತಲುಪಲು ಇನ್ನೆಷ್ಟು ದಿನ ಹೋರಾಟ ಮಾಡಬೇಕು ಎಂಬ ಪ್ರಶ್ನೆ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಬೆಂಬಲ ಕಾವೇರಿ ಹೋರಾಟಕ್ಕೆ ಇನ್ನಷ್ಟು ಬೇಕಾಗಿದೆ ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಇತಿಹಾಸ ತಜ್ಞ ಪ್ರೊ.ಪಿ.ವಿ.ನಂಜನಂಜರಾಜ ಅರಸ್, ಸಾಹಿತಿ ಬನ್ನೂರು ಕೆ.ರಾಜು, ಮುಖಂಡ ಹೆಚ್ ಕೆ ರಾಮು, ಡಾ.ರಾಜ್ ಅಭಿಮಾನಿಗಳ ಬಳಗದ ಅಧ್ಯಕ್ಷ ರಾಮೇಗೌಡ, ಪಾಲಿಕೆ ಮಾಜಿ ಸದಸ್ಯ ಎಂ.ವಿ.ರಾಮಪ್ರಸಾದ್, ಕಾವೇರಿ ಕ್ರಿಯಾಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಮೆಲ್ಲಹಳ್ಳಿ ಮಹದೇವಸ್ವಾಮಿ, ಎಸ್.ಬಾಲಕೃಷ್ಣ, ತೇಜೇಶ್ ಲೋಕೇಶ್‌ಗೌಡ, ನಂಜುಂಡಸ್ವಾಮಿ, ಮಂಡ್ಯ ರೈತ ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದ ಜಯರಾವ್, ಕಾರ್ಯದರ್ಶಿ ಬೋರಯ್ಯ, ನಾರಾಯಣಗೌಡ, ಹನುಮಂತೇಗೌಡ, ಸ.ರ.ಸುದರ್ಶನ್, ಹೊನ್ನೇಗೌಡ, ಆಟೋ ಮಹಾದೇವ, ವರಕೋಡು ಕೃಷ್ಣೇಗೌಡ, ಸಿಂಧುವಳ್ಳಿ ಶಿವಕುಮಾರ್, ರಾಜಶೇಖರ್, ಕೃಷ್ಣಪ್ಪ, ಹನುಮಂತಯ್ಯ, ಶಿವಲಿಂಗಯ್ಯ, ನೇಹಾ, ಪುಷ್ಪಾವತಿ, ಕೆ.ಮಂಜುಳಾ, ನಳಿನಿ, ನಾಗರಾಜ್, ಮಹಾದೇವಸ್ವಾಮಿ, ಶುಭಶ್ರೀ, ನೇಹಾ, ಪ್ರಮೋದ್, ಭಾಗ್ಯಮ್ಮ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

> "ಕಾವೇರಿ ನದಿ ಕನ್ನಡಿಗರ ಆಸ್ತಿ. ಕನ್ನಡಿಗರ ಅಸ್ಮಿತೆಯೂ ಆಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ಜಲ ಸಂಪತ್ತಿನ ಮೇಲೆ ನೆರೆ ರಾಜ್ಯ ಹಕ್ಕು ಚಲಾಯಿಸಲು ಮುಂದಾಗಿರುವುದು ಖಂಡನೀಯ. ರಾಜಕೀಯ ಹಿತಾಸಕ್ತಿಗಾಗಿ ನೀರು ನಿರ್ವಹಣಾ ಪ್ರಾಧಿಕಾರ ತಮಿಳುನಾಡಿನ ಪರ ಆದೇಶಿಸುತ್ತಿದೆ. ರಾಜ್ಯದಲ್ಲಿನ ಬರದ ಪರಿಸ್ಥಿತಿ ಅವಲೋಕಿಸದೇ ದ್ರೋಹ ಬಗೆಯುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಜಲಾಶಯದಿಂದ ಯಾವುದೇ ಕಾರಣಕ್ಕೂ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ. ರಾಜ್ಯದ ಜನರ ಹಿತಾಸಕ್ತಿ ಬಲಿಕೊಟ್ಟು ಮತ್ತೆ ನೀರು ಬಿಡುಗಡೆ ಮಾಡಿದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರ ನೀರು ನಿರ್ವಹಣಾ ಪ್ರಾಧಿಕಾರದ ಆದೇಶಕ್ಕೆ ಮಣಿಯದೇ ದೃಢ ನಿಲುವು ತಾಳಬೇಕು. ಸುಗ್ರೀವಾಜ್ಞೆ ಹೊರಡಿಸಿ ನೀರು ಬಿಡುಗಡೆ ಆದೇಶ ಧಿಕ್ಕರಿಸಬೇಕು. –ಪ್ರತಿಭಟನಾಕಾರರು.



ಮೈಸೂರು ವಿಶ್ವವಿದ್ಯಾನಿಲಯದ ನೂತನ ಸಿಂಡಿಕೇಟ್ ಸದಸ್ಯ ಮಹದೇಶ್ ಅವರನ್ನು ದೈವಜ್ಞರಾದ ಶ್ರೀಪತಿ ತಂತ್ರಿ ಗುರುಗಳು ಇತ್ತೀಚೆಗೆ ಸನ್ಮಾನಿಸಿ, ಆಶೀರ್ವದಿಸಿದರು. ಈ ವೇಳೆ ಮಹದೇವ ಪಾಂಡೆ, ಜಗನ್ನಾಥ್, ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಜೆ.ಯೋಗೇಶ್ ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೇಟ್ಸ್‌ಗಳಿಗೆ ಟ್ರಾಕ್‌ಶೂಟ್ ವಿತರಣೆ



ಮೈಸೂರು, ಫೆ.14–ಪುಣೆಯ ಶ್ರೀ ಶಿವ ಛತ್ರಪತಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಫೆ.17 ರವರೆಗೆ ನಡೆಯುವ 44ನೇ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಶಿಪ್ ಕ್ರೀಡಾಕೂಟದಲ್ಲಿ ನಗರದ ಕ್ರೀಡಾಪಟುಗಳು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ. ಮೈಸೂರಿನ ಅಥ್ಲೆಟ್ಸ್‌ಗಳಾದ ಎಂ.ಯೋಗೇಂದ್ರ (ತಂಡದ ನಾಯಕ), ವಿಜಯಶಂಕರ್, ಡಾ.ಕೆ.ಎಸ್.ರಘುನಂದನ್, ಎಚ್.ಎಲ್.ಚಂದ್ರಶೇಖರ್, ಎನ್.ಮಂಜು, ಎಸ್.ಅಮರನಾಥ್, ಎಸ್.ಮಂಜುನಾಥ, ಶ್ರೀಕಂಠೇಶ್, ಜಿ.ಶ್ರೀನಿವಾಸಯ್ಯ, ನರಸಿಂಹ ಪ್ರಸಾದ್, ಶಶಿಧರ್, ಚಂದ್ರಶೇಖರ್, ಅರ್ಜುನ, ಶೋಭಾ, ಕುಸುಮ, ಸುಬ್ಬಲಕ್ಷ್ಮಿ ಬಿ.ಸಿ.ಪಾರ್ವತಿ, ಸುಜಾತ, ಮಂಜಮ್ಮ ಮತ್ತು ಜಯಂತಿ ಪ್ರತಿನಿಧಿಸುತ್ತಿದ್ದಾರೆ. ಮಾಸ್ಟರ್ಸ್ ಅಥ್ಲೆಟಿಕ್ ಕ್ಲಬ್ ಏರ್ಪಡಿಸಿದ್ದ ಸರಳ ಸಮಾರಂಭದಲ್ಲಿ ಇವರಿಗೆ ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಕೆ.ನರಸಿಂಹಮೂರ್ತಿ ಟ್ರಾಕ್‌ಶೂಟ್‌ಗಳನ್ನು ವಿತರಿಸಿ, ಶುಭ ಹಾರೈಸಿದರು. ಉಪಾಧ್ಯಕ್ಷ ಗಣೇಶ್, ಸೋಮಶೇಖರ್, ಸಂಘದ ಕಾರ್ಯಕಾರಿ ಸಮಿತಿಯ ಚಂದ್ರಶೇಖರ್, ಸೋಮಶೇಖರ್, ಮಹೇಶ್, ನಾಣಯ್ಯ, ಸುಬ್ಬಶೆಟ್ಟಿ, ಮಹದೇವಯ್ಯ ಇದ್ದರು. ಕಾರ್ಯದರ್ಶಿ ಪಿ.ಜಿ.ಸತ್ಯನಾರಾಯಣ್, ಕ್ರೀಡಾಪಟುಗಳನ್ನು ಪರಿಚಯಿಸಿ, ಸ್ವಾಗತಿಸಿದರು. ಟಿ.ಕೆ.ಕುಸುಮಾ ವಂದಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ಮೈಸೂರು,ಫೆ.14–ಮೈಸೂರಿನ ಕೃಷಿಕ್ ಸರ್ವೋದಯ ಫೌಂಡೇಷನ್‌ನಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಾದ ಎಸ್‌ಬಿಐ ಹಾಗೂ ಇತರೆ ಗ್ರಾಮೀಣ ಬ್ಯಾಂಕುಗಳ ಪ್ರೊಬೇಷನರಿ ಆಫೀಸರ್ಸ್ ಮತ್ತು ಕ್ಲರಿಕಲ್ ಹುದ್ದೆಗಳಿಗೆ ತರಬೇತಿ ಹಮ್ಮಿಕೊಳ್ಳಲಾಗಿದೆ. ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿಗಳು ಫೆ.19ರಿಂದ ಪ್ರಾರಂಭವಾಗಲಿದ್ದು, ಆಸಕ್ತ ಅಭ್ಯರ್ಥಿಗಳು ಕೃಷಿಕ್ ಭವನ, ಸಿಎ–25, ಜ. ಕೆ.ಎಸ್.ತಿಮ್ಮಯ್ಯ ರಸ್ತೆ, ವಿಜಯನಗರ 2ನೇ ಹಂತ ಇಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8296031570, 9945752592 ಸಂಪರ್ಕಿಸಬಹುದು.

ಉಚಿತ ಮೂಳೆ ಖನಿಜ ಸಾಂದ್ರತಾ ಪರೀಕ್ಷಾ ಶಿಬಿರ

ಮೈಸೂರು,ಫೆ14–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಫೆ.15ರಂದು ಬೆಳಗ್ಗೆ 9.30ರಿಂದ ಮ. 1ರವರೆಗೆ ಉಚಿತ ಮೂಳೆ ಖನಿಜ ಸಾಂದ್ರತಾ ಪರೀಕ್ಷಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9538367282, 6360300659

ಮುಳ್ಳೂರಲ್ಲಿ ಶ್ರೀ ಆಲದಮ್ಮ ಶಂಭುಲಿಂಗೇಶ್ವರ ದೇವಸ್ಥಾನದ 13ನೇ ವಾರ್ಷಿಕ ಮಹೋತ್ಸವ






ನಂಜನಗೂಡು ತಾಲೂಕು ಮುಳ್ಳೂರು ಗ್ರಾಮದ ಶ್ರೀ ಆಲದಮ್ಮ ಶಂಭುಲಿಂಗೇಶ್ವರ ದೇವಸ್ಥಾನದ 13ನೇ ವಾರ್ಷಿಕೋತ್ಸವದ ಅಂಗವಾಗಿ ದೇವಸ್ಥಾನಕ್ಕೆ ಆಗಮಿಸಿದ ಎಲ್ಲಾ ಭಕ್ತಾದಿಗಳಿಗೂ ದೇವಾಲಯ ಸಮಿತಿಯ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಸುತ್ತೂರು, ಫೆ. 14– ನಂಜನಗೂಡು ತಾಲೂಕು ಮುಳ್ಳೂರು ಗ್ರಾಮದ ಶ್ರೀ ಆಲದಮ್ಮ ಶಂಭುಲಿಂಗೇಶ್ವರ ದೇವಸ್ಥಾನದ 13ನೇ ವಾರ್ಷಿಕೋತ್ಸವವು ಶ್ರೀ ಆಲದಮ್ಮ ಶಂಭುಲಿಂಗೇಶ್ವರ ದೇವಸ್ಥಾನ ಸೇವಾ ಸಮಿತಿ, ಗ್ರಾಮಸ್ಥರು ಹಾಗೂ ಗ್ರಾಮದ ಶ್ರೀ ಬಸವೇಶ್ವರ ಯುವಕ ಸಂಘ, ಶ್ರೀ ಬಸವ ಸೇವಾ ಸಮಿತಿ, ಮತ್ತು ದೇವಾಲಯದ ಒಕ್ಕಲುತನದವರ ವತಿಯಿಂದ ವಿಜೃಂಭಣೆಯಿಂದ ನೆರವೇರಿತು.

ಮುಂಜಾನೆಯಿಂದಲೇ ದೇವಾಲಯದಲ್ಲಿ ಮೂರ್ತಿಗೆ ವಿಶೇಷ ಅಭಿಷೇಕ, ಪುಷ್ಪಾಲಂಕಾರ ಸೇರಿದಂತೆ ಹಲವಾರು ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಇದೇ ವೇಳೆ 5 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಭಕ್ತಾದಿಗಳು ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದು ತಮ್ಮ ಅರಿಕೆ ಕಾಣಿಕೆಗಳನ್ನು ದೇವರಿಗೆ ಅರ್ಪಿಸಿ ಪುನೀತರಾದರು. ಇದೇ ವೇಳೆ ದೇವಸ್ಥಾನಕ್ಕೆ ಆಗಮಿಸಿದ ಎಲ್ಲಾ ಭಕ್ತಾದಿಗಳಿಗೂ ದೇವಾಲಯ ಸಮಿತಿಯ ವತಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ದೇವಾಲಯ ಸಮಿತಿ ಸದಸ್ಯರಾದ ದೇವಲಾಪುರ ಶಿವಸ್ವಾಮಿ, ಆಲತ್ತೂರು ಮಹೇಶ್, ಹೊಸಕೋಟೆ ಸುಂದರ್, ನಾಗಣಾಪುರ ರಮೇಶ್, ರಾಂಪುರ ರಾಜಶೇಖರ್, ಯಡಳ್ಳಿ ಶಿವಪಾದು, ಶಿವಣ್ಣ, ಜವರನಾಯಕ, ಮಹೇಶ್, ದೇವಾಲಯದ ಒಕ್ಕಲಿನವರು ಹಾಗೂ ಮುಳ್ಳೂರು ಗ್ರಾಮದ ಎಲ್ಲಾ ಮುಖಂಡರು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.2.2024 ಗುರುವಾರ, ಮಳೆ ನಕ್ಷತ್ರ: ಧನಿಷ್ಠ 6.2.2024 ರಿಂದ 19.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಅರ್ಕಧಾಮ :** ಶ್ರೀ ಅರ್ಕ ಮಹಾ ಗಣಪತಿ ಪ್ರತಿಷ್ಠಾಪನೆ ಹಾಗೂ ಬ್ರಹ್ಮ ಕಲಶೋತ್ಸವ, ಬೆಳಗ್ಗೆ 8 ಗಂಟೆಗೆ ಸಹಸ್ರಮೋದಕ ಗಣಹೋಮ, ರುದ್ರಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಾಯಂಕಾಲ ಶ್ರೀ ಅರ್ಕ ಮಹಾಗಣಪತಿಯ ಸಹಸ್ರ ನಾಮಾರ್ಚನೆ. ಸ್ಥಳ: ಕಣಿಯನಹುಂಡಿ ಗೇಟ್, ಗದ್ದಿಗೆ ಮುಖ್ಯ ರಸ್ತೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಉಚಿತ ಮೂಳೆ ಖನಿಜ ಸಾಂದ್ರತಾ ಪರೀಕ್ಷಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಸಂಚಲನ ಮೈಸೂರು, ಪ್ರವಾಸೋದ್ಯಮ ಇಲಾಖೆ (ಬೆಂಗಳೂರು), ಡ್ರೀಮ್ ಬಜ್ಜ್ ಫೌಂಡೇಷನ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ (ಬೆಂಗಳೂರು) :** ಸಂಚಲನ ಮಕ್ಕಳ ನಾಟಕೋತ್ಸವ, ಜಾನಪದ ಉತ್ಸವ, ಅಪೂರ್ವ ಕೆ ಮತ್ತು ತನಿಸ್ವರ ಅವರಿಂದ ಎಲ್ಲೆಡೆ ಸದಾ ವಸಂತಕಾಲ ನಳನಳಿಸಲಿ ಕುರಿತು ನೃತ್ಯ ಪ್ರದರ್ಶನ, ರಚನೆ : ಎನ್.ಎಸ್. ಲಕ್ಷ್ಮಿನಾರಾಯಣ ಭಟ್, ಸಂಗೀತ : ಎಸ್.ಕೆ. ನಾರಾಯಣ; ಸಂಚಲನ ಮಕ್ಕಳ ರಂಗ ತಂಡದವರಿಂದ ಕೆಂಪು ಹೂ ನಾಟಕ ಪ್ರದರ್ಶನ, ರಚನೆ : ಸಫ್ದರ್ ಹಶ್ಮಿ, ಕನ್ನಡಕ್ಕೆ : ನಟರಾಜ್ ಹೊನ್ನವಳ್ಳಿ, ಸಹ ನಿರ್ದೇಶನ : ಕೆ. ಅಪೂರ್ವ, ನಿರ್ದೇಶನ : ಎಂ.ಹೆಚ್. ಭಾವನ, ರಂಗ ಗರಡಿ ಹುಣಸೂರು ತಂಡದವರಿಂದ ಪಾಪು–ಬಾಪು, ರಚನೆ : ಬೊಳುವಾರು ಮಹಮ್ಮದ್ ಕುಂಞ, ನಿರ್ದೇಶನ: ಡಾ. ಶ್ರೀಪಾದ ಭಟ್, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ. ಹೆಚ್.ವಿ. ನಾಗರಾಜರಾವ್, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, 10.00ಎಂ.ಡಿ.ಸುಮತಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆ– ರಶ್ಮಿ ವಿ.ರಾವ್, 4.30 ವಿಜ್ಞಾನ ಭಾರತಿ– ನಕ್ಷತ್ರ ವೀಕ್ಷಣೆ ಒಂದು ವೈಜ್ಞಾನಿಕ ಹವ್ಯಾಸ–ಈ ಬಗ್ಗೆ ಭಾರತೀಯ ಖಗೋಳ ಭೌತ ವಿಜ್ಞಾನ ಸಂಸ್ಥೆಯ ಸಹಯೋಜನಾಧಿಕಾರಿ ಅಮೋಘ ವರ್ಷ ಎನ್. ಅವರೊಂದಿಗೆ ಸಂದರ್ಶನ. ಸಂದರ್ಶಕರು – ಜಿ. ಶಾಂತಕುಮಾರ್, 6.50 ಕೃಷಿರಂಗ–ರೇಷ್ಮೆ ಆಧಾರಿತ ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದದಲ್ಲಿ ಭಾಗವಹಿಸುತ್ತಾರೆ ಎಸ್.ಬಿ. ನವೀನ್ ಹಾಗೂ ಇ.ಎಸ್. ರಜನಿ, 8.00 ಯುವವಾಣಿ– ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಾಮಾನ್ಯ ಜ್ಞಾನ ಕುರಿತು ರಸಪ್ರಶ್ನೆ ಕಾರ್ಯಕ್ರಮ. ಪ್ರಸ್ತುತಿ– ನಿವೇದಿತಾ ಹೆಚ್., 10.00 ನಾಟಕ, 10.30 ಸವಿನೆನಪು

ಎನ್‌ಆರ್ ಮೊಹಲ್ಲಾ ಸಂಗೀತಾ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ
ತ್ಯಾಗರಾಜರು, ಪುರಂದರದಾಸರ ಆರಾಧನಾ ಮಹೋತ್ಸವ

ಮೈಸೂರು, ಫೆ.14-ಮೈಸೂರಿನ ಎನ್‌ಆರ್ ಮೊಹಲ್ಲಾ ಸಂಗೀತಾ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಅಲ್ಲಿನ ಶ್ರೀ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ಫೆ.16ರಿಂದ 18ರವರೆಗೆ ಶ್ರೀ ತ್ಯಾಗರಾಜರ ಹಾಗೂ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ ನಡೆಯಲಿದೆ.

ಫೆ.16ರಂದು ಸಂಜೆ 6.30ಕ್ಕೆ ವಿದುಷಿ ಕೃತಿ ವಿಠಲ್ ಅವರಿಂದ ಗಾಯನ,



ಕೃತಿ ವಿಠಲ್

ವಿದ್ವಾನ್ ಕೇಶವಮೂರ್ತಿ (ಪಿಟೀಲು), ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ (ಮೃದಂಗ), ವಿದ್ವಾನ್ ಶರತ್ ಕೌಶಿಕ್ (ಘಟಂ) ನಡೆಯಲಿದೆ.

ಫೆ.17ರಂದು ಸಂಜೆ 6.30ಕ್ಕೆ ವಿದ್ವಾನ್ ಸಂದೀಪ್ ನಾರಾಯಣ್ ಅವರಿಂದ ಗಾಯನ ನಡೆಯಲಿದ್ದು, ವಿದ್ವಾನ್ ಬಿ.ಅನಂತಕೃಷ್ಣನ್ (ಪಿಟೀಲು), ವಿದ್ವಾನ್ ತುಮಕೂರು ಬಿ.ರವಿಶಂಕರ್ (ಮೃದಂಗ), ವಿದ್ವಾನ್ ಜೆ.ಎಸ್. ರಾಮಾನುಜನ್ (ಘಟಂ) ಸಾಥ್ ನೀಡಲಿದ್ದಾರೆ. ಫೆ.18ರಂದು ಬೆಳಗ್ಗೆ 9ರಿಂದ 11ರವರೆಗೆ ನಾದಸ್ವರ ಮತ್ತು ಶ್ರೀ ತ್ಯಾಗರಾಜರ, ಶ್ರೀ ಪುರಂದರದಾಸರ ಕೃತಿಗಳನ್ನು ಹಾಡಲು ಅವಕಾಶವಿರುತ್ತದೆ. ಬೆಳಗ್ಗೆ 11ರಿಂದ 12ರವರೆಗೆ ವಿದ್ವಾಂಸರಾದ ಎಸ್. ರಾಮಪ್ರಸಾದ್ ಮತ್ತು ಡಾ.ರಮಾ ವಿ. ಬೆಣ್ಣೂರು ಅವರಿಗೆ ಸನ್ಮಾನ ಏರ್ಪಡಿಸಲಾಗಿದೆ. ಮಧ್ಯಾಹ್ನ 12ರಿಂದ 1.15ರವರೆಗೆ ಶ್ರೀ ತ್ಯಾಗರಾಜ ಪಂಚರತ್ನ ಕೃತಿಗಳ ಗೋಷ್ಠಿ ಗಾಯನ, ಮಧ್ಯಾಹ್ನ 1.15ಕ್ಕೆ ಮುಕ್ತಾಯ ಸಮಾರಂಭ ಮತ್ತು ಮಂಗಳಾರತಿ, ಮಧ್ಯಾಹ್ನ 1.30ಕ್ಕೆ ಭೋಜನ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗವಿದೆ.

ಫೆ.17ರಿಂದ ಮೈಸೂರಲ್ಲಿ ಆರಾಧನಾ ಮಹೋತ್ಸವ



ಸುದ್ದಿಗೋಷ್ಠಿಯಲ್ಲಿ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಮಾತನಾಡಿದರು.

ಮೈಸೂರು,ಫೆ.14(ಜಿಎ)-ಸುರಭಿ ಗಾನ ಕಲಾಮಂದಿರ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಪುರಂದರ, ತ್ಯಾಗರಾಜ ಆರಾಧನಾ ಮಹೋತ್ಸವವನ್ನು ಫೆ.17 ಮತ್ತು 18ರಂದು ಒಂಟಿಕೊಪ್ಪಲ್ ಕಾಳಿದಾಸ ರಸ್ತೆಯ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಸಂಗೀತ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 17ರಂದು ಮಧ್ಯಾಹ್ನ 3.30ಕ್ಕೆ ತ್ಯಾಗರಾಜರ ಸಮಗ್ರ ದಿವ್ಯನಾಮ, ಉತ್ಸವ ಸಂಪ್ರದಾಯ ಕೀರ್ತನೆಗಳ ಪ್ರಸ್ತುತಿ ಇರುವ ಶ್ರೀರಾಮ ದಿವ್ಯ ನಾಮ ಗಾನ ಯಜ್ಞೋತ್ಸವ ನಡೆಯಲಿದೆ. ಫೆ.18ರಂದು ಬೆಳಗ್ಗೆ 8ಕ್ಕೆ ಸುರಭಿ ವಿದ್ಯಾರ್ಥಿಗಳಿಂದ ಪುರಂದರ ನವರತ್ನ ಕೃತಿಗಳ ಗೋಷ್ಠಿ ಗಾಯನ, 9ಕ್ಕೆ ತ್ಯಾಗರಾಜ ಪಂಚರತ್ನ ಕೃತಿಗಳ ಗೋಷ್ಠಿ, 10.15ಕ್ಕೆ ಸನ್ಮಾನ ಸಮಾರಂಭ, ಪುಸ್ತಕ ಲೋಕಾರ್ಪಣೆ ಮತ್ತು ಸನ್ಮಾನ ಕಾರ್ಯಕ್ರಮವಿದ್ದು, ಡಾ.ರಮಾ ವಿ.ಬೆಣ್ಣೂರ್ ಅತಿಥಿಗಳಾಗಿರುವರು. ಪಿಟೀಲು ವಾದಕ ಎಚ್.ಕೆ. ನರಸಿಂಹಮೂರ್ತಿ ಮತ್ತು ವರ್ಣಚಿತ್ರ ಕಲಾವಿದೆ ಶ್ರೀಮತಿ ಶಂಕರ್ ಅವರನ್ನು ಅಭಿನಂದಿಸಲಾವುದು ಎಂದರು. ಬೆಳಗ್ಗೆ 11ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ಇರಲಿದ್ದು, ಡಾ.ಎಸ್.ವಿ. ಸಹನಾ-ವೀಣಾ ವಾದನ, ಎಚ್.ಎಸ್. ಸುಧೀಂದ್ರ- ಮೃದಂಗ ಮತ್ತು ಜಿ.ಎಸ್. ರಾಮಾನುಜನ್-ಘಟಂನಲ್ಲಿ ಸಾಥ್ ನೀಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ವೀಣಾ ಮಂಜುನಾಥ್, ಮಂಜುನಾಥ್, ವಿಜಯ ಸರಳಾಯ, ಕೇಶವ ಸರಳಾಯ ಉಪಸ್ಥಿತರಿದ್ದರು.



ಜಯಪುರ ಹೋಬಳಿ ದೂರ ಗ್ರಾಮದಲ್ಲಿ ಫೆ.19, 20ರಂದು ಮಲೆಮಹದೇಶ್ವರ ಜಾತ್ರೆ ಹಾಗೂ 27 ಮತ್ತು 28ರಂದು ಗ್ರಾಮದೇವತೆ ದುಗ್ಗಲಮ್ಮ ಜಾತ್ರಾ ಮಹೋತ್ಸವ ನಡೆಯಲಿದ್ದು, ಮುಂಜಾಗ್ರತ ಕ್ರಮವಾಗಿ ಜಯಪುರ ಪೊಲೀಸ್ ಠಾಣಾ ಪಿಎಸ್‌ಐ ಸುರೇಶ್ ಬೋಪಣ್ಣ ನೇತೃತ್ವದಲ್ಲಿ ದೂರ ಗ್ರಾಮದ ಎಲ್ಲಾ ಸಮುದಾಯಗಳ ಮುಖಂಡರ ಶಾಂತಿ ಸಭೆ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ ನಡೆಯಿತು. ಗ್ರಾಮದಲ್ಲಿ ನಡೆಯುವ ಎರಡು ಜಾತ್ರೆಗಳನ್ನು ಸೌಹಾರ್ದಯುತವಾಗಿ ಆಚರಿಸಬೇಕು.ಅಹಿತಕರ ಘಟನೆಗಳಿಗೆ ಅವಕಾಶ ಕೊಡಬಾರದು ಎಂದು ಗ್ರಾಮದ ಮುಖಂಡರಿಗೆ ಪೊಲೀಸರು ತಿಳಿಸಿದರು.

ಫೆ.18, ವಧು-ವರರ ಮುಖಾಮುಖಿ ಸಮಾವೇಶ

ಮೈಸೂರು,ಫೆ.14-ಜೆಎಸ್‌ಎಸ್ ವಿವಾಹ ವೇದಿಕೆಯ ಆಶ್ರಯದಲ್ಲಿ ಫೆ.18ರಂದು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದ ಸಭಾಂಗಣದಲ್ಲಿ ವಧು-ವರರ ಸಮಾವೇಶ ಏರ್ಪಡಿಸಲಾಗಿದೆ. ಜೆಎಸ್‌ಎಸ್ ವಿವಾಹ ವೇದಿಕೆಯಲ್ಲಿ ನೋಂದಾಯಿಸಿಕೊಂಡವರಿಗೆ ಮಾತ್ರ ಪ್ರವೇಶವಿರುತ್ತದೆ. ಈವರೆಗೆ ನೋಂದಾಯಿಸಿಕೊಂಡಿಲ್ಲದವರು ಸಮಾವೇಶದ ದಿನದಂದು ನೋಂದಾಯಿಸಿಕೊಳ್ಳಬಹುದಾಗಿದೆ. ಸಮಾವೇಶದ ಸಮಯ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನಡೆಯುತ್ತದೆ. ಹೆಚ್ಚಿನ ಮಾಹಿತಿಗೆ ದೂ. 0821-2430322, 9611070674 ಸಂಪರ್ಕಿಸಬಹುದು.

ನೀರು ಅಮೂಲ್ಯ; ಪೋಲು ಮಾಡಬೇಡಿ...
ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಪ್ರಭಾರ ಉಪ ಕೃಷಿ ನಿರ್ದೇಶಕ ಡಾ.ಧನಂಜಯ ರೈತರಿಗೆ ಸಲಹೆ



ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ ವತಿಯಿಂದ ಬನ್ನೂರು ಹೋಬಳಿಯ ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಹೆಚ್.ಎಸ್.ಮಹದೇವಪ್ರಸಾದ ಸಭಾಂಗಣದಲ್ಲಿ ನಡೆದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಪ್ರಭಾರ ಉಪ ಕೃಷಿ ನಿರ್ದೇಶಕ ಡಾ.ಧನಂಜಯ ಉದ್ಘಾಟಿಸಿದರು.

ಮೈಸೂರು, ಫೆ.14-ರೈತರು ನೀರು ಪೋಲಾಗುವುದನ್ನು ತಡೆಯಲು ಸೂಕ್ಷ್ಮ ನೀರಾವರಿ, ಹನಿ ನೀರಾವರಿ ಪದ್ಧತಿಗಳನ್ನು ಅನುಸರಿಸಿ 'ಪ್ರತಿ ಹನಿ ಅಧಿಕ ಬೆಳೆ' ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ ರೈತರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಪ್ರಭಾರ ಉಪ ಕೃಷಿ ನಿರ್ದೇಶಕ ಡಾ.ಧನಂಜಯ ಬಿ.ಎಸ್. ರೈತರಿಗೆ ಕರೆ ನೀಡಿದರು.

ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ ವತಿಯಿಂದ ಬನ್ನೂರು ಹೋಬಳಿಯ ಯಾಚೇನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಹೆಚ್.ಎಸ್. ಮಹದೇವಪ್ರಸಾದ ಸಭಾಂಗಣದಲ್ಲಿ ನಡೆದ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯ ಯೋಜನೆಯಡಿ 'ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಸೂಕ್ಷ್ಮ ನೀರಾವರಿ ಮತ್ತು ರಸಾವರಿ ತಾಂತ್ರಿಕತೆಗಳ ಅಳವಡಿಕೆ ಮೂಲಕ ಅಧಿಕ ಲಾಭ' ವಿತ್ತೀಯ ಕುರಿತ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭತ್ತದ ಬೆಳೆಗೆ ಕಟ್ಟುನೀರು ಪದ್ಧತಿಯನ್ನು ಅನುಸರಿಸಿರುವುದರಿಂದ ನೀರಿನ ಮಿತಬಳಕೆಯಾಗಿ ಉತ್ತಮ ಇಳುವರಿ ಪಡೆದಿರುವ ರೈತರು ಇದ್ದು, ಅವರನ್ನು ಅನುಸರಿಸುವ ಮೂಲಕ ಹೆಚ್ಚಿನ ಇಳುವರಿ ಪಡೆಯುವತ್ತ ಗಮನಹರಿಸಬೇಕು ಎಂದು ರೈತರಿಗೆ ಸಲಹೆ ನೀಡಿದರು.

ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಯಾಚೇನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶಂಕರೇಗೌಡ ಮಾತನಾಡಿ, ರೈತರು ಇಸ್ರೇಲ್ ದೇಶದ ಕೃಷಿಯನ್ನು ಮಾದರಿಯಾಗಿಟ್ಟುಕೊಂಡು ಆಧುನಿಕ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ಸುಸ್ಥಿರ ಕೃಷಿಯನ್ನು ಮಾಡಬೇಕು ಎಂದು ರೈತರಿಗೆ ಸಲಹೆ ನೀಡಿದರು.

ನೆಟಾಫಿನ್ ಸಂಸ್ಥೆಯ ಬೇಸಾಯ ಶಾಸ್ತ್ರಜ್ಞರಾದ ಅಂಜನಪ್ಪನವರು ಹನಿ ನೀರಾವರಿ ಪದ್ಧತಿಯಲ್ಲಿ ಕೃಷಿ ಬೆಳೆಗಳಿಗೆ ಹಾಗೂ ತೋಟಗಾರಿಕಾ ಬೆಳೆಗಳಿಗೆ ರಸಗೊಬ್ಬರ ನೀಡುವ ವಿಧಾನ ಹಾಗೂ ಹನಿ ನೀರಾವರಿ ಘಟಕಗಳ ನಿರ್ವಹಣೆ ಬಗ್ಗೆ ರೈತರಿಗೆ ತರಬೇತಿ ನೀಡಿದರು.

ಸಹಾಯಕ ತೋಟಗಾರಿಕಾ ಅಧಿಕಾರಿ ತಿರುವಂಕೂರ್ ಅರಸ್ ಅವರು ತೋಟಗಾರಿಕೆ ಇಲಾಖೆಯಲ್ಲಿ ರೈತರಿಗೆ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ನಿವೃತ್ತ ಕೃಷಿ ಅಧಿಕಾರಿಯಾದ ಸ್ವಾಮಿ ಮಾತನಾಡಿ, ರೈತರಿಗೆ ಮಣ್ಣಿನ ಫಲವತ್ತತೆ ಕಾಪಾಡಲು ರೈತರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಬನ್ನೂರು ರೈತ ಸಂಪರ್ಕ ಕೇಂದ್ರ ಕೃಷಿ ಅಧಿಕಾರಿ ವಿಶಾಲು ರೈತರಿಗೆ ಕೃಷಿ ಭಾಗ್ಯಯೋಜನೆ ಹಾಗೂ ಕೃಷಿ ಯಾಂತ್ರೀಕರಣ ಯೋಜನೆ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕರಾದ ಮಧುಲತಾ, ಹೆಚ್.ಆರ್.ರಾಜಶೇಖರ, ಬನ್ನೂರು ರೈತ ಸಂಪರ್ಕ ಕೇಂದ್ರದ ಆತ್ಮಸಿಬ್ಬಂದಿ ಶಿವರಾಮು, ಸಂಘದ ನಿರ್ದೇಶಕರು ಸೇರಿದಂತೆ ಜಿಲ್ಲೆಯ ವಿವಿಧ ಗ್ರಾಮಗಳ 100 ಜನ ರೈತರು ಭಾಗವಹಿಸಿದ್ದರು.

ರೈತರಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮ


ಮೈಸೂರು,ಫೆ.14-ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಫೆ.19ರಿಂದ 21ರವರೆಗೆ ತೆಂಗು ಮತ್ತು ಅಡಿಕೆ ಬೆಳೆಗಳಲ್ಲಿ ತಳಿ ಆಯ್ಕೆ, ಆಧುನಿಕ ಕೃಷಿ ಪದ್ಧತಿಗಳು, ಸೂಕ್ಷ್ಮನೀರಾವರಿ ಮತ್ತು ರಸಾವರಿ ತಾಂತ್ರಿಕತೆಗಳ ಅಳವಡಿಕೆ ಮೂಲಕ ಅಧಿಕ ಲಾಭ ಎಂಬ ವಿಷಯದ ಬಗ್ಗೆ ರೈತರು, ರೈತ ಮಹಿಳೆಯರಿಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ತರಬೇತಿಯಲ್ಲಿ ಭಾಗವಹಿಸುವ ರೈತರು, ರೈತಮಹಿಳೆಯರಿಗೆ ಊಟದ ವ್ಯವಸ್ಥೆಯನ್ನು ಒದಗಿಸಲಾಗುವುದು. ಆಸಕ್ತ ರೈತರು, ರೈತ ಮಹಿಳೆಯರು ತಮ್ಮ ಹೆಸರನ್ನು ಈ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರ ದೂರವಾಣಿ ಸಂಖ್ಯೆ 8277933180 ಗೆ ಕರೆ ಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು. ಮೈಸೂರು ಜಿಲ್ಲೆಯ 30 ರೈತರು/ರೈತಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂದು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರದ ಅನುದಾನ ಸಂಬಂಧ ಸಿದ್ದರಾಮಯ್ಯ ಬರೀ ಸುಳ್ಳು ಹೇಳುತ್ತಾರೆ
ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಲೇವಡಿ

ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯವನ್ನು ಆರ್ಥಿಕ ದುಸ್ಥಿತಿಗೆ ತಂದಿದ್ದಾರೆ. ನಾನು ಸುಳ್ಳು ಹೇಳಿದರೆ ರಾಜಕೀಯ ನಿವೃತ್ತಿ ಆಗುತ್ತೀನಿ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಅವರು ಹೇಳೋದೆಲ್ಲಾ ಸುಳ್ಳೇ. ಹಾಗೆ ಆದರೆ ಅವರು 10 ಬಾರಿ ನಿವೃತ್ತಿ ಪಡೆಯಬೇಕಾಗುತ್ತದೆ ಎಂದು ಕೇಂದ್ರ ಸಂಸದೀಯ ಸಚಿವ ಪ್ರಹ್ಲಾದ್ ಜೋಶಿ ಲೇವಡಿ ಮಾಡಿದ್ದಾರೆ.

ಹುಬ್ಬಳ್ಳಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸರಿಯಾಗಿ ಸರ್ಕಾರ ನಿರ್ವಹಿಸಲಾಗದೆ ಕೇಂದ್ರದತ್ತ ಬೊಟ್ಟು ಮಾಡುತ್ತಿದ್ದಾರೆ. ಸುಳ್ಳು ಹೇಳೋದನ್ನು ಸಿಎಂ ಸಿದ್ದರಾಮಯ್ಯ ಸ್ವಭಾವ ಮಾಡಿಕೊಂಡಿದ್ದಾರೆ. ಹಾಗಾಗಿ ನಾನು ಅವರನ್ನು ಸುಳ್ಳುರಾಮಯ್ಯ ಎಂದು ಕರೆಯುತ್ತೇನೆ ಎಂದರು.

ನಾನು ಸುಳ್ಳು ಹೇಳಿದರೆ ರಾಜಕೀಯ ನಿವೃತ್ತಿ ಹೊಂದುತ್ತೇನೆ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಹ್ಲಾದ್ ಜೋಶಿ, ಸಿದ್ದರಾಮಯ್ಯ ಪದೇಪದೆ ಸುಳ್ಳು ಹೇಳುತ್ತಲೇ ಇರುತ್ತಾರೆ. ಅವರು ಹೇಳೋದೆಲ್ಲವೂ ಸುಳ್ಳೇ. ಎನ್‌ಡಿಆರ್‌ಎಫ್ ಫಂಡ್‌ನಲ್ಲಿ ಯುಪಿಎ ಯಾವತ್ತೂ ಹೆಚ್ಚು ಹಣ ಕೊಟ್ಟಿಲ್ಲ. ಆದರೆ, ನಾವು ಹೆಚ್ಚುವರಿ ಮಾತ್ರವಲ್ಲ ಅಡ್ವಾನ್ಸ್ ಹಣ ಕೊಡುತ್ತಿದ್ದೇವೆ. ಇನ್ನು, ಒಂದೇ ಒಂದು ರೂಪಾಯಿ ಜಿಎಸ್‌ಟಿ ಹಣ ಬಾಕಿ ಇಲ್ಲ. 10 ವರ್ಷ ಪ್ರಧಾನಿ ನರೇಂದ್ರ ಮೋದಿ ಅವರ ಅವಧಿಯಲ್ಲಿ ಕೇಂದ್ರದ ಪಾಲಿನ ತೆರಿಗೆ ಹಂಚಿಕೆಯಲ್ಲಿ 2.85 ಲಕ್ಷ ಕೋಟಿ ಕೊಟ್ಟಿದ್ದೇವೆ ಎಂದು ವಿವರಿಸಿದರು.



ಡ್ಯಾಷ್ ಬೋರ್ಡ್‌ನಲ್ಲಿ ಮಾಹಿತಿಯೇ ಡಿಲೀಟ್: ಅನುದಾನದ ವಿಚಾರವಾಗಿ ರಾಜ್ಯ ಸರ್ಕಾರದ ಡ್ಯಾಶ್ ಬೋರ್ಡ್‌ನಲ್ಲಿ ಎಲ್ಲ ಮಾಹಿತಿ ಹಾಕಿದ್ದರು. ಅದನ್ನು ಡೌನ್‌ಲೋಡ್ ಮಾಡಲು ಬಿಜೆಪಿ ನಾಯಕರಿಗೆ ಸೂಚಿಸಿದ್ದೆ. ಅಷ್ಟರಲ್ಲಿ ಆಗಲೇ ಆ ಅಂಕಿ-ಅಂಶವೇ ಡಿಲೀಟ್ ಆಗಿದೆ. ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಇಲ್ಲಸಲ್ಲದ್ದನ್ನು ಮಾಡುತ್ತಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ವಿರುದ್ಧ ಜೋಶಿ ಗಂಭೀರ ಆರೋಪ ಮಾಡಿದರು.

ಲೋಕಸಭೆ ಚುನಾವಣೆಗೆ BJP-JDS ಮೈತ್ರಿಯಲ್ಲಿ ಸೀಟು ಹಂಚಿಕೆ ಇನ್ನೂ ಯಾವುದು ಫೈನಲ್ ಆಗಿಲ್ಲ. ಒಂದು ಹಂತದಲ್ಲಿ ಎರಡೂ ಪಕ್ಷಗಳ ನಾಯಕರ ನಡುವೆ ಚರ್ಚೆ ನಡೆಯುತ್ತಿದೆ. ಆದರೆ, ಅದೆಲ್ಲವೂ ಅಪೂರ್ಣ ಆಗಿದೆ. ಫೆ.17, 18ರ ನಂತರ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಬಳಿಕ ಎಲ್ಲವೂ ಅಂತಿಮವಾಗಲಿದೆ. ಮಂಡ್ಯ ಸೇರಿದಂತೆ ಯಾವುದೇ ಕ್ಷೇತ್ರದ ಸೀಟು ಹಂಚಿಕೆ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ. ನಮ್ಮ ರಾಷ್ಟ್ರೀಯ ನಾಯಕರು ರಾಜ್ಯ ಬಿಜೆಪಿ ಘಟಕದ ಜತೆ ಚರ್ಚಿಸಲಿದ್ದಾರೆ. ಆನಂತರವೇ ಸೀಟು ಹಂಚಿಕೆ ನಿರ್ಧಾರವಾಗಲಿದೆ. ಈಗಿನದ್ದೆಲ್ಲ ಊಹಾಪೋಹ. ಕ್ರಿಯೆ-ಪ್ರತಿಕ್ರಿಯೆಗಳಷ್ಟೇ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಪ್ರತಿಕ್ರಿಯಿಸಿದರು.

ಕೊಟ್ಟ ಅನುದಾನ ಬಳಕೆ ಮಾಡಿಲ್ಲ!

ಇನ್ನು, ಕೇಂದ್ರ ಸರ್ಕಾರ ವಿವಿಧ ಯೋಜನೆಗಳಲ್ಲಿ ನೀಡಿದ ಅನುದಾನ ಸಂಪೂರ್ಣ ಬಳಕೆಯೇ ಆಗಿಲ್ಲ. ಫೆಬ್ರವರಿ ಅಂತ್ಯ ಬಂದರೂ ಶೇ.30 ರಿಂದ 38 ರಷ್ಟು ಅನುದಾನ ಖರ್ಚು ಆಗದೇ ಉಳಿದಿದೆ. ಕೇಂದ್ರದಿಂದ ಯಾವುದೇ ವಿಶೇಷ ಗ್ರ್ಯಾಂಟ್ ಕೊಟ್ಟಿಲ್ಲ ಎಂದಿದ್ದಾರೆ. ಆದರೆ ಕರ್ನಾಟಕ ಸರ್ಕಾರಕ್ಕೆ 50 ವರ್ಷ ಅವಧಿಗೆ 6279 ಕೋಟಿ ರೂ. ಬಡ್ಡಿ ರಹಿತ ಸಾಲವನ್ನು ಕೊಟ್ಟಿದ್ದೇವೆ ಎಂದು ಜೋಶಿ ಸ್ಪಷ್ಟಪಡಿಸಿದರು.

ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮ

ಮೈಸೂರು,ಫೆ.14-2024ನೇ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಸಂವಿಧಾನ ದಿನಾಚರಣೆ ಪ್ರಯುಕ್ತ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹೆಚ್.ಡಿ. ಕೋಟೆ ಮತ್ತು ಸರಗೂರು ತಾಲೂಕಿನ ಗ್ರಾಮ ಪಂಚಾಯಿತಿಗಳಲ್ಲಿ ಆಯೋಜಿಸುವ ಕುರಿತು ಸರ್ಕಾರದ ಆದೇಶವಿದ್ದು, ಫೆ.15ರಿಂದ 22ರವರೆಗೆ 8 ದಿನಗಳ ಕಾಲ 39 ಗ್ರಾಮ ಪಂಚಾಯಿತಿ ಅಥವಾ ಪಟ್ಟಣ ಪಂಚಾಯಿತಿ ಅಥವಾ ಪುರಸಭೆಯ ಕೇಂದ್ರದಲ್ಲಿ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಇಂದಿನಿಂದ ಮಾ.4ರವರೆಗೆ ವಿದ್ಯುತ್ ಸರಬರಾಜಿನಲ್ಲಿ ಮಾರ್ಪಾಡು

ಮೈಸೂರು, ಫೆ.14-ಫೆ.15ರಿಂದ ಮಾ.4ರವರೆಗೆ (ಪರ್ಯಾಯ ದಿನಗಳಾದ ಫೆ.15,17,19, 21, 23, 25,27, 29, ಮಾ.2 ಮತ್ತು 4ರಂದು) ಆಯರಹಳ್ಳಿ ಮತ್ತು ಮರಡೀಹುಂಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ ಎಲ್‌ಐಎಲ್‌ಓ ಅರೇಂಜ್‌ಮೆಂಟ್ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು ಈ ಸಂಬಂಧ ವಿದ್ಯುತ್ ಸರಬರಾಜಿನಲ್ಲಿ ಮಾರ್ಪಾಡು ಮಾಡಲಾಗಿದೆ. ಚಿಕ್ಕೇಗೌಡನಹುಂಡಿ, ದೇವಲಾಪುರ, ರಾಯನಹುಂಡಿ, ಆಯರಹಳ್ಳಿ, ಮರಿಗೌಡನಹುಂಡಿ, ಕುಂಬ್ರಹಳ್ಳಿ, ಕುಂಬ್ರಹಳ್ಳಿ ಮಠ, ಸೋಮೇಶ್ವರಪುರ, ಬಸಹಳ್ಳಿಹುಂಡಿ, ಕಿರಾಳು, ಜಂತಗಳ್ಳಿ, ಸಜ್ಜೆಹುಂಡಿ, ಕಡವೆ ಕಟ್ಟೆಹುಂಡಿ ಏತ ನೀರಾವರಿ ಸ್ಥಾವರ, ಹದಿನಾರು, ಹದಿನಾರು ಮೊಳೆ, ಮೂಡಳ್ಳಿ, ಮಲ್ಲರಾಜಹುಂಡಿ, ಭರಣಿ ಕುಡಿಯುವ ನೀರಿನ ಸ್ಥಾವರ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನ ಸಮಯವನ್ನು ಮಾರ್ಪಾಡು ಮಾಡಲಾಗಿದ್ದು, ರೈತರ ಕೃಷಿ ಪಂಪ್‌ಸೆಟ್ ಸ್ಥಾವರಗಳಿಗೆ ರಾತ್ರಿ ವೇಳೆಯಲ್ಲಿ (ಪಾಳಿಯಲ್ಲಿ) 07 ಗಂಟೆಗಳ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ಆದುದರಿಂದ ಸಾರ್ವಜನಿಕರು ಹಾಗೂ ರೈತರು ಸಹಕರಿಸಬೇಕು ಎಂದು ನ.ರಾ.ಮೊಹಲ್ಲಾದ ಚಾ.ವಿ.ಸ.ನಿ.ನಿ. ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರತಿಯೊಬ್ಬರು ತಮ್ಮೊಳಗಿರುವ ಧನಾತ್ಮಕ ಶಕ್ತಿ ಜಾಗೃತಗೊಳಿಸಬಹುದು
ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿ ಬಿ.ಕೆ.ಮಂಜುಳಾ ಅಭಿಮತ



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆಯಲ್ಲಿ 'ಧನಾತ್ಮಕ ಶಕ್ತಿ' ಕುರಿತು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬಿ.ಕೆ.ಮಂಜುಳಾ ಮಾತನಾಡಿದರು.

ಮೈಸೂರು,ಫೆ.14(ಪಿಎಂ)- ಅನಗತ್ಯ ವಿಚಾರಗಳನ್ನು ಕೈಬಿಟ್ಟು, ನಿರಂತರವಾಗಿ ಒಳ್ಳೆಯ ಅಭ್ಯಾಸದಲ್ಲಿ ತೊಡಗಿಸಿಕೊಳ್ಳುವ ಮೂಲಕ ಪ್ರತಿಯೊಬ್ಬರೂ ತಮ್ಮೊಳಗೇ ಇರುವ ಧನಾತ್ಮಕ ಶಕ್ತಿಯನ್ನು ಜಾಗೃತಗೊಳಿಸಿಕೊಳ್ಳಲು ಸಾಧ್ಯವಿದೆ ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸರಸ್ವತಿಪುರಂ ಕೇಂದ್ರದ ಮುಖ್ಯಸ್ಥೆ ಬಿ.ಕೆ.ಮಂಜುಳಾ ಹೇಳಿದರು.

ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆಯ ಸಭಾಂಗಣದಲ್ಲಿ ಸಂಸ್ಥೆ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಧನಾತ್ಮಕ ಶಕ್ತಿ' ಕುರಿತು ಅವರು ಮಾತನಾಡಿದರು. ಧನಾತ್ಮಕ ಶಕ್ತಿ ಪ್ರತಿಯೊಬ್ಬರಲ್ಲೂ ಇದ್ದೇ ಇರುತ್ತದೆ. ಅದನ್ನು ಜಾಗೃತಗೊಳಿಸುವುದು ಮುಖ್ಯ. ಇದರಿಂದ ನಮ್ಮ ಜೀವನ ಗುಣಮಟ್ಟವು ಮತ್ತು ಸಂತೋಷದಾಯಕವೂ ಆಗಿರಲಿದೆ ಎಂದು ತಿಳಿಸಿದರು.


ಅನಗತ್ಯ ಅಂಶಗಳನ್ನು ಜೀವನದಲ್ಲಿ ಕೈಬಿಡಬೇಕು. ಒಳ್ಳೆಯ ಅಭ್ಯಾಸದಲ್ಲಿ ನಿರಂತರತೆ ಕಾಯ್ದುಕೊಳ್ಳಬೇಕು. ಮನಸ್ಸಿಗೆ ಮುದ ನೀಡುವ ಹೊಸ ವಿಚಾರಗಳನ್ನು ಪ್ರಾರಂಭಿಸಲು ಸದಾ ಉತ್ಸುಕರಾಗಿರಬೇಕು. ಅನ್ಯರನ್ನು ಗೌರವಿಸಬೇಕು. ಸಾಧ್ಯವಿದ್ದರೆ ಅವರಿಗೆ ಅಗತ್ಯ ಸಹಾಯ ಮಾಡಬೇಕೇ ಹೊರತು ಕೆಟ್ಟದ್ದನ್ನು ಮಾಡಬಾರದು. ನಮ್ಮ ನಡೆ-ನುಡಿಯಲ್ಲಿ ಪರಿಶುದ್ಧತೆ ಇದ್ದರೆ ಅದೂ ನಮ್ಮಲ್ಲಿನ ಧನಾತ್ಮಕ ಶಕ್ತಿಯನ್ನು ಹೆಚ್ಚಿಸಲಿದೆ ಎಂದು ಅವರು ಹೇಳಿದರು.

ಧನಾತ್ಮಕ ಶಕ್ತಿಯ ಕುರಿತಂತೆ ನಾವು ಜಾಗೃತ ಮನೋಭಾವ ಬೆಳೆಸಿಕೊಳ್ಳಬೇಕು. ಬೇರೆಯವರು ನಮ್ಮ ಜೀವನದ ಮೇಲೆ ದಾಳಿ ಮಾಡುತ್ತಾರೆ ಎಂದು ಜೀವನ ಕಳೆದುಕೊಳ್ಳುವುದು ಋಣಾತ್ಮಕತೆಯ ಮನಸ್ಥಿತಿಯಾಗಲಿದೆ. ನಮ್ಮ ಜೀವನವನ್ನು ನಾವು ರಕ್ಷಿಸಿಕೊಳ್ಳಬೇಕು. ಜೊತೆಗೆ ಬೇರೆಯವರಿಗೆ ನಮ್ಮಿಂದ ತೊಂದರೆಯಾಗದಂತೆ ಬದುಕುವುದನ್ನು ಕಲಿಯಬೇಕು. ನಮ್ಮ ಜೀವನ ನಮ್ಮ ನಿಯಂತ್ರಣದಲ್ಲಿ ಇರಬೇಕು. ಸ್ವಾರ್ಥ ಮನೋಭಾವದಿಂದ ಮುಕ್ತರಾಗಬೇಕು. ಮತ್ತೊಬ್ಬರ ಗೌರವಕ್ಕೆ ಧಕ್ಕೆಯಾಗುವಂತೆ ನಡೆದುಕೊಳ್ಳಬಾರದು ಎಂದು ಬಿ.ಕೆ.ಮಂಜುಳಾ ತಿಳಿಸಿದರು.

ಅನ್ಯರಿಗೆ ಕೆಡುಕು ಉಂಟು ಮಾಡುವುದರಿಂದ ನಮ್ಮಲ್ಲಿ ನಕಾರಾತ್ಮಕ ಚಿಂತನೆಗಳು ಬೆಳೆಯಲಿದೆ. ಜೀವನದಲ್ಲಿ ಯಾವುದು ಎಷ್ಟು ಮುಖ್ಯ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಅನಗತ್ಯವಾದ ವಿಚಾರಗಳಿಗೆ ಅಂಟಿಕೊಳ್ಳಬಾರದು ಎಂದು ತಿಳಿಸಿದರು.

ಇಂಜಿನಿಯರ್‌ಗಳ ಸಂಸ್ಥೆಯ ಮೈಸೂರು ಕೇಂದ್ರದ ಅಧ್ಯಕ್ಷ ಡಾ.ಆರ್.ದೀಪು ಸೇರಿದಂತೆ ಮತ್ತಿತರರು ಹಾಜರಿದ್ದರು.

ಅಪಾಯಕಾರಿಯಾಗಿ ಪರಿಣಮಿಸಿರುವ ಬೋಗಾದಿ ರಸ್ತೆಯ ಕಾಂಕ್ರೀಟ್ ವಿಭಜಕ





ಮೈಸೂರು, ಫೆ.14(ಆರ್‌ಕೆ)- ಈಗಾಗಲೇ ಮೈಸೂರು ಬೋಗಾದಿ ರಸ್ತೆಯಲ್ಲಿ ಅವೈಜ್ಞಾನಿಕ ರೋಡ್ ಹಂಪ್ಸ್ ಹಾಗೂ ಅಪಾಯಕಾರಿ ಒಣಗಿದ ಮರದ ರೆಂಬೆ ಉರುಳಿ ಅಮಾಯಕರ ಸಾವು-ನೋವುಗಳು ಸಂಭವಿಸಿ, ಜನರಲ್ಲಿನ ಆತಂಕದ ನಡುವೆ ಅದೇ ರಸ್ತೆಯ ಕುಕ್ಕರಹಳ್ಳಿ ಕೆರೆ ಜಂಕ್ಷನ್ ಬಳಿ ಅಳವಡಿಸಿರುವ ಸಿಮೆಂಟ್ ಕಾಂಕ್ರೀಟ್ ರಸ್ತೆ ವಿಭಜಕವು ಅಪಾಯಕಾರಿಯಾಗಿ ಪರಿಣಮಿಸಿದೆ.

ಕಳೆದ ರಾತ್ರಿ 9.30ರ ಸಮಯದಲ್ಲಿ ವ್ಯಕ್ತಿಯೊಬ್ಬರು ತಮ್ಮ ಕಾರಿನಲ್ಲಿ ಕುವೆಂಪುನಗರದ ತಮ್ಮ ಮನೆಗೆ ತೆರಳುತ್ತಿದ್ದರು. ಕುಕ್ಕರಹಳ್ಳಿ ಜಂಕ್ಷನ್ ಬಳಿ ಅಳವಡಿಸಿರುವ ರಸ್ತೆ ವಿಭಜಕದ ಬಳಿ ರಿಫ್ಲೆಕ್ಟಿವ್ ಉಪಕರಣ ಅಳವಡಿಸದ ಕಾರಣ ಮೀಡಿಯನ್‌ಗೆ ಕಾರು ಅಪ್ಪಳಿಸಿದೆ. ಇದರಿಂದಾಗಿ ಕಾರಿನ ಮುಂಭಾಗ ಸಂಪೂರ್ಣ ಜಖಂ ಆಗಿದ್ದು, ಚಾಲನೆ ಮಾಡುತ್ತಿದ್ದ ವ್ಯಕ್ತಿ ತಲೆಗೆ ಗಾಯಗಳಾಗಿ ಅವರು ಸಮೀಪದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರಸ್ತೆಯಲ್ಲಿ ದೀಪಗಳು ಹಾಗೂ ಸೂಚನಾ ಫಲಕ ಅಳವಡಿಸದಿರುವುದು ಈ ಅವಘಡಕ್ಕೆ ಕಾರಣ ಎಂದು ಹಲವರು ದೂರಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಕೆ.ಆರ್. ಸಂಚಾರ ಠಾಣೆ ಪೊಲೀಸರು ಜಖಂಗೊಂಡ ವಾಹನವನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಲ್ಲಿ ಈ ರೀತಿ ಸಮಸ್ಯೆ ಇದೆ ಎಂದು ತಿಳಿದಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳದಲ್ಲಿ ಸುರಕ್ಷತಾ ಕ್ರಮ ಕೈಗೊಂಡಿರಲಿಲ್ಲ. ಈ ಸಮಸ್ಯೆ ಕೇವಲ ಇಲ್ಲಿ ಮಾತ್ರವಲ್ಲದೆ ಮೈಸೂರಿನ ಹಲವೆಡೆ ಅಳವಡಿಸಿರುವ ರಸ್ತೆ ವಿಭಜಕಗಳ ಕತೆಯೂ ಇದೇ ಆಗಿದೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಮುರಿದು ಬಿದ್ದ ಭಾರಿ ರೆಂಬೆ; ವಿವಿ ಮಾರುಕಟ್ಟೆಯಲ್ಲಿ
ಅಪಾಯಕ್ಕೆ ಕಾದಿರುವ ವಿದ್ಯುತ್ ಕಂಬ

ಮೈಸೂರು,ಫೆ.14(ಆರ್‌ಕೆ)- ಮೈಸೂರಿನ ಅಗ್ರಹಾರ ವೃತ್ತದಲ್ಲಿರುವ ವಾಣಿ ವಿಲಾಸ ಮಾರುಕಟ್ಟೆ ಆವರಣದಲ್ಲಿ ಒಣಗಿದ ಮರವೊಂದು ಉರುಳಿ ಬಿದ್ದಿದೆ. ಪರಿಣಾಮ ವಿದ್ಯುತ್ ಕಂಬ ಬಾಗಿ, ಅಪಾಯಕಾರಿಯಾಗಿ ಪರಿಣಮಿಸಿದೆ.

ಕಳೆದ ಶುಕ್ರವಾರ ಸಂಜೆ ಇದ್ದಕ್ಕಿದ್ದಂತೆ ಮರದ ರೆಂಬೆಯೊಂದು ವಿದ್ಯುತ್ ತಂತಿಯ ಮೇಲೆ ಬಿದ್ದಿತು. ಪರಿಣಾಮ ಅಕ್ಕಪಕ್ಕ ಇದ್ದ ಎಲೆಕ್ಟ್ರಿಕ್ ಕಂಬಗಳು ಮುರಿದು ಬೀಳುವ ಆತಂಕ ಉದ್ಭವಿಸಿತು. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ವಿದ್ಯಾರಣ್ಯಪುರಂ ಸೆಸ್ಕಾಂ ಅಧಿಕಾರಿಗಳು ಆ ಮಾರ್ಗದಲ್ಲಿ ವಿದ್ಯುತ್ ಸಂಪರ್ಕ ಕಡಿತ ಮಾಡಿದರೇ ಹೊರತು, ಅಪಾಯಕರ ಸ್ಥಿತಿಯಲ್ಲಿರುವ ಕಂಬಗಳನ್ನು ಬದಲಾಯಿಸಲಿಲ್ಲ. ಪರಿಣಾಮ, ಮಾರುಕಟ್ಟೆಗೆ ಬರುವ ಗ್ರಾಹಕರ ತಲೆಗೆ ಕಂಬಗಳು ತಗುಲುತ್ತಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಮಾರುಕಟ್ಟೆಯ ವ್ಯಾಪಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಿದ್ಯುತ್ ಸಂಪರ್ಕವನ್ನೇನೋ ಕಡಿತ ಮಾಡಿದರು, ಆದರೆ ನೆಲಕ್ಕುರುಳುವ ಆತಂಕ ಸ್ಥಿತಿಯಲ್ಲಿರುವ ವಿದ್ಯುತ್ ತಂತಿಗಳು ಹಾಗೆಯೇ ಇರುವುದರಿಂದ ಅಲ್ಲಿಗೆ ಬರುವ ಗ್ರಾಹಕರು ಎಡವಿ ಬೀಳುತ್ತಿದ್ದಾರೆ. ಮತ್ತೊಂದೆಡೆ ಮುರಿದು ಬಿದ್ದ ಮರದ ರೆಂಬೆಯನ್ನು ಪಾಲಿಕೆ ಅಧಿಕಾರಿಗಳು ತೆರವುಗೊಳಿಸದೇ ಅಲ್ಲಿ ವಾಹನ ನಿಲುಗಡೆಗೆ ಮತ್ತು ಜನರು ಓಡಾಡಲು ತೊಂದರೆ ಉಂಟಾಗಿದೆ. ಈ ಕುರಿತು ದೂರವಾಣಿ ಮೂಲಕ ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸೆಸ್ಕಾಂ ಅಧಿಕಾರಿಗಳು, ಮುಂದಾಗುವ ಅಪಾಯ ತಪ್ಪಿಸುವ ಸಲುವಾಗಿ ನಾವೇ ಆ ಮಾರ್ಗದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದೇವೆ. ಒಂದೆರಡು ದಿನಗಳಲ್ಲಿ ಬಾಗಿರುವ ಹಳೆ ವಿದ್ಯುತ್ ಕಂಬಗಳನ್ನು ತೆಗೆದು ಹೊಸ ಕಂಬಗಳನ್ನು ಅಳವಡಿಸಲಾಗುವುದು ಎಂದರು.



ಇತ್ತೀಚೆಗಷ್ಟೇ ಕುಕ್ಕರಹಳ್ಳಿ ಕೆರೆ ಬಳಿ ಬೋಗಾದಿ ರಸ್ತೆಯಲ್ಲಿ ಅರಳಿಮರದ ರೆಂಬೆಯೊಂದು ಉರುಳಿಬಿದ್ದ ಪರಿಣಾಮ ಹಿರಿಯ ನಾಗರಿಕರೊಬ್ಬರು ಸಾವನ್ನಪ್ಪಿದ್ದು, ನಿನ್ನೆ (ಮಂಗಳವಾರ) ಅಶೋಕಪುರಂ 13ನೇ ಕ್ರಾಸ್ ಬಳಿ ಭಾರಿ ಗಾತ್ರದ ಮರವೊಂದು ರಸ್ತೆಗೆ ಅಡ್ಡಲಾಗಿ ಬಿದ್ದು, ಕೆಲಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಮೈಸೂರಿನ ಹಲವು ಕಡೆ ಈ ರೀತಿಯ ಸಮಸ್ಯೆಗಳು ಇದ್ದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಕ್ಷಿಪ್ರ ಕಾರ್ಯಾಚರಣೆ ಕೈಗೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ನಕ್ಕರೆ ಅದೇ ಸ್ವರ್ಗ

ಗುರುಗಳು : "ಚಳಿ ಕುಗ್ಗಿಸುತ್ತೆ, ಶಾಖ ಹಿಗ್ಗಿಸುತ್ತದೆ ಎನ್ನುವುದಕ್ಕೆ ಒಂದು ಸ್ವಂತ ಉದಾಹರಣೆ ಕೊಡಿ"

ವಿದ್ಯಾರ್ಥಿ : "ಚಳಿಗಾಲದಲ್ಲಿ ಬರುವ ಅರ್ಧ ವಾರ್ಷಿಕ ಪರೀಕ್ಷೆಗೆ ಸಿಲಬಸ್ ಕುಗ್ಗಿರುತ್ತದೆ. ಬೇಸಿಗೆಯಲ್ಲಿ ಬರುವ ವಾರ್ಷಿಕ ಪರೀಕ್ಷೆಯಲ್ಲಿ ಹಿಗ್ಗಿರುತ್ತದೆ"

ಮೈಸೂರು ಮಿತ್ರ

ಗುರುವಾರ, 15 ಫೆಬ್ರವರಿ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಹಿರಿಯರಿಗೆ ವಂದಿಸುವುದೇ ಸಭ್ಯತೆಯ ಮೂಲಭೂತ ಅಡಿಪಾಯವಾಗಿರುತ್ತದೆ. – ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉತ್ತಮನು ಎತ್ತ ಹೋದರೂ ಶುಭವೇ

ನಿಮ್ಮ ಪತ್ರಗಳು

ರಾಜತಾಂತ್ರಿಕತೆಗೆ ಸಂದ ಜಯ

ಮಾನ್ಯರೆ,

ಮಧ್ಯಪ್ರಾಚ್ಯದ ಕತಾರ್ ದೇಶದಲ್ಲಿ ಗಲ್ಲುಶಿಕ್ಷೆಗೆ ಗುರಿಯಾಗಿದ್ದ ಎಂಟು ಮಂದಿ ಭಾರತದ ನೌಕಾಪಡೆಯ ಮಾಜಿ ಅಧಿಕಾರಿಗಳು ನೇಣಿನ ಕುಣಿಕೆಯಿಂದ ಪಾರಾಗಿ ತಾಯ್ನಾಡಿಗೆ ಮರಳಿರುವುದು ಸಂತೋಷದಾಯಕ ವಿಚಾರ. ಭಾರತದ ರಾಜತಾಂತ್ರಿಕತೆಯು ಈ ವಿಷಯದಲ್ಲಿ ಹೆಚ್ಚಿನ ಕೆಲಸ ಮಾಡಿದೆ. ಸ್ವತಃ ಪ್ರಧಾನ ಮಂತ್ರಿ ನರೇಂದ್ರ ಮೋದಿ ಈ ವಿಷಯದಲ್ಲಿ ಅತೀ ಹೆಚ್ಚಿನ ಮುತುವರ್ಜಿ ವಹಿಸಿ, ಕತಾರ್‌ನ ದೊರೆಯನ್ನು ಭೇಟಿ ಮಾಡಿ, ಗಲ್ಲುಶಿಕ್ಷೆಗೆ ಗುರಿಯಾಗಿದ್ದ ಭಾರತೀಯ ಅಧಿಕಾರಿಗಳ ಬಿಡುಗಡೆಗೆ ಮನವಿ ಸಲ್ಲಿಸಿದ್ದರು. ಕೇವಲ ಎರಡೂವರೆ ತಿಂಗಳ ಹಿಂದೆಯಷ್ಟೇ ಕತಾರ್ ನ್ಯಾಯಾಲಯ, ಈ ಅಧಿಕಾರಿಗಳಿಗೆ ವಿಧಿಸಿದ್ದ ಗಲ್ಲುಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿತ್ತು.

ಈ ಅಧಿಕಾರಿಗಳು, ಕತಾರ್‌ನ ತೈಲ ಕಂಪನಿಯೊಂದರಲ್ಲಿ ಅಲ್ಲಿನ ಸಬ್ ಮೆರಿನ್ ಯೋಜನೆಯಲ್ಲಿ ರಹಸ್ಯವಾಗಿ ಕಾರ್ಯ ನಿರ್ವಹಿಸುತ್ತಾ, ಇಸ್ರೇಲ್‌ಗೆ ಅದರ ತಂತ್ರಜ್ಞಾನ ರವಾನಿಸುತ್ತಿದ್ದರು ಎಂಬ ಆರೋಪ ಕೇಳಿ ಬಂದಿತ್ತು ಈ ಹಿನ್ನೆಲೆಯಲ್ಲಿ ಕತಾರ್ ಸರ್ಕಾರ, ಈ ಅಧಿಕಾರಿಗಳ ವಿರುದ್ಧ ದೇಶದ್ರೋಹ ಮತ್ತು ಬೇಹುಗಾರಿಕೆಯ ಆರೋಪ ಹೊರಿಸಿತ್ತು.

ಈ ಅಧಿಕಾರಿಗಳಿಗೆ ವಿಧಿಸಲಾಗಿದ್ದ ಗಲ್ಲು ಶಿಕ್ಷೆಯ ರದ್ದಿಗೆ ಲಕ್ಷಾಂತರ ಭಾರತೀಯರು ಒತ್ತಾಯಪಡಿಸಿದ್ದರು. ಇದೀಗ ಭಾರತೀಯ ರಾಜತಾಂತ್ರಿಕತೆಗೆ ಗೆಲುವು ಲಭಿಸಿದ್ದು ಇದಕ್ಕಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಧನ್ಯವಾದಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸಮೀಕ್ಷೆಗಳು ಜನರ ದಿಕ್ಕು ತಪ್ಪಿಸಬಾರದು

ಮಾನ್ಯರೆ,

ಇತ್ತೀಚೆಗೆ ಕೆಲವು ಮಾಧ್ಯಮಗಳು ಇನ್ನೂ ಲೋಕಸಭಾ ಚುನಾವಣೆ ದಿನಾಂಕ ಘೋಷಣೆಯಾಗದಿದ್ದರೂ ಸಹ ಇಂತದ್ದೇ ಪಕ್ಷಕ್ಕೆ ಬಹುಮತ ಬರುತ್ತದೆ. ಇಂತಹ ರಾಜ್ಯದಲ್ಲಿ ಇಂತಿಷ್ಟೇ ಸೀಟುಗಳು ಬರುತ್ತವೆ ಎಂದು ಪ್ರಸಾರ ಮಾಡುತ್ತಿವೆ. ಯಾವ ಆಧಾರದಲ್ಲಿ ಸಮೀಕ್ಷೆ ನಡೆಸಿ ಹೇಳುತ್ತಿದ್ದಾರೆ ಎಂಬುದನ್ನು ಆಲೋಚಿಸಬೇಕಾಗುತ್ತದೆ. ಚುನಾವಣಾ ದಿನಾಂಕವೇ ಘೋಷಣೆ ಆಗದೆ ನಡೆಸುತ್ತಿರುವ ಸಮೀಕ್ಷೆಗಳು ಜನರನ್ನು ದಿಕ್ಕು ತಪ್ಪಿಸುವ ಕೆಲಸವೇ ಹೊರತು ಬೇರೇನೂ ಅಲ್ಲ. ಇಂತಹ ಹುಸಿ ಸಮೀಕ್ಷೆಗಳಿಂದ ಪ್ರಜಾತಂತ್ರ ವ್ಯವಸ್ಥೆಗೆ ಮಾರಕ ಮತ್ತು ಮಾಧ್ಯಮಗಳು ಸರ್ಕಾರದ ನಾಲ್ಕನೇ ಅಂಗವಾಗಿ ಕಾರ್ಯನಿರ್ವಹಿಸಬೇಕೇ ವಿನಹ ಜನರ ದಿಕ್ಕು ತಪ್ಪಿಸುವ ಕಾರ್ಯಕ್ಕೆ ಮುಂದಾಗಬಾರದು. ಖಾಸಗಿ ಸಂಸ್ಥೆಗಳು ನಡೆಸಿದ ಇಂತಹ ಸಮೀಕ್ಷೆಗಳು ಕೇವಲ ಕಾಲ್ಪನಿಕ ಮತ್ತು ಜನರನ್ನು ದಿಕ್ಕು ತಪ್ಪಿಸುವ ಸಲುವಾಗಿ ನಡೆಯುತ್ತಿದ್ದು, ಪ್ರಜಾತಂತ್ರ ವ್ಯವಸ್ಥೆಗೆ ಇದು ಮಾರಕ ಎಂಬುದನ್ನು ಜನರಿಗೆ ಮಾಧ್ಯಮಗಳು ತಿಳಿಸುವಂತಾಗಲಿ. ಪ್ರಜಾತಂತ್ರ ವ್ಯವಸ್ಥೆ ಮತ್ತಷ್ಟು ಗಟ್ಟಿಯಾಗಲಿ.

–ಕೆ.ಎಸ್. ಸುರೇಶ್, ಶಿಕ್ಷಕ, ಕೆ.ಜಿ.ಹಳ್ಳಿ, ಹೆಚ್.ಡಿ. ಕೋಟೆ

ಪ್ರಧಾನಿ ವಿರುದ್ಧ ಬಾಲಿಶ ಹೇಳಿಕೆ ನಗೆಪಾಟಲು

ಮಾನ್ಯರೆ,

ಕತಾರ್‌ನಲ್ಲಿ ಬೇಹುಗಾರಿಕೆ ಆರೋಪದಡಿ ಗಲ್ಲುಶಿಕ್ಷೆಗೆ ಗುರಿಯಾಗಿದ್ದ ಭಾರತದ ನಾವಿಕರ ರಕ್ಷಣೆ ಪ್ರಧಾನಿ ಮೋದಿಯಿಂದಲ್ಲ. ಬದಲಿಗೆ ನಟ ಶಾರೂಖ್ ಖಾನ್ ಕಾರಣ ಎಂದು ಬಿಜೆಪಿ ನಾಯಕ ಸುಬ್ರಹ್ಮಣ್ಯ ಸ್ವಾಮಿಯವರು ಹೇಳಿರುವುದನ್ನು ಮಾಧ್ಯಮಗಳು ಪ್ರಕಟಿಸಿವೆ. ಸುಬ್ರಹ್ಮಣ್ಯ ಸ್ವಾಮಿಯವರ ಈ ಹೇಳಿಕೆಯನ್ನು ನಟ ಶಾರೂಖ್ ಖಾನ್ ಅಲ್ಲಗಳೆದಿದ್ದಾರೆ. ಇದು ಭಾರತ ಸರ್ಕಾರದ ಮಧ್ಯಸ್ಥಿಕೆಯಿಂದ ಸಾಧ್ಯವಾಗಿದೆ. ಇದರಲ್ಲಿ ನನ್ನ ಪಾತ್ರವೇನೂ ಇಲ್ಲ ಎಂದು ನಟ ಶಾರೂಖ್ ಖಾನ್ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬಿಜೆಪಿ ನಾಯಕ ಸುಬ್ರಹ್ಮಣ್ಯ ಸ್ವಾಮಿಯವರು ತಮ್ಮದೇ ಪಕ್ಷದ ಪ್ರಧಾನಮಂತ್ರಿಯವರ ವಿರುದ್ಧ ಪದೇ ಪದೆ ಈ ರೀತಿಯ ಬಾಲಿಶ ಹೇಳಿಕೆಗಳನ್ನು ನೀಡಿ ಜನರ ಮುಂದೆ ನಗೆಪಾಟಲಿಗೆ ಈಡಾಗಿದ್ದಾರೆ. ಇದೇನು ಹೊಸದಲ್ಲ. ಆದರೆ ಪದೇ ಪದೆ ಈ ರೀತಿಯಲ್ಲಿ ಸಲ್ಲದ ಆರೋಪ ಮಾಡಿ ತಮ್ಮತನವನ್ನು ತಾವೇ ಕಳೆದುಕೊಳ್ಳುತ್ತಿರುವುದರ ಬಗ್ಗೆ ಅವರಿಗೆ ತಿಳುವಳಿಕೆ ಇಲ್ಲವೆ ಎಂಬುದೇ ಸಂಶಯ. ವಯೋವೃದ್ಧರಾಗಿರುವ ಮಾನ್ಯರು, ಇನ್ನಾದರೂ ಈ ರೀತಿಯ ಹೇಳಿಕೆಗಳನ್ನು ಕೊಡುವುದನ್ನು ನಿಲ್ಲಿಸಿದರೆ ಒಳ್ಳೆಯದು.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಸಮಯ ಬದುಕಿನ ಯಾನಕ್ಕೆ ಇಂಧನವಿದ್ದಂತೆ

ಮಾನ್ಯರೆ,

ನಮ್ಮ ಜೀವನವೇ ಹಾಗೇ. ಮತ್ತೊಬ್ಬರು ಏನು ಅಂದುಕೊಳ್ಳುತ್ತಾರೊ ಅಥವಾ ಏನು ಅಂದು ಬಿಡುತ್ತಾರೋ ಎನ್ನುವ ಎರಡು ಯೋಚನೆಯೊಂದಿಗೆ ಪ್ರತಿ ಕೆಲಸವನ್ನೊ, ಪ್ರಯತ್ನವನ್ನೊ ಮಾಡಲು ಹಿಂದೇಟು ಹಾಕುತ್ತೇವೆ. ಯಾವುದೇ ಒಳ್ಳೆಯ ಕೆಲಸಕ್ಕಾಗಿ ಪ್ರಯತ್ನಿಸುವ ಮುನ್ನ ಅದರಿಂದ ನಮ್ಮ ಒಳಿತಿಗೆ ಹಾಗೂ ಉನ್ನತಿಗೆ ಯೋಗ್ಯವಾಗಿದ್ದರೆ ಅದನ್ನು ಮಾಡುವುದರಲ್ಲಿ ಯಾವುದೇ ನಕಾರಾತ್ಮಕ ಚಿಂತನೆ ಬರಬಾರದು. ಎಲ್ಲರ ಅಭಿಪ್ರಾಯಗಳನ್ನು ಲೆಕ್ಕ ಹಾಕುತ್ತ ಕುಳಿತರೆ ನಮ್ಮ ಹಸಿವು ನೀಗುವುದೇ ಕಷ್ಟವಾಗುತ್ತದೆ.

ಪ್ರಯತ್ನದಲ್ಲಾಗಲೀ, ಕೆಲಸದಲ್ಲಾಗಲೀ ಕಿರಿದೆಂಬ ಕೀಳರಿಮೆ ಇರಲೇಬಾರದು. ನಮ್ಮ ಕೆಲಸ ಎಂಥದ್ದೇ ಆಗಿರಲಿ ಅದನ್ನು ಗೌರವಿಸಬೇಕು. ಮತ್ತೊಬ್ಬರು ನನ್ನ ಕೆಲಸವನ್ನು ನೋಡಿ ಏನೆಂದಾರೊ ಎಂಬುದು ಅವಶ್ಯವಲ್ಲ. ಪ್ರಯತ್ನದಲ್ಲಿ ಸೋತಾಗ ಕೂಡ ಮನಸ್ಥಿತಿ ಕುಗ್ಗಬಾರದು. ಏಕೆಂದರೆ ಎಲ್ಲರೂ ಗೆದ್ದವರನ್ನಷ್ಟೆ ಹೊಗಳುವುದು ಹಾಗೂ ಗೆದ್ದವರ ಮಾತಿಗಷ್ಟೆ ಕಿವಿಗೊಡುತ್ತಾರೆ. ಅಲ್ಲಿ ಅವರಿಂದ ಉಪಯೋಗವೆಂಬ ಮನಸ್ಥಿತಿ ಇರುತ್ತದೆ. ಸೋಲು ಎಂಬುದು ಜೀವನದಲ್ಲಿ ತುಂಬಾ ಪ್ರಮುಖವಾದದ್ದು, ಕಾರಣವೆಂದರೆ ಆವಾಗಲೇ ನಮ್ಮ ಸುತ್ತ ನೆರೆದಿರುವ ಬಂಧನಗಳ ಬಿರುಸು ಮನಗಾಣುವುದು. ಸೋತಾಗ ಮೊದಲು ನಮ್ಮ ಸೋಲಿಗೆ ಕಾರಣಗಳೇನು ಎಂಬುದನ್ನು ಮನಗಾಣಬೇಕು. ಮತ್ತೆ ಅವುಗಳು ನಮ್ಮನ್ನು ಎಡವದಂತೆ ಪ್ರಯತ್ನಿಸಬೇಕು. ಸೋತಾಗ ಏಕಾಂಗಿತನವು ಕಾಡುತ್ತೆ. ಆ ಸಮಯ ನಮಗೆ ಬದುಕಿನ ಯಾನಕ್ಕೆ ಇಂಧನವಿದ್ದಂತೆ. ಎಲ್ಲದರ ಮೌಲ್ಯವನ್ನು ತಿಳಿಸುತ್ತದೆ. ಏಕಾಂಗಿತನವು ಕಾಡತೊಡಗಿದಾಗ ಒಂದೊಳ್ಳೆ ಸ್ಫೂರ್ತಿದಾಯಕ ಪುಸ್ತಕದ ಮೊರೆ ಹೋದರೆ ನಮ್ಮ ಮನದ ಚೈತನ್ಯ ಇಮ್ಮಡಿಗೊಳ್ಳುತ್ತದೆ. ಜೀವನದಲ್ಲಿ ಎಂತಹ ಕೆಟ್ಟ ಪರಿಸ್ಥಿತಿ ಬಂದರೂ ಧೃತಿಗೆಡದೆ ನಮ್ಮತನವನ್ನು ಬಿಟ್ಟುಕೊಡದೆ ಪ್ರಯತ್ನಿಸಿದರೆ ಎಲ್ಲವೂ ನಮ್ಮ ಪಾಲಿಗೆ ದಕ್ಕಿಯೇ ತೀರುತ್ತವೆ.

–ಮಂಜೇಶ್ ದೇವಗಳ್ಳಿ, ಮೈಸೂರು

ಮಂಥನ



ನಿವೇದಿತಾ ಎಚ್
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು

ಓ ಪ್ರೇಮವೇ...!?



ಪ್ರೇಮವೆಂದರೆ ಗಂಡ ಹೆಂಡತಿ, ಪ್ರೇಯಸಿ–ಪ್ರಿಯಕರನ ಮಧ್ಯೆ ಇರುವುದು ಮಾತ್ರವೇ? ಖಂಡಿತವಾಗಿ ಅಲ್ಲ. ಶ್ರವಣನ ಮಾತಾಪಿತೃ ಭಕ್ತಿ, ಶಬರಿಯ ಶ್ರದ್ಧೆ, ಕೃಷ್ಣಾರ್ಜುನರ ತರಹದ ಸ್ನೇಹ, ಅಪ್ಪ ಅಮ್ಮ ಮತ್ತು ಮಕ್ಕಳ ನಡುವಿನ ಬಾಂಧವ್ಯ, ಸೋದರರ ನಡುವಿನ ಅನುಬಂಧ, ಗುರುಶಿಷ್ಯರ ನಡುವಿನ ಅಕ್ಕರೆ, ನೆರೆಯವರಿಗೆ ಚಾಚುವ ಸಹಾಯಹಸ್ತ ಎಲ್ಲವೂ ಪ್ರೇಮದ ಹಲವು ಮುಖಗಳೆ.

ಪ್ರೇಮವೆನೆ ಪ್ರೇಮ ಪ್ರೀತಿಯೆನೆ ಪ್ರೀತಿ ಬದುಕಿನ ರೀತಿಯೆನೆ...!
ರಾಧಾ ಮಾಧವ ವಿನೋದ ಹಾಸ
ಯಾರೂ ಮರೆಯದ ಪ್ರೇಮ ವಿಲಾಸ
ಪ್ರೇಮಕತೆಗಳಿಗೆ ಕೊನೆಯುಂಟೇ
ರಾಧಾ ಮಾಧವರಿರೋ ತನಕ
ಲೋಕದ ಕಣ್ಣಿಗೆ ರಾಧೆಯು ಕೂಡ
ಎಲ್ಲರಂತೇ ಒಂದು ಹೆಣ್ಣು
ನನಗೋ ಆಕೆ ಕೃಷ್ಣನ ನೋಡಲು
ಪ್ರೀತಿಯು ನೀಡಿದ ಕಣ್ಣು

ನಾವು ಭಾರತೀಯರಿಗೆ ಪ್ರೇಮ–ಪ್ರೀತಿ ಅಂದಾಗ ತಕ್ಷಣ ನೆನಪಾಗುವುದು ರಾಧಾ–ಮಾಧವರೇ. ನಿಸ್ವಾರ್ಥ ನಿರಪೇಕ್ಷಿತ ಅನನ್ಯ ಅನುಭೂತಿಯ ಶುದ್ಧ ಪ್ರೇಮಕ್ಕೆ ರಾಧಾ–ಮಾಧವರೇ ನಮಗೆ ಆದರ್ಶ.

ಫೆಬ್ರವರಿ 14ಕ್ಕೆ ಇಡೀ ಪ್ರಪಂಚವೇ ಅತ್ಯಂತ ಅದ್ದೂರಿಯಾಗಿ ಪ್ರೇಮಿಗಳ ದಿನವನ್ನು ಆಚರಿಸಿದೆ. ಆ ಹಿನ್ನೆಲೆಯಲ್ಲಿ ನನಗೆ ರಾಧಾ ಕೃಷ್ಣರ ನೆನಪಾಯಿತು. ವಾಲೆಂಟೈನ್ಸ್ ಡೇ ಎಂದು ಕರೆಯಲ್ಪಡುವ ಪ್ರೇಮಿಗಳ ದಿನದ ಪರಿಕಲ್ಪನೆ ನಮ್ಮದಂತೂ ಅಲ್ಲ. ಪಶ್ಚಿಮದಲ್ಲಿ ಪಾಶ್ಚಾತ್ಯರು ಮಾಡಿದ್ದನ್ನೆಲ್ಲಾ ವ್ರತದಂತೆ ಪ್ರಾರಂಭಿಸುವ, ಪಾಲಿಸುವ, ಆಚರಿಸುವ ನಾವು ಇದನ್ನೂ ಬಿಟ್ಟಿಲ್ಲ.

ಪ್ರೇಮವೆಂಬ ಮಧುರ ಅನುಭೂತಿ ಯಾರ ಸ್ವತ್ತೂ ಅಲ್ಲ, ಯಾವ ಪ್ರದೇಶಕ್ಕೆ ಸೀಮಿತವಾದುದೂ ಅಲ್ಲ. ಜಗತ್ತಿನೆಲ್ಲೆಡೆ ಎಲ್ಲವೂ ಎಲ್ಲರೂ ಪ್ರೀತಿಗಾಗಿ ಹಸಿದಿರುವವರೆ. ಒಂದು ಹಿಡಿ ಪ್ರೀತಿ ಜಗತ್ತಿನ ಸೊಗಸನ್ನೇ ಬದಲಿಸಬಹುದು. ನಮ್ಮ ಜಿಎಸ್‌ಎಸ್ ಹೇಳುವ ಹಾಗೆ?

ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?
ಮೋಡ ಹನಿ ಕಟ್ಟೀತು ಹೇಗೆ?

ಪುರಾಣ ಕಾಲದಿಂದಲೂ ನಮ್ಮಲ್ಲಿ ಪ್ರೇಮಕತೆಗಳಿಗೆ ಬರವಿಲ್ಲ. ವಿಶ್ವದ ಆದಿಯಿಂದ ಸೃಷ್ಟಿಕರ್ತರೇ ಪ್ರೇಮ ಪಾಶಕ್ಕೆ ಬಿದ್ದವರು. ಅದಕ್ಕೆ ಸೃಷ್ಟಿ ಸ್ಥಿತಿ ಮತ್ತು ಲಯಕರ್ತರಾದ ತ್ರಿಮೂರ್ತಿಗಳೂ ಹೊರತಲ್ಲ! ಸೃಷ್ಟಿಕರ್ತನಾದ ಬ್ರಹ್ಮ ತನ್ನ ಸೃಷ್ಟಿಯಾದ ಸರಸ್ವತಿಯನ್ನು ಪ್ರೇಮಿಸಿ ವರಿಸಿದನೆಂದೇ ಪೂಜೆಯಿಂದ, ಆರಾಧನೆಯಿಂದ ವಂಚಿತನಾದ. ನಾರಾಯಣನಂತೂ ಪಾಲ್ಗಡಲಿನಿಂದ ಲಕ್ಷ್ಮಿಯ ಉದ್ಭವವಾಗುತ್ತಿದ್ದಂತೆಯೇ ಮೊದಲ ನೋಟದಲ್ಲಿಯೇ ಅವಳನ್ನು ಪ್ರೇಮಿಸಿ ತನ್ನ ಹೃದಯ ಕಮಲದಲ್ಲಿ ಇಟ್ಟುಕೊಂಡ. ಶಿವನ ಪ್ರೇಮಗಾಥೆಯಂತೂ ನಮ್ಮೆಲ್ಲರಿಗೂ ತಿಳಿದದ್ದೇ. ಸತಿ ಮತ್ತು ಪಾರ್ವತಿ ಇಬ್ಬರೂ ತಪಗೈದು ಅವನನ್ನು ವರಿಸಿದರಷ್ಟೇ. ಸತಿಯ ಅಂತ್ಯವಾದಾಗ ಇಡೀ ವಿಶ್ವವನ್ನೇ ನಾಶ ಪಡಿಸುವಷ್ಟು ದುಃಖ ಈಶ್ವರನಿಗಾಗಿತ್ತು. ಸತಿಯ ಪುನರಾವತಾರ ಪಾರ್ವತಿಯನ್ನು ಮನಸಾರೆ ಪ್ರೇಮಿಸಿದ ಶಿವ.

ನಾರಾಯಣ ಲೋಕೋದ್ಧಾರಕ್ಕಾಗಿ ಎತ್ತಿದ ಅವತಾರಗಳಲ್ಲಿಯೂ ಪ್ರೇಮಮಯ ರಸಸೃಷ್ಟಿಗಳಿವೆ. ನಾರಾಯಣನನ್ನು ಬಿಟ್ಟಿರಲಾಗದೆ ಅವನ ಹಿಂದೆ ಭೂಲೋಕಕ್ಕೆ ಹಿಂಬಾಲಿಸಿಕೊಂಡು ಬರುವ ಲಕ್ಷ್ಮಿ! ನಾರಾಯಣನ ರಾಮಾವತಾರದಲ್ಲಿ, ಸೀತೆಯಾಗಿ ಬರುವ ಲಕ್ಷ್ಮಿಗಾಗಿ ರಾಮಾ ಏನೆಲ್ಲಾ ಮಾಡಿದ? ವನವಾಸದಲ್ಲಿ ಇರುವಾಗ ಕೂಡ ತನ್ನ ಪ್ರೀತಿಯ ಅಭಿವ್ಯಕ್ತಿಗಾಗಿ ಕಾಡು ಹೂಗಳಿಂದ ಸೀತೆಯ ಮುಡಿ ಅಲಂಕರಿಸುತ್ತಿದ್ದನಂತೆ. ಅವಳಿಗಾಗಿ ಮಾಯಾ ಜಿಂಕೆಯ ಹಿಂದೆ ಹೋದ. ಅವಳಿಗಾಗಿ ಲಂಕೆಯವರೆಗೆ ಸೇತುವೆಯನ್ನೇ ನಿರ್ಮಿಸಿದ!

ಕೃಷ್ಣಾವತಾರದಲ್ಲಿಯಂತೂ, ಅಷ್ಟಮಹಿಷಿಯರೊಡಗೂಡಿ ತನ್ನ ಸಾವಿರಾರು ಪತ್ನಿಯರು, ಗೋಪಿಕೆಯರಿಗೆಲ್ಲಾ ಪ್ರೇಮದ ನಿರಂತರ ಹೊಳೆಯನ್ನೇ ಹರಿಸಿದ ಕೃಷ್ಣ.. ಸತ್ಯಭಾಮೆಗಾಗಿ ಸುರಪುಷ್ಪವನ್ನೇ ತಂದ! ರಾಧೆಯೊಂದಿಗಿನ ಅವನ ಪ್ರೇಮ ದೈವೀಕವೂ ಹೌದು.

ಶ್ರೀನಿವಾಸನಾಗಿ ಬಂದಾಗಲೂ ಪದ್ಮಾವತಿಯ ಮೇಲೆ ಪ್ರೇಮ ಸುಧೆ!

ತ್ರಿಮೂರ್ತಿಗಳ ಕತೆ ಇದಾದರೆ, ಪುರಾಣಗಳಲ್ಲಿ ನಮಗೆ ಇನ್ನೂ ಸಾಕಷ್ಟು ಪ್ರೇಮಕತೆಗಳು ದೊರೆಯುತ್ತವೆ. ನಳ ದಮಯಂತಿ, ದುಷ್ಯಂತ ಶಾಕುಂತಲೆ, ಸತ್ಯವಾನ ಸಾವಿತ್ರಿ, ಅರ್ಜುನ ಸುಭದ್ರೆ, ಶಶಿರೇಖೆ ಅಭಿಮನ್ಯು, ನಹುಷ–ಅಶೋಕ ಸುಂದರಿ, ಚ್ಯವನ–ಸುಕನ್ಯ, ರತಿ–ಮನ್ಮಥ, ಯಯಾತಿ–ದೇವಯಾನಿ, ವಿಶ್ವಾಮಿತ್ರ–ಮೇನಕೆ, ರುರು–ಪ್ರಮದ್ವರೆ? ಹೀಗೆ ಸಾಕಷ್ಟು ಅನನ್ಯ ಪ್ರೇಮಕತೆಗಳು ದೊರಕುತ್ತವೆ. ರುರು ಪ್ರಮದ್ವರೆಯ ಕತೆಯಲ್ಲಿ, ಹಾವಿನ ಕಡಿತದಿಂದ ಸಾವಿಗೀಡಾಗಿದ್ದ ತನ್ನ ಭಾವಿ ಪತ್ನಿಯನ್ನು ಉಳಿಸಿಕೊಳ್ಳುವ ಸಲುವಾಗಿ ತನ್ನ ಅರ್ಧ ಆಯುಷ್ಯವನ್ನೇ ಧಾರೆಯೆರೆದ ರುರುವಿದ್ದಾನೆ!

ಇತಿಹಾಸಕ್ಕೆ ಬಂದರೆ ಅಲ್ಲಿ ಹೀರ್–ರಾಂಜಾ, ಮಿರ್ಜಾ–ಸಾಹಿಬಾ, ಡೋಲಾ–ಮಾರು, ಪೃಥ್ವಿರಾಜ್ ಚೌಹಾಣ್–ಸಂಯುಕ್ತಾ, ಬಾಝ್ ಬಹಾದುರ್–ರೂಪ್ ಮತಿ, ಬಾಜಿ ರಾವ್–ಮಸ್ತಾನಿ, ಸಲೀಮ್–ಅನಾರ್ಕಲಿ, ಷಹಜಹಾನ್–ಮುಮ್ತಾಜ್? ಹೀಗೆ ಹತ್ತು ಹಲವು.

ಮನುಷ್ಯ ಮನುಷ್ಯರ ನಡುವಿನ ಪ್ರೇಮವಲ್ಲದೆ, ದೇವರನ್ನೇ ಪ್ರೇಮಿಸಿ ಮನಸಿನಲ್ಲಿಯೇ ಅವನನ್ನು ವರಿಸಿ ಪತಿಯಾಗಿಸಿಕೊಂಡ ಅನುಭಾವಿಗಳನ್ನೂ ನಾವು ನೋಡಿದ್ದೇವೆ. ನಮ್ಮ ಕನ್ನಡದ ಪ್ರಪ್ರಥಮ ಕವಯತ್ರಿ ಅಕ್ಕ ಮಹಾದೇವಿ ಮಲ್ಲಿಕಾರ್ಜುನನನ್ನು ಪತಿಯೆಂದು ಭಾವಿಸಿ ಅವನಲ್ಲೇ ಐಕ್ಯಳಾದಳು. ಇನ್ನು ರಾಜಾಸ್ಥಾನದ ಮೀರಾಬಾಯಿ ಗಿರಿಧರ ಗೋಪಾಲಕೃಷ್ಣನನ್ನೇ ತನ್ನ ಪತಿಯೆಂದು ಬಗೆದಳು. ಬೀಬಿ ನಾಚಿಯಾರ್ ಬಗ್ಗೆ ಕೇಳದವರುಂಟೇ? ಅಫ್ಘಾನಿನಲ್ಲಿ ಹಸ್ನಾ ಎಂಬಾಕೆ ವ್ಯಾಪಾರಿಯ ಬಳಿ ಇದ್ದ ಕೃಷ್ಣನ ಮೂರ್ತಿ ಮಾತ್ರವನ್ನು ನೋಡಿ, ಅವನನ್ನೇ ಸಂಗಾತಿ ಎಂದು ನಂಬಿ ಅವಿವಾಹಿತಳಾಗಿಯೇ ಉಳಿದುಬಿಟ್ಟಳಂತೆ. ಪ್ರೇಮವೆಂದರೆ ಹಾಗೆ ಏನೋ!

ಇನ್ನು ನಾವು ಬದುಕುತ್ತಿರುವ ಕಾಲಕ್ಕೆ ಬಂದರೆ, ತಮ್ಮ ಪ್ರೀತಿಯನ್ನು ಹಲವರು, ಹಲವು ಬಗೆಯಲ್ಲಿ ತಮ್ಮ ಸಂಗಾತಿಗಳಿಗೆ ತೋರುತ್ತಲೇ ಬಂದಿದ್ದಾರೆ. ನೀರು ತರಲು ಹೋದ ಹೆಂಡತಿ ಬೆಟ್ಟದಿಂದ ಬಿದ್ದು ಜೀವ ಕಳೆದುಕೊಂಡ ನೋವಿನಿಂದ, ಬೆಟ್ಟವನ್ನೇ ಕೊರೆದು ರಸ್ತೆ ಮಾಡಿ ಮತ್ತೆ ಯಾರಿಗೂ ಅಂತಹ ದುಃಖ ಭರಿಸುವ ಪ್ರಮೇಯ ಬರದಿರಲಿ ಎಂದು ನೀರು ತರಲು ಸುಲಭದ ದಾರಿ ಮಾಡಿದ ದಶರಥ ಮಾಂಝಿಯ ಪ್ರೇಮ ಅಸಾಧಾರಣವಲ್ಲವೇ? ಗಂಡನ ಚಿಕಿತ್ಸೆಯ ವೆಚ್ಚಕ್ಕಾಗಿ ತನ್ನ 68ನೆಯ ವಯಸ್ಸಿನಲ್ಲಿ ಬರಿಗಾಲಿನಲ್ಲಿ ಮಾರಾಥಾನ್‌ನಲ್ಲಿ ಭಾಗವಹಿಸಿ ಗೆದ್ದ ಲತಾ ಖರೆಯ ಪ್ರೇಮವೆಂತಹುದು? ಅಮೃತಾ ಪ್ರೀತಮ್ ಮತ್ತು ಸಾಹಿರ್ ಲುಧ್ಯಾನ್ವಿ ಅವರ ನಡುವಿನ ಸಾಕಾರಗೊಳ್ಳದ ಉತ್ಕಟ ಪ್ರೇಮ? ಟೆಡ್ ಹ್ಯೂಸ್–ಸಿಲ್ವಿಯಾ ಪ್ಲಾತ್ ಕವಿಜೋಡಿಯ ಮೇರೆ ಮೀರಿದ ಹುಚ್ಚು ಪ್ರೀತಿ? ಇವೆಲ್ಲಾ ನಮಗೆ ತಿಳಿದದ್ದು, ತಿಳಿಯದಂತಹ ಅದೆಷ್ಟು ಕತೆಗಳಿವೆಯೋ? ನನ್ನ ತಾಯಿಯವರ ಶಿಕ್ಷಕಿಯೊಬ್ಬರು ತಮ್ಮ ಪತಿಗೆ ತಮ್ಮ ಒಂದು ಕಿಡ್ನಿಯನ್ನೇ ನೀಡಿ ಅವರನ್ನು ಬದುಕಿಸಿಕೊಂಡಿದ್ದಾರೆ. ನಿಮಗೂ ನಿಮ್ಮ ಸುತ್ತಲ ಅಂತಹ ಹಲವು ಕತೆಗಳು ನೆನಪಾಗುತ್ತಿರಬೇಕು.

ಹಾಗಾದರೆ ಪ್ರೇಮವೆಂದರೆ ಗಂಡ ಹೆಂಡತಿ, ಪ್ರೇಯಸಿ–ಪ್ರಿಯಕರನ ಮಧ್ಯೆ ಇರುವುದು ಮಾತ್ರವೇ? ಖಂಡಿತವಾಗಿ ಅಲ್ಲ. ಶ್ರವಣನ ಮಾತಾಪಿತೃ ಭಕ್ತಿ, ಶಬರಿಯ ಶ್ರದ್ಧೆ, ಕೃಷ್ಣಾರ್ಜುನರ ತರಹದ ಸ್ನೇಹ, ಅಪ್ಪ ಅಮ್ಮ ಮತ್ತು ಮಕ್ಕಳ ನಡುವಿನ ಬಾಂಧವ್ಯ, ಸೋದರರ ನಡುವಿನ ಅನುಬಂಧ, ಗುರು ಶಿಷ್ಯರ ನಡುವಿನ ಅಕ್ಕರೆ, ನೆರೆಯವರಿಗೆ ಚಾಚುವ ಸಹಾಯಹಸ್ತ ಎಲ್ಲವೂ ಪ್ರೇಮದ ಹಲವು ಮುಖಗಳೆ, ಹಾಗಾದರೆ ಈ ದಿನವನ್ನು ಮಾತ್ರ ನಾವು ಏಕೆ ಪ್ರೇಮಿಗಳ ದಿನ ಎಂದು ಕರೆಯುತ್ತೇವೆ? ಇದಷ್ಟೇ ಅಲ್ಲ, ಈಗ, Brothers Day, Sisters Day, Fathers day, Grand Parent's Day, Friendship Day, Wifes Day ಹೀಗೆ ಆಚರಿಸುವ ಪರಿಪಾಠ ಬೆಳೆಸಿಕೊಂಡುಬಿಟ್ಟಿದ್ದೇವೆ.

ಏಕೆ ಶುರುವಾದವು ಈ ದಿನಗಳು. ನಾನಿಲ್ಲಿ ಯಾವುದೇ ಸರಿ ತಪ್ಪುಗಳ ವಿಶ್ಲೇಷಣೆಗೆ ತೊಡಗುತ್ತಿಲ್ಲ. ಯಾವುದನ್ನೂ ನಿಕಷಕ್ಕೆ ಒಡ್ಡುತ್ತಿಲ್ಲ. ಕೆಲವೇ ಕೆಲವು ವರ್ಷಗಳ ಹಿಂದೆ ನಮಗೆ ಗೊತ್ತೂ ಇರದ ಹಲವು ಸಂಗತಿಗಳು, ಈಗ ನಮ್ಮ ಬದುಕಿನ ಭಾಗವೇ ಆಗಿಬಿಟ್ಟಿರುವ ಹಿಂದಿನ ಕಾರಣವನ್ನು ಅರಿಯಲು ಯತ್ನಿಸುತ್ತಿದ್ದೇನೆ ಅಷ್ಟೇ. ಅವುಗಳ ಆಚರಣೆಗೆ ಹಿನ್ನೆಲೆ ಏನೇ ಇರಬಹುದು. ನಾವು ಇಂದು ಅವುಗಳಿಗೆ ಅಷ್ಟರಮಟ್ಟಿಗೆ ಆತು ಬಿದ್ದಿರುವುದೇಕೇ ಎಂಬ ಸಹಜ ಕುತೂಹಲಕ್ಕೆ ಉತ್ತರ ಹುಡುಕೋಣವೆನಿಸಿತು.

ಕಾಲ ಬದಲಾಗಿ ನಾವೆಲ್ಲರೂ ಅಭಿವೃದ್ಧಿಯ ಕಡೆ ಮುಖ ಮಾಡತೊಡಗಿದೆವು. ಏನಾದರೊಂದನ್ನು ಸಾಧಿಸಬೇಕೆನ್ನುವುದು ಎಲ್ಲರ ತುಡಿತವಾಯ್ತು. ಗ್ರಾಮೀಣ ಬದುಕು ಹಿನ್ನಲೆಗೆ ಸರಿದು ಎಲ್ಲರೂ ನಗರಗಳಲ್ಲಿ ನೆಲೆಯೂರಲು ಪರಿತಪಿಸುವಂತಾಯ್ತು. ಅಪ್ಪನ ಆಸ್ತಿಯನ್ನು ಅನುಭವಿಸಿಕೊಂಡು ಇರುವ ಮನಃಸ್ಥಿತಿ ಬದಲಾಗಿ ಎಲ್ಲರಿಗೂ ತಮ್ಮದೇ ಛಾಪನ್ನು ಉಳಿಸುವ ಮಹತ್ವಾಕಾಂಕ್ಷೆ ಉಂಟಾಯಿತು. ಪರಿಣಾಮ ದುಡಿತ ಬದುಕಿನ ಧ್ಯೇಯವಾಯ್ತು. ಸಂಬಂಧಗಳ ಪ್ರಾಮುಖ್ಯತೆ ಹಿನ್ನಲೆಗೆ ಸರಿದು ಮನುಷ್ಯ ಹೆಚ್ಚೇ ಪ್ರಾಕ್ಟಿಕಲ್ ಆಗಿಬಿಟ್ಟ, ಎಲ್ಲರು ಮಾಡುವುದು ಹೊಟ್ಟೆಗಾಗಿ ಆದರೂ, ಗೇಣು ಬಟ್ಟೆಯ ಸಮಾಧಾನಕರ ಸ್ಥಿತಿಗೆ ತೃಪ್ತಿಪಟ್ಟುಕೊಳ್ಳುವುದು ಹೊರಟು ಹೋಯಿತು.

ಅಲ್ಲಿಂದ ಅಪರಾಧೀ ಪ್ರಜ್ಞೆಯೂ ಕಾಡತೊಡಗಿ, ತನ್ನೊಳಗೆ ಅಡಗಿರುವ ಭಾವಪೂರವನ್ನು ಅಡಿಗಡಿಗೆ ವ್ಯಕ್ತಪಡಿಸಲು ನಿಸ್ಸಹಾಯಕನಾಗಿ ಇಂತಹ ದಿನಗಳ ಮೊರೆ ಹೋಗತೊಡಗಿದ. ಅಂದಿನ ದಿನ ತನ್ನ ಸಮಸ್ತ ಪ್ರೀತಿಯನ್ನು ಭಾವನೆಗಳನ್ನು ಮಾತುಗಳನ್ನು ಹರಿಬಿಟ್ಟು ಹಗುರಾಗುವುದನ್ನು ಅಭ್ಯಾಸ ಮಾಡಿಕೊಂಡು ಬಿಟ್ಟ, ಇದು ಸುಲಭವೆನಿಸತೊಡಗಿತು. ಕಾಣಿಕೆಗಳು ಸಮಯ ಮತ್ತು ಪ್ರೀತಿಯ ಅಭಿವ್ಯಕ್ತಿಯಾಗತೊಡಗಿತು. ನಿಧಾನಕ್ಕೆ ಈ ವ್ಯವಸ್ಥೆ ಬಹಳ ಅನುಕೂಲಕರವೆನಿಸಿ ತನ್ನದಾಗಿಸಿಕೊಂಡುಬಿಟ್ಟ, ಹಾಗಾಗಿಯೇ ಇಂದು ತರಹೇವಾರಿ ದಿನಗಳ ಆಚರಣೆ.

western Christian church ನ ನಿರ್ಧಾರದಂತೆ, ಮೂರನೆ ಶತಮಾನದ ರೋಮ್‌ನ ಸಂತ ವಾಲೆಂಟೈನ್ ಅನ್ನು ಗಲ್ಲಿ ಗೇರಿಸಿದ ದಿನದಂದು ಅಂದರೆ ಫೆಬ್ರವರಿ 14 ಅನ್ನು Valentine Feast ಅನ್ನು ಆಚರಿಸಲು ನಿರ್ಧರಿಸಲಾಯಿತು. ವಾಲೆಂಟೈನ್ ಮೂರನೆಯ ಶತಮಾನದಲ್ಲಿ ರೋಮ್‌ನಲ್ಲಿ ಇದ್ದಾತ. ಅವನ ಬಗ್ಗೆ ಹಲವಾರು ದಂತಕತೆಗಳಿವೆ.

ರೋಮ್‌ನ ದೊರೆಯಾಗಿದ್ದ ಕ್ಲಾಡಿಯಸ್‌ನ ಕಾಲದಲ್ಲಿ ಸೈನಿಕರು ಮದುವೆಯಾಗುವಂತಿರಲಿಲ್ಲ. ಅದು ಅತ್ಯಂತ ಕ್ರೂರ ಎಂದು ಅದನ್ನು ಅಲ್ಲಗಳೆದು ವಾಲೆಂಟೈನ್ ಸೈನಿಕರಿಗೆ ಮದುವೆ ಮಾಡಿಸುತ್ತಿದ್ದ. ಸಿಟ್ಟಿಗೆದ್ದ ದೊರೆ ಅವನನ್ನು ಸೆರೆಮನೆಗಟ್ಟುತ್ತಾನೆ. ಮರಣದಂಡನೆಯನ್ನೂ ವಿಧಿಸುತ್ತಾನೆ. ಸೆರೆಮನೆಯಲ್ಲೂ ತನ್ನ ಸತ್ಕಾರ್ಯ ಮುಂದುವರೆಸುವ ವಾಲೆಂಟೈನ್ ಸೆರೆಮನೆಯ ಅಧಿಕಾರಿಯ ಅಂಧ ಮಗಳಿಗೆ ಕಣ್ಣು ಬರಿಸುತ್ತಾನಂತೆ. ಅವನ ಮರಣದಂಡನೆಗೆ ಮುಂಚೆ, ಪತ್ರ ಬರೆಯುವ ಆ ಹುಡುಗಿ your valentine ಎಂದು ಸಹಿ ಮಾಡುತ್ತಾಳೆ. ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಪ್ರೇಮಿಗಳಿಗೆ ಸಹಾಯ ಮಾಡಿದ ವಾಲೆಂಟೈನ್ ನ ಹೆಸರಿನಲ್ಲಿಯೇ ಪ್ರೇಮಿಗಳ ದಿನಾಚರಣೆ ಆಚರಿಸುವುದು ನಿಜಕ್ಕೂ ಸಮರ್ಥನೀಯವೇ.

ಫೆಬ್ರವರಿ7ರಿಂದ ಒಂದು ವಾರ ಪೂರ್ತಿ 7ಕ್ಕೆ ರೋಸ್ ಡೇ, 8ಕ್ಕೆ ಪ್ರೊಪೋಸ್ ಡೇ, 9ಕ್ಕೆ ಚಾಕೊಲೇಟ್ ಡೇ, 10ಕ್ಕೆ ಟೆಡ್ಡಿಬೇರ್ ಡೇ, 11ಕ್ಕೆ ಪ್ರಾಮಿಸ್ ಡೇ, 12ಕ್ಕೆ ಹಗ್ ಡೇ, 13ಕ್ಕೆ ಕಿಸ್ ಡೇ ಎಂದೆಲ್ಲಾ ನಡೆಯುವ ವಾಲೆಂಟೈನ್ ವೀಕ್ ವಿಜೃಂಭಣೆಯಿಂದ ಕೊನೆಗೊಳ್ಳುವುದು ಫೆಬ್ರವರಿ 14ರಂದು. ಅಂದು ಕೆಂಪು ವರ್ಣದ್ದೇ ಕಾರುಬಾರು. ಕೆಂಪು ರೋಜಾ ಹೂವು, ಕೆಂಪು ಹೃದಯದ ಆಟಿಕೆಗಳು, ಕೆಂಪು ಉಡುಗೆ? ಎಲ್ಲವೂ ಕೆಂಪು. ವಾಲೆಂಟೈನ್ ಡೇ ಯ ಬಣ್ಣವೇ ಕೆಂಪು. ಆ ದಿನ ಕೆಂಪು ಅಲ್ಲದೆ, ಪಿಂಕ್, ಹಸಿರು, ಕಪ್ಪು ಬಣ್ಣಗಳನ್ನು ಧರಿಸಿದರೆ ಬೇರೆ ಬೇರೆಯದೇ ಅರ್ಥವಿರುತ್ತದಂತೆ!

ವಾಲೆಂಟೈನ್ ಡೇ ಪ್ರೇಮಿಗಳಿಗೆ ಮಾತ್ರ ಸಹಾಕಾರಿಯಾಗಿಲ್ಲ. ಜಾಗತಿಕವಾಗಿ ವ್ಯಾಪಾರದ ದೃಷ್ಟಿಯಿಂದ ಕೂಡಾ ಈ ದಿನ ಪ್ರಮುಖವೇ. ಪ್ರಪಂಚದೆಲ್ಲೆಡೆ ವ್ಯಾಪಾರಿಗಳು ಈ ದಿನಕ್ಕಾಗಿ ಕಾಯುತ್ತಾರೆ. ಪ್ರಪಂಚದಾದ್ಯಂತ ಈ ದಿನ 30 ಬಿಲಿಯನ್‌ಗೂ ಹೆಚ್ಚಿನ ವಹಿವಾಟು ಆಗುತ್ತದೆ ಮತ್ತು ವರ್ಷದಿಂದ ವರ್ಷಕ್ಕೆ ಇದು ಹೆಚ್ಚುತ್ತಲೇ ಇದೆ. ಭಾರತದಲ್ಲಿಯೇ, ಎಕರೆಗೆ 5–6ಲಕ್ಷ ಗಳಿಸುವ ಗುಲಾಬಿ ಬೆಳೆಗಾರರು, ಈ ದಿನಾಚರಣೆಯ ಸಂದರ್ಭದಲ್ಲಿ 10 ಲಕ್ಷದವರೆಗೂ ಗಳಿಸುತ್ತಾರೆ ಎಂದು ಅಧ್ಯಯನ ಹೇಳುತ್ತದೆ.


ಸೋಜಿಗವೆಂದರೆ, ಒಂದು ವಾರ ಪೂರ್ತಿ ಪ್ರೇಮದಲ್ಲಿ ಮುಳುಗೇಳುವ ಪ್ರೇಮಿಗಳು, ಫೆಬ್ರವರಿ 15ರಿಂದ 21ರವರೆಗೆ Anti Valentine Week ಅನ್ನು ಆಚರಿಸುತ್ತಾರೆ! ಪ್ರೇಮವೆಂದರೆ ಬರೀ ಮಧುರವಷ್ಟೇ ಅಲ್ಲವಲ್ಲ, ವಿರಹ, ಮೋಸ, ದ್ರೋಹ, ವಂಚನೆ, ಬೇರ್ಪಡುವಿಕೆಯೂ ಇರುತ್ತದೆ. ಆ ಭಾವಗಳ ಅಭಿವ್ಯಕ್ತಿಗೆ ಒಂದು ವಾರ. 15ಕ್ಕೆ ಸ್ಲಾಪ್ ಡೇ, 16ಕ್ಕೆ ಕಿಕ್ ಡೇ, 17ಕ್ಕೆ ಪರ್ಫ್ಯೂಮ್ ಡೆ, 18ಕ್ಕೆ ಫ್ಲರ್ಟ್ ಡೇ, 19ಕ್ಕೆ ಕನ್ಫೆಶನ್ ಡೇ, 20ಕ್ಕೆ ಮಿಸ್ಸಿಂಗ್ ಡೇ ಮತ್ತು 21ಕ್ಕೆ ಸಮಾರೋಪ ಬ್ರೇಕ್ ಅಪ್ ಡೇ!

ಕಾಲ ಅತ್ಯಂತ ವೇಗವಾಗಿ ಬದಲಾಗುತ್ತಿರುವಾಗ ಹಲವಾರು ಊಹಿಸಲಾಗದ ಮಟ್ಟಿನ ಬದಲಾವಣೆಗಳಾಗುತ್ತವೆ. ಅವುಗಳ ಅನುಕೂಲ ಅನಾನುಕೂಲಗಳನ್ನು ನೋಡಿಕೊಂಡು ಆಚರಿಸುವುದನ್ನಾಗಲೀ, ಅಳವಡಿಸಿಕೊಳ್ಳುವುದನ್ನಾಗಲೀ ಮಾಡಬೇಕು. ಅದು ನಮ್ಮ ವಿವೇಚನೆಯ ಪರಿಧಿಯಲ್ಲಿ ಬರುತ್ತದೆ. ಪ್ರೇಮಿಗಳ ದಿನ ಎಂದು ಸ್ವೇಚ್ಛೆಯಿಂದ ಇನ್ನೊಬ್ಬರ ಖಾಸಗಿ ಭಾವನೆಗಳನ್ನು ಪರಿಗಣಿಸದೇ ದುಂಡಾವರ್ತನೆ ತೋರುವುದು ಹೆಚ್ಚಾಗಿ ಕಂಡುಬರುತ್ತದೆ. ಅದು ಖಂಡನೀಯ. ಪ್ರೇಮವೆಂಬುದು ಹೊಸ ಬಟ್ಟೆ ಕೊಂಡಂತೆಯೂ ಅಲ್ಲ, ಪ್ರೇಮಿಸುವುದು ಬಿಡುವುದು ಬಟ್ಟೆ ಬದಲಾಯಿಸಿದಂತೆಯೂ ಅಲ್ಲ. ಅದಕ್ಕೆ ತನ್ನದೇ ಆದ ಗಾಂಭೀರ್ಯವಿದೆ, ಘನತೆಯಿದೆ. ಜೀವನವನ್ನರಳಿಸುವ ಶಕ್ತಿಯಿರುವ ಪ್ರೇಮ ದೈವೀಕವಾದದ್ದು ಎಂಬ ಸಣ್ಣ ತಿಳುವಳಿಕೆಯಿದ್ದಲ್ಲಿ ಈ ದಿನದ ಆಚರಣೆಯೂ ಅರ್ಥಪೂರ್ಣವಾದೀತು. ಏನೇ ಆದರೂ ಪ್ರೇಮದ ಆವಿರ್ಭಾವಕ್ಕೆ ಯಾವ ಕಾಣಿಕೆ ದಿನ ಕಾಲ ಗಳಿಗೆಗಳ ಮುಹೂರ್ತಗಳ ಹಂಗಿಲ್ಲ. ಬೇಂದ್ರೆಯವರು ಹೇಳಿಲ್ಲವೇ?

ಒಲವೆಂಬ ಹೊತ್ತಿಗೆಯ ಓದ ಬಯಸುತ ನೀನು
ಬೆಲೆ ಎಷ್ಟು ಎಂದು ಕೇಳುತಿಹೆ ಹುಚ್ಚ!
ಹಗಲಿರುಳು ದುಡಿದರೂ ಹಲ ಜನುಮ ಕಳೆದರೂ
ನೀ ತೆತ್ತಲಾರೆ ಬರಿ ಅಂಚೆ ವೆಚ್ಚ!
ಹೃದಯ ಸಂಪುಟದಲ್ಲಿ ಒಲವ ಲೆಕ್ಕಣಿಕೆ
ಮಾಡಿ ಬರೆಯಲೋ ಹುಡುಗ ನಿನ್ನ ಒಕ್ಕಣಿಕೆ

ನಾಳೆ ರೈತರಿಂದ ಗ್ರಾಮೀಣ ಪ್ರದೇಶ ಬಂದ್

ಪ್ರಧಾನಿ ನರೇಂದ್ರ ಮೋದಿ ಅವರ ರೈತ ವಿರೋಧಿ ನೀತಿ ವಿರುದ್ಧ ಆಕ್ರೋಶ



ಸುದ್ದಿಗೋಷ್ಠಿಯಲ್ಲಿ ಬಡಗಲಪುರ ನಾಗೇಂದ್ರ ಮಾತನಾಡಿದರು.

ಮೈಸೂರು,ಫೆ.14(ಜಿಎ)–ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ರೈತ ವಿರೋಧಿ ನೀತಿ ಖಂಡಿಸಿ ಫೆ16 ರಂದು ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ದೇಶದಾದ್ಯಂತ ಗ್ರಾಮೀಣ ಬಂದ್‌ಗೆ ಕರೆ ನೀಡಲಾಗಿದ್ದು, ಇದರಲ್ಲಿ ರೈತಪರ, ದಲಿತ, ಪ್ರಗತಿಪರ ಹಾಗೂ ಕಾರ್ಮಿಕ ಸಂಘಟನೆಗಳು ಪಾಲ್ಗೊಳ್ಳಲಿವೆ ಎಂದು ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೆಹಲಿಯಲ್ಲಿನ ರೈತ ಹೋರಾಟದಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ರೈತರನ್ನು ದಿಕ್ಕು ತಪ್ಪಿಸಿ, ಹೋರಾಟ ಅಸ್ಥಿರಗೊಳಿಸುವ ಹುನ್ನಾರದ ಮೂಲಕ ಪ್ರಧಾನಿ ಮತ್ತೆ ತಾವು ರೈತ ವಿರೋಧಿ ಎನ್ನುವುದನ್ನು ಸಾಬೀತು ಪಡಿಸಿದ್ದಾರೆ ಎಂದರು.

ಈ ಹಿಂದೆ ನಡೆದ ಪ್ರತಿಭಟನೆ, ರೈತ ಹೋರಾಟದ ವೇಳೆ ಇಡೀ ವಿಶ್ವವೇ ಪ್ರಧಾನಿಯನ್ನು ಖಂಡಿಸಿತ್ತು. ಹೀಗಾಗಿ ಮಣಿದ ಅವರು ಕೆಲವೊಂದು ಭರವಸೆ ನೀಡಿದ್ದರು. ಆದರೆ ಅದನ್ನು ಈಡೇರಿಸದಿರುವ ಹಿನ್ನೆಲೆಯಲ್ಲಿ ರೈತರು ಮತ್ತೊಮ್ಮೆ ಹೋರಾಟ ಮಾಡಲು ದೆಹಲಿಗೆ ತೆರಳುತ್ತಿದ್ದಾರೆ. ಆದರೆ ಇವರು ದೆಹಲಿ ತಲುಪದಂತೆ ನೋಡಿಕೊಳ್ಳಲು ಪ್ರಧಾನಿ ಎಲ್ಲ ರೀತಿಯ ಹುನ್ನಾರ ನಡೆಸಿದ್ದಾರೆ. ನ್ಯಾಯ ಕೇಳಿ ದೆಹಲಿಗೆ ಬರುತ್ತಿರುವ ರೈತರ ಮೇಲೆ ದಬ್ಬಾಳಿಕೆ ಮಾಡಲಾಗುತ್ತಿದೆ. ಈ ರೀತಿ ಪ್ರತಿಭಟಿಸುವ ಹಕ್ಕನ್ನು ದಮನ ಮಾಡುತ್ತಿರುವುದು ಖಂಡನೀಯ ಎಂದು ಕಿಡಿಕಾರಿದರು.

ಕರೂರು ವೈಶ್ಯ ಬ್ಯಾಂಕ್‌ನವರು ಮಧ್ಯವರ್ತಿಗಳ ಮೂಲಕ ರೈತರಿಂದ ದಾಖಲಾತಿ ಪಡೆದು ನಾಲ್ಕು ಲಕ್ಷ ಮಂಜೂರು ಮಾಡಿ ಅದರಲ್ಲಿ ಕೇವಲ ಎರಡು ಲಕ್ಷ ನೀಡುತ್ತಿರುವುದರಿಂದ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಮಧ್ಯವರ್ತಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳು ಹಣ ಲಪಟಾಯಿಸಿದ್ದಲ್ಲದೆ, ಈಗ ಸಾಲ ತೀರಿಸಬೇಕೆಂದು ರೈತರಿಗೆ ಕಿರುಕುಳ ನೀಡುತ್ತಿದ್ದಾರೆ. ಹೀಗಾಗಿ ಇದನ್ನು ವಿರೋಧಿಸಿ ನಗರದಲ್ಲಿರುವ ಬ್ಯಾಂಕ್ ಎದುರು ಫೆಬ್ರವರಿ 19ರಂದು ರೈತರ ಸಂಘ ಪ್ರತಿಭಟನೆ ನಡೆಸಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜು, ಪ್ರಸನ್ನ ಎನ್.ಗೌಡ, ಪಿ. ಮರಂಕಯ್ಯ, ನಾಗನಹಳ್ಳಿ ವಿಜೇಂದ್ರ, ಮಂಡಕಳ್ಳಿ ಮಹೇಶ್ ಉಪಸ್ಥಿತರಿದ್ದರು.

ಕು. ಅರ್ಪಿತಾ ನಾಯಕ್ ಭರತನಾಟ್ಯ ರಂಗಪ್ರವೇಶ



ಮೈಸೂರು, ಫೆ. 14– ಮೈಸೂರಿನ ನಾದ ವಿದ್ಯಾಲಯ ಸಂಗೀತ ಮತ್ತು ನೃತ್ಯ ಅಕಾಡೆಮಿ ವತಿಯಿಂದ ಗುರು ವಿದುಷಿ ಮಿತ್ರ ನವೀನ್ ಅವರ ಶಿಷ್ಯೆ ಕು. ಅರ್ಪಿತಾ ನಾಯಕ್ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ಫೆ.17ರಂದು ಸಂಜೆ 5.30 ಗಂಟೆಗೆ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಶಾಸಕ ಟಿ.ಎಸ್.ಶ್ರೀವತ್ಸ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಬೆಂಗಳೂರಿನ ನೃತ್ಯಗಂಗಾ ಪ್ರದರ್ಶಕ ಕಲಾ ಕೇಂದ್ರದ ನಿರ್ದೇಶಕಿ ವಿದುಷಿ ರೂಪಶ್ರೀ ಮಧುಸೂದನ್ ಭಾಗವಹಿಸುವರು. ಗುರು ವಿದುಷಿ ಮಿತ್ರ ನವೀನ್ ಅವರನ್ನು ಗುರುವಂದನೆಯಲ್ಲಿ ಸನ್ಮಾನಿಸಲಾಗುವುದು. ಕಾರ್ಯಕ್ರಮದ ನಿರ್ದೇಶನ, ನೃತ್ಯ ಸಂಯೋಜನೆ, ನಟುವಾಂಗ ವಿದುಷಿ ಮಿತ್ರಾ ನವೀನ್ ಅವರದು. ಗಾಯನದಲ್ಲಿ ವಿದ್ವಾನ್ ಎಂ.ಎಸ್.ನವೀನ್ ಅಂದಗಾರ್, ಕೊಳಲಿನಲ್ಲಿ ವಿದ್ವಾನ್ ವಿವೇಕ್ ಕೃಷ್ಣ ಹಾಗೂ ಮೃದಂಗದಲ್ಲಿ ವಿದ್ವಾನ್ ಜಿ.ಎಸ್.ನಾಗರಾಜ್ ಹಾಗೂ ನಿರೂಪಣೆಯಲ್ಲಿ ಜಿ.ಎನ್.ಮಂಜುನಾಥ್ ಸಹಕಾರ ನೀಡಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಪಿಯುಸಿ ಪಠ್ಯಧಾರಿತ ರಂಗ ಪ್ರದರ್ಶನ ಸಮಾರೋಪ ಸಮಾರಂಭ ನಾಳೆ

ಮೈಸೂರು,ಫೆ.14–ಅದಮ್ಯ ರಂಗಶಾಲೆ, ಸ್ಪಂದನಾ ಸಾಂಸ್ಕೃತಿಕ ಪರಿಷತ್ತು ಹಾಗೂ ದಕ್ಷ ಪದವಿಪೂರ್ವ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಫೆ.16ರಂದು ಸಂಜೆ 5.30 ಗಂಟೆಗೆ ನಗರದ ಹೂಟಗಳ್ಳಿಯಲ್ಲಿರುವ ದಕ್ಷ ಪಿಯು ಕಾಲೇಜಿನ ಸಭಾಂಗಣದಲ್ಲಿ 'ಪಿಯುಸಿ ಪಠ್ಯಧಾರಿತ ನಾಟಕ ಪ್ರದರ್ಶನ'ದ ಸಮಾರೋಪ ಸಮಾರಂಭ ನಡೆಯಲಿದೆ.

ರಂಗ ಪ್ರದರ್ಶನದ ಸಮಾರೋಪ ಸಮಾರಂಭಕ್ಕೆ ಮಂಗಳೂರು ವಲಯದ ಆಂತರಿಕ ವಿಭಾಗದ ಪೊಲೀಸ್ ಅಧೀಕ್ಷಕ ಡಾ.ಎ.ಎನ್.ಪ್ರಕಾಶ್‌ಗೌಡ ಚಾಲನೆ ನೀಡಲಿದ್ದು, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಶ್ರೀಮತಿ ಎಂ.ಕೆ.ಸವಿತಾ ಅಧ್ಯಕ್ಷತೆ ವಹಿಸುವರು. ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಸಮಾರೋಪ ನುಡಿಗಳನ್ನಾಡುವರು. ಮುಖ್ಯ ಅತಿಥಿಗಳಾಗಿ ದಕ್ಷ ಪಿಯು ಕಾಲೇಜಿನ ಅಧ್ಯಕ್ಷ ಡಾ.ಬಿ. ಜಯಚಂದ್ರ ರಾಜು, ಪಿಯು ಕಾಲೇಜಿನ ಪ್ರಾಂಶುಪಾಲ ರತ್ನಾಕರ್ ಶ್ಯಾನಭೋಗ್ ಪಾಲ್ಗೊಳ್ಳುವರು. ಇದೇ ಸಂದರ್ಭದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪಠ್ಯವಾಗಿರುವ ಖ್ಯಾತ ಕಥೆಗಾರರಾದ ಪಿ. ಲಂಕೇಶ್ ಅವರ 'ಮುಟ್ಟಿಸಿಕೊಂಡವನು' ಹಾಗೂ ಡಾ.ಹೆಚ್. ನಾಗವೇಣಿ ಅವರ 'ಧಣಿಗಳ ಬೆಳ್ಳಿಲೋಟ' ಕಥೆಗಳ ರಂಗ ರೂಪ ಪ್ರದರ್ಶನ ನಡೆಯಲಿದೆ ಎಂದು ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಮೈಸೂರಿನಲ್ಲಿ ಶ್ರೀ ಸವಿತಾ ಮಹರ್ಷಿ ಜಯಂತಿ

ಸವಿತಾ ಸಮಾಜವನ್ನು ಪ್ರವರ್ಗ–1ಕ್ಕೆ ಸೇರಿಸುವಂತೆ ಒತ್ತಾಯ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎ.ಎಂ.ನಾಗರಾಜು ಮಾತನಾಡಿದರು.

ಮೈಸೂರು,ಫೆ.14(ಜಿಎ)–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆ.16ರಂದು ಶ್ರೀ ಸವಿತಾ ಮಹರ್ಷಿ ಜಯಂತಿಯನ್ನು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎ.ಎಂ.ನಾಗರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11.30ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಷ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಅನಿಲ್ ಚಿಕ್ಕಮಾದು, ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮರಿತಿಬ್ಬೇಗೌಡ ಅತಿಥಿಗಳಾಗಿ ಭಾಗವಹಿಸಲಿದ್ದು, ಲೇಖಕ ಮೈನ ಲೋಕೇಶ್ ಮುಖ್ಯ ಭಾಷಣ ಮಾಡುವರು. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಸಭಾ ಕಾರ್ಯಕ್ರಮಕ್ಕೂ ಮುನ್ನಾ ಬೆಳಗ್ಗೆ 10.30ಕ್ಕೆ ಇ.ಎಂ.ಮಂಜುಳಾ ತಂಡದವರಿಂದ ಗೀತಗಾಯನ ನಡೆಯಲಿದ್ದು, ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ಸಂಘದಿಂದ ಶ್ರೀ ಸವಿತಾ ಮಹರ್ಷಿಗಳ ಅದ್ಧೂರಿ ಮೆರವಣಿಗೆ ಮಾಡಬೇಕೆಂಬ ಉದ್ದೇಶವಿತ್ತು. ಆದರೆ, ರಾಜ್ಯದಲ್ಲಿ ಬರದ ಛಾಯೆ ಆವರಿಸಿರುವುದರಿಂದ ಮೆರವಣಿಗೆ ಮಾಡುವ ಬದಲು ಅದಕ್ಕೆ ತಗಲುವ ವೆಚ್ಚವನ್ನು ಸಮುದಾಯದ ಅಭಿವೃದ್ಧಿಗೆ ಬಳಸಿಕೊಳ್ಳಲು ಸಂಘ ನಿರ್ಧರಿಸಿದೆ. ಅಂದಿನ ಕಾರ್ಯಕ್ರಮದಲ್ಲಿ ನಮ್ಮ ಸಮುದಾಯವನ್ನು ಪ್ರವರ್ಗ – 1ಕ್ಕೆ ಸೇರಿಸಬೇಕೆಂದು ಜನಪ್ರತಿನಿಧಿಗಳನ್ನು ಒತ್ತಾಯಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ರಾಜೇಶ್, ಮಂಜು, ಧನರಾಜ್, ನರಸಿಂಹಮೂರ್ತಿ, ಅಶೋಕ್‌ಕುಮಾರ್ ಉಪಸ್ಥಿತರಿದ್ದರು.

ಮುಖೇಶ್ ಅಂಬಾನಿಗೆ ಮೈಸೂರು ಮಸಾಲೆ ದೋಸೆ ಬಲು ಇಷ್ಟ!





ಮೈಸೂರು, ಫೆ.14(ಬಿಎಲ್‌ಯು)– ವಿಶ್ವದ ಶ್ರೀಮಂತರಲ್ಲಿ ಒಬ್ಬರಾದ ಮುಖೇಶ್ ಅಂಬಾನಿಗೆ ಮೈಸೂರು ಮಸಾಲ ದೋಸೆ ಬಲು ಇಷ್ಟ.

ಇತ್ತೀಚಿಗೆ ಖಾಸಗಿ ವಾಹಿನಿಗೆ ನೀಡಿದ ಸಂದರ್ಶನವೊಂದರಲ್ಲಿ ತಮ್ಮ ಇಷ್ಟದ ರುಚಿಯಾದ ಆಹಾರ ಪದಾರ್ಥಗಳಲ್ಲಿ ಮಸಾಲೆ ದೋಸೆ ಅಂದರೆ ತುಂಬಾ ಇಷ್ಟ ಎಂದು ತಿಳಿಸಿದ್ದಾರೆ. ಕೆಮಿಕಲ್ ಇಂಜಿನಿಯರ್ ಆಗಿದ್ದಾಗಿನಿಂದಲೂ ನಾನು ಮೈಸೂರು ಮಸಾಲ ದೋಸೆಯನ್ನು ಸವಿಯುತ್ತಿದ್ದೇನೆ. ನನಗೆ ಮಸಾಲೆ ದೋಸೆ ಬೇಕೆಂದಾಗ ಮೈಸೂರು ಕೆಫೆಗೆ ಆರ್ಡರ್ ಮಾಡಿ ತರಿಸಿಕೊಂಡು ತಿನ್ನುತ್ತೇನೆ.

ಮಸಾಲೆ ದೋಸೆ ಮಾತ್ರವಲ್ಲ, ಇಡ್ಲಿ ಕೂಡ ಇಷ್ಟ ಎಂದು ಮುಖೇಶ್ ಅಂಬಾನಿ ಹೇಳಿದ್ದಾರೆ. ಮುಂಬೈನಲ್ಲಿ ರುವ ಆಂಟಿಲಿಯಾ ಎಂಬ 27 ಅಂತಸ್ತಿನ ಮನೆಯಲ್ಲಿ ಮುಖೇಶ್ ಅಂಬಾನಿ ವಾಸವಿದ್ದಾರೆ. ಇದು ಮುಖೇಶ್ ಅಂಬಾನಿಗೆ ಮನೆ ಮತ್ತು ಆಫೀಸ್ ಎರಡೂ ಆಗಿದೆ. ಬೆಳಿಗ್ಗೆಯಿಂದ ರಾತ್ರಿ ತನಕ ನಾನಾ ಮಿಟಿಂಗ್‌ಗಳಲ್ಲಿ ಬ್ಯುಸಿ ಆಗಿ ಇರುವ ಮುಖೇಶ್ ಅಂಬಾನಿ ಬಯಸಿದಾಗ ಮೈಸೂರು ಕೆಫೆಯಿಂದ ಮೈಸೂರು ಮಸಾಲೆ ದೋಸೆ ತರಿಸಿಕೊಂಡು ಚಪ್ಪರಿಸುತ್ತಾರೆ. ಅಲ್ಲದೆ, ತಮ್ಮ ಹಾಗೂ ಪತ್ನಿ, ಮಕ್ಕಳ ಹುಟ್ಟುಹಬ್ಬ ಸೇರಿದಂತೆ ವಿವಿಧ ಸಂಭ್ರಮದ ಕಾರ್ಯಕ್ರಮಗಳಲ್ಲಿ ಗಣ್ಯರಿಗೆ ಮೈಸೂರು ಮಸಾಲೆ ದೋಸೆಯನ್ನೇ ಮಾಡಿಸಿ ಸವಿಯಲು ಅವಕಾಶ ಮಾಡಿಕೊಡುತ್ತಾರೆ.

ಅವೈಜ್ಞಾನಿಕ ರೋಡ್ ಹಂಪ್ಸ್‌ಗೆ ಮೂವರು ಅಮಾಯಕ ಯುವಕರ ಬಲಿ ಹಿನ್ನೆಲೆ

ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು

●ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನಿರ್ಧಾರ ●ರಸ್ತೆ ಸುರಕ್ಷತಾ ಸಂಬಂಧ ಅಧಿಕಾರಿಗಳ ಸಭೆ ●ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ನಿಶ್ಚಿತ



ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ರಸ್ತೆ ಸುರಕ್ಷತಾ ಸಂಬಂಧ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳ ಸಭೆ ನಡೆಸಿದರು. ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರಹಮಾನ್ ಷರೀಫ್, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ, ಎಸಿಪಿ ಪರಶುರಾಮಪ್ಪ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ರಾಜು ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು,ಫೆ.14(ಆರ್‌ಕೆ)– ಅವೈಜ್ಞಾನಿಕ ರೋಡ್ ಹಂಪ್ಸ್, ಅಗತ್ಯ ಸುರಕ್ಷತೆ ಕ್ರಮ ವಹಿಸದೇ ನಿರ್ಲಕ್ಷ್ಯ ವಹಿಸಿ ಅಪಘಾತದಿಂದ ಜನ ಸಾವನ್ನಪ್ಪಲು ಕಾರಣವಾಗುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಹಳೇ ಡಿಸಿ ಕಚೇರಿ ಸಭಾಂಗಣದಲ್ಲಿ ಇಂದು ರಸ್ತೆ ಸುರಕ್ಷತಾ ಸಭೆ ನಡೆಸಿದ ಅವರು, ಪ್ರತಿಯೊಂದು ಜೀವವೂ ಅತ್ಯಮೂಲ್ಯವಾದುದ್ದಾಗಿದ್ದು, ಅಗತ್ಯ ಸುರಕ್ಷತಾ ಕ್ರಮ, ಸಂಚಾರ ನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ ಅಪಘಾತಗಳನ್ನು ತಪ್ಪಿಸಬೇಕೆಂದು ಸಲಹೆ ನೀಡಿದರು.

ಮೈಸೂರು ನಗರದಲ್ಲಿ ಅಗಲವಾದ ರಸ್ತೆಗಳಿದ್ದರೂ ಅವುಗಳನ್ನು ಸರಿಯಾಗಿ ನಿರ್ವಹಣೆ ಮಾಡದ ಕಾರಣ, ರಸ್ತೆ ಅಪಘಾತಗಳು ಸಂಭವಿಸುತ್ತಿವೆ. ಇತ್ತೀಚೆಗಷ್ಟೇ ಮೈಸೂರು ವಿಶ್ವವಿದ್ಯಾನಿಲಯದ ಪ್ರಧಾನ ದ್ವಾರದ ಬಳಿ ಬೋಗಾದಿ ರಸ್ತೆಯಲ್ಲಿ ಅವೈಜ್ಞಾನಿಕವಾಗಿ ರೋಡ್ ಹಂಪ್‌ಗಳನ್ನು ಅಳವಡಿಸಿದ್ದರಿಂದ ನಿಯಂತ್ರಣ ಕಳೆದುಕೊಂಡು ಬೈಕ್‌ನಿಂದ ಬಿದ್ದು ಮೂವರು ಅಮಾಯಕ ಯುವಕರು ಪ್ರಾಣ ಕಳೆದುಕೊಂಡಿರುವುದು ನೋವಿನ ಸಂಗತಿ ಎಂದು ನುಡಿದರು. ಇಂಡಿಯನ್ ರೋಡ್ ಕಾಂಗ್ರೆಸ್ ನಿಯಮಗಳನ್ನು ಗಾಳಿಗೆ ತೂರಿ ರಸ್ತೆ ಡುಬ್ಬಗಳನ್ನು ನಿರ್ಮಿಸಿ ಅಮೂಲ್ಯ ಜೀವ ಬಲಿ ಪಡೆದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದು. ರಸ್ತೆ, ಅಗಲೀಕರಣ ಕಾಮಗಾರಿಗಳು ಹಾಗೂ ರಸ್ತೆ ಡುಬ್ಬ ನಿರ್ಮಿಸುವಾಗ ಸಾರ್ವಜನಿಕರಿಗೆ ಮಾಹಿತಿ ನೀಡಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಂಡು ಹಂಪ್ಸ್, ಜೀಬ್ರಾ ಕ್ರಾಸಿಂಗ್‌ಗಳಲ್ಲಿ ಬಿಳಿ ಪಟ್ಟೆ ಬಳಿಯಬೇಕು ಮತ್ತು ಕಾಮಗಾರಿ ನಡೆಯುತ್ತಿರುವ ಬಗ್ಗೆ ಸೂಚನಾ ಫಲಕಗಳನ್ನು ಅಳವಡಿಸಬೇಕು ಎಂದು ಸೂಚನೆ ನೀಡಿದರು.

ಸೈನ್ ಬೋರ್ಡ್ ಅಳವಡಿಕೆ: ಸಾಂಸ್ಕೃತಿಕ ನಗರಿಗೆ ದೇಶ ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಯಾವ ಯಾವ ರಸ್ತೆಯಲ್ಲಿ ಪ್ರವಾಸಿ ತಾಣಗಳಿಗೆ ಹೋಗಬೇಕು, ಏಕಮುಖ ಸಂಚಾರ, ನೋ ಎಂಟ್ರಿ ಮುಂತಾದ ಮಾಹಿತಿಗಳನ್ನು ಒಳಗೊಂಡ ಸೈನ್ ಬೋರ್ಡ್‌ಗಳನ್ನು ಅಳವಡಿಸಬೇಕಾಗಿದೆ. ವಾಹನಗಳು ಸುಲಲಿತವಾಗಿ ಸಂಚರಿಸಲು ಅನುಕೂಲ ಮಾಡಿಕೊಟ್ಟು, ಎಲ್ಲಿಯಾದರೂ ಅಪಾಯಕಾರಿ ಹೊಂಡ ಅಥವಾ ಡುಬ್ಬಗಳಿದ್ದಲ್ಲಿ ತಕ್ಷಣ ತೆರವುಗೊಳಿಸಬೇಕು. ಇಲಾಖೆ ಅಧಿಕಾರಿಗಳ ನಡುವೆ ಸಮನ್ವಯ ಸಾಧಿಸಿಕೊಂಡು ಮೈಸೂರು ನಗರದಲ್ಲಿ ಉತ್ತಮ ಸಂಚಾರ ವ್ಯವಸ್ಥೆ ಮಾಡುವುದು ನಮ್ಮ ಜವಾಬ್ದಾರಿ. ಅದನ್ನು ಎಂದೂ ಮೈ ಮರೆಯಬಾರದು. ಒಂದು ವೇಳೆ ನಿರ್ಲಕ್ಷ್ಯ ತೋರಿದರೆ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ನಿಶ್ಚಿತ ಎಂದು ಡಾ. ಕೆ.ವಿ. ರಾಜೇಂದ್ರ ಅವರು ಇದೇ ಸಂದರ್ಭ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ವಾಹನ ಸುಗಮ ಸಂಚಾರ ವ್ಯವಸ್ಥೆ: ಮೈಸೂರಿನ ಶಿವರಾಂಪೇಟೆ, ಸಂತೇಪೇಟೆ, ಧನ್ವಂತರಿ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಅಶೋಕ ರಸ್ತೆ ಸೇರಿದಂತೆ ನಗರದಾದ್ಯಂತ ಪ್ರಮುಖ ವಾಣಿಜ್ಯ ಕೇಂದ್ರಗಳ ರಸ್ತೆಗಳಲ್ಲೇ ಗೂಡ್ಸ್ ವಾಹನಗಳು ಲೋಡಿಂಗ್, ಅನ್‌ಲೋಡಿಂಗ್ ಮಾಡುತ್ತಾ ವಾಹನ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿರುವುದು ಆಗಿಂದಾಗ್ಗೆ ಟ್ರಾಫಿಕ್ ಜಾಮ್ ಆಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಬೆಳಗ್ಗೆ ಮತ್ತು ಸಂಜೆ ವೇಳೆ ಈ ಸ್ಥಳದಲ್ಲಿ ಅತೀ ಹೆಚ್ಚು ವಾಹನ ಸಂಚಾರ ದಟ್ಟಣೆ ಹೆಚ್ಚಾಗಿರುತ್ತದೆ. ಈ ಬಗ್ಗೆ ಸಂಚಾರ ಪೊಲೀಸರು ಸ್ಥಳದಲ್ಲಿದ್ದು, ಸುಗಮಗೊಳಿಸಬೇಕು. ಸಿಗ್ನಲ್‌ಗಳಲ್ಲಿ ಹಸಿರು ಚಿಹ್ನೆ ಬರುವ ಮೊದಲೇ ವಾಹನ ಸವಾರರು ಚಾಲನೆ ಮುಂದಾಗುತ್ತಿರುವುದು ಅಪಘಾತಗಳಿಗೆ ಕಾರಣವಾಗಿದೆ. ಈ ಬಗ್ಗೆಯೂ ಗಮನ ಹರಿಸಬೇಕೆಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಆಟೋ, ಸರಕು ಸಾಗಣೆ ವಾಹನ, ಮನೆ ಮನೆಗೆ ಆಹಾರ ಮತ್ತು ಇತರೆ ಪದಾರ್ಥ ತಲುಪಿಸುವ ಸಂಸ್ಥೆಗಳ ವಾಹನಗಳು ಅಡ್ಡಾದಿಡ್ಡಿಯಾಗಿ ಅತೀ ವೇಗವಾಗಿ ಚಲಿಸುತ್ತಿರುವುದರಿಂದ ಅವಘಡಗಳು ಸಂಭವಿಸುತ್ತಿವೆ. ಆ ವಾಹನಗಳ ಚಾಲಕರನ್ನು ಒಂದೆಡೆ ಸೇರಿಸಿ ಕಾರ್ಯಾಗಾರ ನಡೆಸುವ ಮೂಲಕ ಸಂಚಾರ ನಿಯಮಗಳ ಪಾಲನೆ ಮಾಡುವ ಬಗ್ಗೆ ಮನವರಿಕೆ ಮಾಡಿಕೊಡಬೇಕು ಎಂದು ಜಿಲ್ಲಾಧಿಕಾರಿಗಳು ಇದೇ ಸಂದರ್ಭ ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರಹಮಾನ್ ಷರೀಫ್, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ, ಎಸಿಪಿ ಪರಶುರಾಮಪ್ಪ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ರಾಜು ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಫುಟ್‌ಪಾತ್ ಒತ್ತುವರಿ ತೆರವುಗೊಳಿಸಿ

ಮೈಸೂರು ನಗರದಲ್ಲಿ ಫುಟ್‌ಪಾತ್ ಅತಿಕ್ರಮಣ ಹೆಚ್ಚಾಗಿದ್ದು, ಇದರಿಂದ ಪಾದಚಾರಿಗಳು ರಸ್ತೆಯಲ್ಲಿ ನಡೆದಾಡುವ ಅನಿವಾರ್ಯತೆ ಉಂಟಾದ ಪರಿಣಾಮ ಅಪಘಾತಗಳು ಸಂಭವಿಸುತ್ತಿವೆ. ಎಲ್ಲೆಲ್ಲಿ ಫುಟ್‌ಪಾತ್ ಒತ್ತುವರಿಯಾಗಿದೆ ಎಂಬುದನ್ನು ಪರಿಶೀಲಿಸಿ ತೆರವುಗೊಳಿಸಲು ಮುಂದಾಗಬೇಕು. ಅದೇ ರೀತಿ ಅಪಾಯಕಾರಿ ಮರ, ಕೊಂಬೆಗಳನ್ನು ಕತ್ತರಿಸಬೇಕು. ಎಲ್ಲಿಯಾದರೂ ಒಳಚರಂಡಿ ಮ್ಯಾನ್‌ಹೋಲ್‌ಗಳು ಬಾಯಿ ತೆರೆದುಕೊಂಡಿದ್ದರೆ ತಕ್ಷಣ ಮುಚ್ಚಬೇಕು. ಈ ಎಲ್ಲಾ ಕ್ರಮಗಳನ್ನು ಕೈಗೊಂಡು ತಮಗೆ ಒಂದು ವಾರದೊಳಗಾಗಿ ವರದಿ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ತಾಕೀತು ಮಾಡಿದರು.

ಉತ್ತಮ ಸೇವೆಗೆ ಪ್ರಶಸ್ತಿಗಳು ಸಲ್ಲುತ್ತವೆ

ಸನ್ಮಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ



ಸುತ್ತೂರಿನ ಶ್ರೀ ವಾಲ್ಮೀಕಿ ಕ್ಷೇಮಾಭಿವೃದ್ಧಿ ಬಳಗದ ವತಿಯಿಂದ ಸಾಧಕ ಕುಲಬಾಂಧವರನ್ನು ಸನ್ಮಾನಿಸುವ ಗೌರವಿಸುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾ ಪತ್ರಿಕಾ ಸಂಘದ ಸದಸ್ಯ ಹಾಗೂ ಛಾಯಾಚಿತ್ರ ಗ್ರಾಹಕರಾಗಿ ಉತ್ತಮ ಸೇವೆ ಸಲ್ಲಿಸಿದ ಸುತ್ತೂರು ನಂಜುಂಡನಾಯಕ ಅವರನ್ನು ಸನ್ಮಾನಿಸಿದರು.

ಸುತ್ತೂರು,ಫೆ.14–ಯಾವುದೇ ಕ್ಷೇತ್ರದಲ್ಲಾದರೂ ಉತ್ತಮ ಸೇವೆಯನ್ನು ನಿಸ್ವಾರ್ಥವಾಗಿ ಸಲ್ಲಿಸಿದಲ್ಲಿ ಯಾವುದೇ ವ್ಯಕ್ತಿಗೆ ಪ್ರಶಸ್ತಿಗಳು ತಾನಾಗೇ ಹುಡುಕಿಕೊಂಡು ಬರುತ್ತವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುತ್ತೂರು ಸುಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ನಂಜನಗೂಡು ತಾಲೂಕು ಸುತ್ತೂರಿನ ಶ್ರೀ ವಾಲ್ಮೀಕಿ ಕ್ಷೇಮಾಭಿವೃದ್ಧಿ ಬಳಗದ ವತಿಯಿಂದ ಸಾಧಕ ಕುಲಬಾಂಧವರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಜಿಲ್ಲಾ ಪತ್ರಿಕಾ ಸಂಘದ ಸದಸ್ಯರಾಗಿ ಹಾಗೂ ಛಾಯಾಚಿತ್ರಗ್ರಾಹಕರಾಗಿ ಉತ್ತಮ ಸೇವೆ ಸಲ್ಲಿಸಿದ ಸುತ್ತೂರು ನಂಜುಂಡನಾಯಕ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಸುತ್ತೂರು ನಂಜುಂಡನಾಯಕ, ತಮ್ಮ ಇಳಿವಯಸ್ಸಿನಲ್ಲೂ ನಿಸ್ವಾರ್ಥ ಸೇವೆ ಸಲ್ಲಿಸುತ್ತಾ ಜಿಲ್ಲಾ ಪತ್ರಕರ್ತರ ಸಂಘದಿಂದ ಅತ್ಯುತ್ತಮ ಛಾಯಾಚಿತ್ರ ಪ್ರಶಸ್ತಿ, 2023ನೇ ಸಾಲಿನ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮತ್ತು ಬೆಂಗಳೂರಿನಲ್ಲಿ ಇಂಟರ್ ನ್ಯಾಷನಲ್ ಅಚೀವರ್ಸ್ ಕೌನ್ಸಿಲ್‌ನಿಂದ ಗೌರವ ಡಾಕ್ಟರೇಟ್ ಪದವಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದು, ಯಾವುದೇ ವಯಸ್ಸಿನಲ್ಲಿ ಉತ್ಸಾಹ ಕಳೆದುಕೊಳ್ಳದೇ ಸೇವೆ ಸಲ್ಲಿಸಿದರೆ ಪ್ರಶಸ್ತಿಗಳು ತಾನಾಗೇ ಹುಡುಕಿಕೊಂಡು ಬರುತ್ತವೆ. ಆದ್ದರಿಂದ ಎಲ್ಲರೂ ತಾವು ಮಾಡುವ ಕೆಲಸದಲ್ಲೇ ಅತ್ಯುತ್ತಮ ನಿರ್ವಹಣೆ ತೋರಿದರೆ ಎಲ್ಲರೂ ಪ್ರಶಸ್ತಿಗೆ ಭಾಜನರಾಗಬಹುದು ಎಂದು ತಿಳಿಸಿದರು.

ಇದೇ ವೇಳೆ ಸುತ್ತೂರು ಶ್ರೀಗಳಾದ ಶ್ರೀ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸಭೆಯಲ್ಲಿ ಆಶೀರ್ವಚನ ನೀಡಿದರು. ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ, ಪ್ರಾಂಶುಪಾಲರಾದ ಸುತ್ತೂರು ಮಾಲಿನಿ, ಹೊಸಕೋಟೆ ಮಂಜುನಾಥ್, ಗ್ರಾ.ಪಂ ಅಧ್ಯಕ್ಷ ರವಿ, ಕಟ್ಟೆ ಯಜಮಾನ್ ಗೋವಿಂದನಾಯಕ, ಯ.ರಂಗಪ್ಪ, ವಾಲ್ಮೀಕಿ ಕ್ಷೇಮಾಭಿವೃದ್ಧಿ ಬಳಗದ ಅಧ್ಯಕ್ಷ ಎಸ್.ರವಿಕುಮಾರ್, ಉಪಾಧ್ಯಕ್ಷ ಸಿದ್ದನಾಯಕ, ಕಾರ್ಯದರ್ಶಿ ನಂಜುಂಡಸ್ವಾಮಿ, ಖಜಾಂಚಿ ಎಸ್.ಎಂ.ಮಂಜುನಾಥ್, ಸಹಕಾರ್ಯದರ್ಶಿ ಎಂ.ರಘು, ಸಂಘಟನಾ ಕಾರ್ಯದರ್ಶಿ ಎಸ್.ಎಂ, ರವಿಕುಮಾರ್ ಸೇರಿದಂತೆ ಗ್ರಾಮದ ಮುಖಂಡರು ಹಾಜರಿದ್ದರು.

ಇಂದಿನಿಂದ ಮೈಸೂರಲ್ಲಿ 'ಮೈಸೂರು ಫ್ಯಾಷನ್ ವೀಕ್' 7ನೇ ಆವೃತ್ತಿ ಆರಂಭ



ಸುದ್ದಿಗೋಷ್ಠಿಯಲ್ಲಿ ಡಿಸೈನರ್ ಜಯಂತಿ ಬಲ್ಲಾಳ್ ಮಾತನಾಡಿದರು.

ಮಾಡೆಲ್‌ಗಳು, ಡಿಸೈನರ್‌ಗಳು, ವಿನ್ಯಾಸಕಾರರು, ನಟ–ನಟಿಯರು, ಮೇಕಪ್ ಕಲಾವಿದರು ಭಾಗಿ

ಮೈಸೂರು, ಫೆ.14(ಜಿಎ)–ದಕ್ಷಿಣ ಭಾರತದಲ್ಲಿ ಖ್ಯಾತಿಗಳಿಸಿರುವ 'ಮೈಸೂರು ಫ್ಯಾಷನ್ ವೀಕ್' ನ ಏಳನೇ ಆವೃತ್ತಿಯನ್ನು ಮೈಸೂರಿನ ಕೈಗಾರಿಕಾ ಪ್ರದೇಶದಲ್ಲಿರುವ ಮೈಸೂರು ಯೂನಿಯನ್ ಆವರಣದಲ್ಲಿ ಫೆ15 ಮತ್ತು 16ರಂದು ಆಯೋಜಿಸಲಾಗಿದೆ ಎಂದು ಖ್ಯಾತ ಡಿಸೈನರ್ ಜಯಂತಿ ಬಲ್ಲಾಳ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಫ್ಯಾಷನ್ ವೀಕ್‌ನ 7ನೇ ಆವೃತ್ತಿಯಲ್ಲಿ ರಮೇಶ್ ಡೆಂಬ್ಲಾ, ಪಂಕಜ್ ಸೋನಿ, ಚೈತನ್ಯ ರಾವ್, ಮೇಘಾ ಕಪೂರ್, ರೇಷ್ಮಾ ಕುನ್ಹಿ, ಕಿಂಗ್ ಶುಕ್ ಭದುರಿ, ನಜೀಮ್ ಅಲಿ ಖಾನ್, ಸಂತೋಷ್‌ಕುಮಾರ್, ಡ್ರೀಮ್ ಝೋನ್ ಎಜುಕೇಶನ್, ರಾಣಿ ಪಿಂಕ್, ರೆಹಾನ್ ಶಾ ಸೇರಿದಂತೆ ಪ್ರತಿಭಾವಂತ ವಿನ್ಯಾಸಕರು ಪ್ರದರ್ಶನದಲ್ಲಿ ಭಾಗವಹಿಸಲಿದ್ದು, ಸೃಜನಶೀಲತೆ, ನಾವೀನ್ಯತೆಯ ಬೆರಗುಗೊಳಿಸುವ ಪ್ರದರ್ಶನವಿರಲಿದೆ ಎಂದರು.

ಈ ಬಾರಿ 13 ಡಿಸೈನರ್‌ಗಳು, 18 ಮೇಕಪ್ ಕಲಾವಿದರು ಮತ್ತು 51 ಮಾಡೆಲ್‌ಗಳು ಫ್ಯಾಷನ್ ಶೋನಲ್ಲಿ ಭಾಗವಹಿಸಲಿದ್ದಾರೆ. ನಟಿ ಮಧುರಿಮಾ ತುಳಿ, ನಟ ದಿಗಂತ್ ಮಂಚಾಲೆ, ಐಂದ್ರಿತಾ ರೈ ಮೊದಲ ದಿನದ ಶೋ ಸ್ಟಾಪರ್‌ಗಳಾಗಿ ಕಾಣಿಸಿಕೊಳ್ಳಲಿದ್ದಾರೆ. ಎರಡನೇ ದಿನ ಬಾಲಿವುಡ್ ನಟಿ ನಿಮ್ರತ್ ಕೌರ್ ಅವರು ಬ್ರಾಂಡ್ ಮೈಸೂರು ಲೋಗೋದಲ್ಲಿರುವ ಅಂಶಗಳನ್ನು ಇಟ್ಟುಕೊಂಡು ಡಿಸೈನ್ ಮಾಡಿರುವ ವಸ್ತ್ರವನ್ನು ಧರಿಸಿಕೊಂಡು ವಾಕ್ ಮಾಡಲಿದ್ದಾರೆ. ಎರಡು ದಿನಗಳ ಶೋಗೆ ಆಗಮಿಸುವವರು ಕಾರ್ಯಕ್ರಮದ ಸ್ಥಳದಲ್ಲಿಯೇ ಪಾಸ್‌ಗಳನ್ನು ಪಡೆದುಕೊಳ್ಳಬಹುದು ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮ ಸಂಯೋಜಕ ಗ್ಯಾಬಿನ್ ಉಪಸ್ಥಿತರಿದ್ದರು.

ಪರೀಕ್ಷಾ ಪ್ರಾಧಿಕಾರದ ಯಡವಟ್ಟು; ಪಾಪ, ಪರೀಕ್ಷಾರ್ಥಿಗಳ ಪರದಾಟ

ಮೈಸೂರು, ಫೆ. 14(ಆರ್‌ಕೆ)– ಸರ್ಕಾರಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅವೈಜ್ಞಾನಿಕವಾಗಿ ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸಿರುವುದರಿಂದ ಪರೀಕ್ಷಾರ್ಥಿಗಳು ಪರದಾಡುವಂತಾಗಿದೆ.



ಉದಾಹರಣೆಗೆ ಮೈಸೂರು ನಗರ ಮತ್ತು ಜಿಲ್ಲೆಯ ಅಭ್ಯರ್ಥಿಗಳಿಗೆ ಉತ್ತರ ಕರ್ನಾಟಕ ಜಿಲ್ಲೆಯ ಕಾಲೇಜುಗಳನ್ನು ಪರೀಕ್ಷಾ ಕೇಂದ್ರವಾಗಿ ನಿಗದಿ ಮಾಡಲಾಗುತ್ತಿದೆ. ಅದೇ ರೀತಿ ಅಲ್ಲಿನ ಅಭ್ಯರ್ಥಿಗಳಿಗೆ ಇಲ್ಲಿನ ಕಾಲೇಜುಗಳನ್ನು ಪರೀಕ್ಷಾ ಕೇಂದ್ರವಾಗಿ ನಿಗದಿಪಡಿಸಲಾಗುತ್ತಿದ್ದು, ಇದು ಅವೈಜ್ಞಾನಿಕವಾಗಿದೆ ಎಂಬ ಅಸಮಾಧಾನದ ಕೂಗು ಕೇಳಿ ಬರುತ್ತಿದೆ. ಈ ಪರೀಕ್ಷೆಗಳು ಬೆಳಗ್ಗೆ ಪ್ರಾರಂಭವಾಗುವುದರಿಂದ 500–600 ಕಿ.ಮೀ. ದೂರದ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಅಭ್ಯರ್ಥಿಗಳು ಹಿಂದಿನ ದಿನವೇ ಸದರಿ ಊರಿಗೆ ಹೋಗಿ ವಾಸ್ತವ್ಯ ಹೂಡಬೇಕಾಗುತ್ತದೆ. ಹೀಗೆ ದೂರದ ಊರುಗಳಿಗೆ ತೆರಳಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಅಭ್ಯರ್ಥಿಗಳು ಪ್ರಯಾಣದ ವೆಚ್ಚ ಹಾಗೂ ವಾಸ್ತವ್ಯದ ಖರ್ಚು ಸೇರಿ ಸಾವಿರಾರು ರೂ. ವೆಚ್ಚ ಮಾಡಬೇಕಾಗುತ್ತದೆ. ಅಪರಿಚಿತ ಊರಿನಲ್ಲಿ ಪರೀಕ್ಷಾ ಕೇಂದ್ರವನ್ನು ಹುಡುಕಿ ಅಲ್ಲಿಗೆ ತೆರಳುವಷ್ಟರಲ್ಲಿಯೇ ಅಭ್ಯರ್ಥಿಗಳು ಹೈರಾಣಾಗಿದ್ದು, ಪರೀಕ್ಷೆ ಬರೆಯುವ ಉತ್ಸಾಹವನ್ನೇ ಕಳೆದುಕೊಳ್ಳುವ ಅಪಾಯವೂ ಇದೆ. ದೂರದ ಜಿಲ್ಲೆಗಳಿಗೆ ಹೋಗಿ ಬರಲು ಹೆಚ್ಚು ಹಣ ಖರ್ಚಾಗಲಿದ್ದು, ಸಮಯವೂ ಜಾಸ್ತಿ ಬೇಕಾಗಿರುವುದರಿಂದ ಎಷ್ಟೋ ಅಭ್ಯರ್ಥಿಗಳು ಪರೀಕ್ಷೆಗೆ ಗೈರು ಹಾಜರಾಗುತ್ತಿದ್ದಾರೆ. ಆಯಾ ಜಿಲ್ಲೆಯ ಅಭ್ಯರ್ಥಿಗಳಿಗೆ ಆ ಜಿಲ್ಲಾ ಕೇಂದ್ರಗಳಲ್ಲೇ ಅಥವಾ ನೆರೆಹೊರೆಯ ಜಿಲ್ಲಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲು ಅನುವು ಮಾಡಿಕೊಟ್ಟರೆ ಅಭ್ಯರ್ಥಿಗಳಿಗೆ ಅನುಕೂಲವಾಗುತ್ತದೆ. ಹಾಜರಾತಿ ಪ್ರಮಾಣವೂ ಹೆಚ್ಚಾಗಲಿದೆ. ಉತ್ತರ ಕರ್ನಾಟಕದವರನ್ನು ರಾಜ್ಯದ ದಕ್ಷಿಣ ಭಾಗಕ್ಕೂ ಪೂರ್ವ ಭಾಗದ ಜಿಲ್ಲೆಯವರಿಗೆ ಮಂಗಳೂರು, ಉಡುಪಿ ಚಿಕ್ಕಮಗಳೂರು ಜಿಲ್ಲೆಗಳಿಗೆ ಪರೀಕ್ಷೆ ಬರೆಯಲು ನಿಗದಿ ಮಾಡಿದರೆ ಉದ್ಯೋಗಾಕಾಂಕ್ಷಿ ನಿರುದ್ಯೋಗಿಗಳಿಗೆ ತೀವ್ರ ತೊಂದರೆಯಾಗುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಕರ್ನಾಟಕ ಲೋಕಸೇವಾ ಆಯೋಗ, ರಾಜ್ಯ ಪೊಲೀಸ್ ಇಲಾಖೆ ಸೇರಿದಂತೆ ಹಲವು ಪ್ರಾಧಿಕಾರಗಳು ಈ ಸಮಸ್ಯೆಗೆ ಪರಿಹಾರ ಒದಗಿಸಬೇಕು. ಇಲ್ಲದಿದ್ದರೆ ಅನುಕೂಲಗಳಿಲ್ಲದ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗುವುದೇ ದುಸ್ತರವಾಗುತ್ತಿದೆ ಎಂದು ನಿರುದ್ಯೋಗಿ ಯುವಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಚಾ.ನಗರ ಲೋಕಸಭಾ ಕ್ಷೇತ್ರದಿಂದ ಕೂಡ್ಲೂರು ಶ್ರೀಧರಮೂರ್ತಿ ಬಿಜೆಪಿ ಟಿಕೆಟ್ ಆಕಾಂಕ್ಷಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕೂಡ್ಲೂರು ಆರ್.ಶ್ರೀಧರಮೂರ್ತಿ ಪ್ರಧಾನಿ ಮಂತ್ರಿ ನರೇಂದ್ರ ಮೋದಿಯವರ 10 ವರ್ಷಗಳ ಸಾಧನೆಯ ಕರಪತ್ರ ಬಿಡುಗಡೆಗೊಳಿಸಿದರು.

ಮೈಸೂರು,ಫೆ.14(ಜಿಎ)–ಈ ಬಾರಿಯ ಲೋಕಸಭೆ ಚುನಾವಣೆಗೆ ಚಾಮರಾಜ ನಗರ ಲೋಕಸಭಾ ಮೀಸಲು ಕ್ಷೇತ್ರಕ್ಕೆ ನಾನು ಸಹ ಬಿಜೆಪಿ ಪ್ರಬಲ ಟಿಕೆಟ್ ಆಕಾಂಕ್ಷಿ ಎಂದು ಎಸ್‌ಸಿ ಮೋರ್ಚಾ ರಾಜ್ಯ ಸಮಿತಿ ಸದಸ್ಯ ಕೂಡ್ಲೂರು ಆರ್.ಶ್ರೀಧರಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಲೋಕಸಭೆ ಚುನಾವಣೆಗೆ ಪಕ್ಷದ ಸದಸ್ಯತ್ವ ಪಡೆ ಯದಿರುವವರು, ಹೊಸಬರು ಟಿಕೆಟ್ ಕೇಳುತ್ತಿರುವುದು ಖಂಡನೀಯ. ಈ ಹಿನ್ನೆಲೆಯಲ್ಲಿ ವರಿಷ್ಠರು ನನಗೆ ಒಂದು ಅವಕಾಶ ಕಲ್ಪಿಸಬೇಕು' ಎಂದು ಮನವಿ ಮಾಡಿದರು.

ಕಳೆದ 22 ವರ್ಷಗಳಿಂದ ಭಾರತೀಯ ಜನತಾ ಪಕ್ಷದಲ್ಲಿ ಸಕ್ರಿಯ ಕಾರ್ಯ ಕರ್ತನಾಗಿ ತೊಡಗಿಕೊಂಡಿರುವೆ. ಪಕ್ಷಕ್ಕೆ ನಿಷ್ಠಾವಂತನಾಗಿ ತಾಲೂಕು, ಜಿಲ್ಲೆ, ರಾಜ್ಯ ಮಟ್ಟದ ಎಸ್‌ಸಿ ಮೋರ್ಚಾ ಸದಸ್ಯನಾಗಿ ಹಾಗೂ ಚಾಮರಾಜ ನಗರ ಜಿಲ್ಲೆಯ ಉಸ್ತು ವಾರಿಯಾಗಿಯೂ ಸೇವೆ ಸಲ್ಲಿಸಿದ್ದೇನೆ ಎಂದರು. ಇದೇ ಸಂದರ್ಭ ದಲ್ಲಿ ಪ್ರಧಾನಿ ಮೋದಿಯವರ 10 ವರ್ಷಗಳ ಸಾಧನೆ, ದೇಶಕ್ಕೆ ಹಾಗೂ ಜನಸಾಮಾನ್ಯರಿಗೆ ಮಾಡಿರುವ ಜನಪರ ಯೋಜನೆಗಳು, ಅಂಬೇಡ್ಕರ್ ಅವರ ಪಂಚತೀರ್ಥ ಯೋಜನೆ ಗಳನ್ನು ಅನುಷ್ಠಾನಗೊಳಿಸಿರುವ ಕರಪತ್ರ ಗಳನ್ನು ಬಿಡುಗಡೆ ಮಾಡಿದರು. ಸುದ್ದಿ ಗೋಷ್ಠಿಯಲ್ಲಿ ಗ್ರಾಪಂ ಸದಸ್ಯ ರಂಗಸ್ವಾಮಿ, ಪುಟ್ಟಮಾದಯ್ಯ, ಪ್ರಭಾಕರ್ ಉಪಸ್ಥಿತರಿದ್ದರು.

ಸಾರ್ವಜನಿಕ ತಿಳುವಳಿಕೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಮರಯ್ಯ ರವರ ಧರ್ಮಪತ್ನಿ ಶ್ರೀಮತಿ ಪುಟ್ಟಮಾದಮ್ಮ ಮತ್ತು ಕುಟುಂಬದವರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರಿಗೆ ದಿನಾಂಕ: 12.09.2009 ರಂದು ಸ್ಥಿರ ಸ್ವತ್ತಿನ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಬರೆದುಕೊಟ್ಟು ಮುಂಗಡ ಹಣವನ್ನು ಪಡೆದುಕೊಂಡಿರುತ್ತಾರೆ. ಸದರಿ ಶ್ರೀಮತಿ ಪುಟ್ಟಮಾದಮ್ಮ ಮತ್ತು ಕುಟುಂಬದವರು ಕ್ರಯದ ಒಪ್ಪಂದದ ಕರಾರಿನಂತೆ ಕ್ರಯಪತ್ರವನ್ನು ಬರೆದುಕೊಡಲು ವಿಫಲರಾದುದರಿಂದ ನಮ್ಮ ಕಕ್ಷಿದಾರರಾದ ಮೈಸೂರು ನಗರ, ಜೆ.ಪಿ.ನಗರ, 'ಎ' ಬ್ಲಾಕ್, 1ನೇ ಮುಖ್ಯರಸ್ತೆ, ಶ್ರೀಗಂಧ, ಮನೆ.ನಂ.50ರಲ್ಲಿ (ಹಳೇ ವಿಳಾಸ: ನಂ.4, ಕೆ.ಲಿಂಗಯ್ಯ ಕಾಲೋನಿ, ನಜರ್‌ಬಾದ್, ಮೈಸೂರು ನಗರ) ವಾಸವಾಗಿರುವ ಶ್ರೀ ಆರ್. ಎಸ್. ರಾಜಶೇಖರರವರ ಮಗನಾದ ಶ್ರೀ ಆರ್. ವೀರೇಶ್ ರವರು ಮೇಲ್ಕಂಡ ಶ್ರೀಮತಿ ಪುಟ್ಟಮಾದಮ್ಮ ಮತ್ತು ಕುಟುಂಬದವರುಗಳ ವಿರುದ್ಧ ಮೈಸೂರಿನ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 308/2021 ರಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಘನ ನ್ಯಾಯಾಲಯವು ಶ್ರೀಮತಿ ಪುಟ್ಟಮಾದಮ್ಮ ಮತ್ತು ಕುಟುಂಬ ವರ್ಗದವರ ವಿರುದ್ಧ ಷೆಡ್ಯೂಲ್ ಸ್ವತ್ತನ್ನು ಬೇರೇ ಯಾರಿಗೂ ಯಾವುದೇ ವಿಧದಲ್ಲೂ ಪರಭಾರೆ ಮಾಡ ಬಾರದೆಂದು ತಡೆಯಾಜ್ಞೆಯನ್ನು ನೀಡಿರುತ್ತದೆ ಹಾಗೂ ಸದರಿ ದಾವೆಯು ನ್ಯಾಯಾಲಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುತ್ತದೆ.

ಆದಾಗಿ, ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ, ಇತ್ತೀಚಿಗೆ ಬೇರೆ ಯಾರೋ ಪರಭಾರೆ ವ್ಯವಹಾರ ಮಾಡುತ್ತಿದ್ದಾರೆ ಎಂಬ ವಿಚಾರವು ನಮ್ಮ ಕಕ್ಷಿದಾರರಿಗೆ ತಿಳಿದು ಬಂದಿದ್ದು, ಈ ಸಂಬಂಧ ಯಾರೂ ವ್ಯವಹಾರವನ್ನು ಮಾಡಬಾರದೆಂದು, ಒಂದು ವೇಳೆ ವ್ಯವಹಾರವನ್ನು ಮಾಡಿದ ಪಕ್ಷದಲ್ಲಿ ಅದರಿಂದ ಉಂಟಾಗುವ ಕಷ್ಟ ನಷ್ಟಗಳಿಗೆ ನೀವುಗಳೇ ಜವಾಬ್ದಾರರಾಗಿರುತ್ತೀರಿ ವಿನಃ ನಮ್ಮ ಕಕ್ಷಿದಾರರನ್ನು ಬಧ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮದ ಸರ್ವೆ ನಂಬರ್ 371 ರಲ್ಲಿ ವಿಸ್ತೀರ್ಣ 4 ಎಕರೆ 00 ಗುಂಟೆ ಜಮೀನಿಗೆ ಚೆಕ್ಕುಬಂಧಿ:

ಪೂರ್ವಕ್ಕೆ: ಸರ್ವೆ ನಂಬರ್ 372ರ ಜಮೀನು,
ಪಶ್ಚಿಮಕ್ಕೆ: ಸರ್ವೆ ನಂಬರ್ 369ರ ಜಮೀನು,
ಉತ್ತರಕ್ಕೆ: ಸರ್ವೆ ನಂಬರ್ 45ರ ಜಮೀನು,
ದಕ್ಷಿಣಕ್ಕೆ: ಸರ್ವೆ ನಂಬರ್ 45ರ ಜಮೀನು.

ಶ್ರೀ ಮಹದೇವಸ್ವಾಮಿ .ಪಿ. ಬಿ.ಎ.ಎಲ್, ಎಲ್.ಎಲ್.ಬಿ
ವಕೀಲರು, ನಂ. 218/ಕೆ–30,
ನಾರಾಯಣಶಾಸ್ತ್ರಿ ರಸ್ತೆ, ಕೆ.ಆರ್. ಮೊಹಲ್ಲಾ,
ಮೈಸೂರು. Mob: 97423 40603

ಮಂಡ್ಯದಲ್ಲಿ ಮಹಿಳಾ ಪೊಲೀಸ್ ಪೇದೆಗೆ ಅಡ್ಡ ಬಂದ ಹಸು

ಹಸು ಸಾಕಿದ್ದ ಮಹಿಳೆಯನ್ನು ಠಾಣೆಗೆ ಕರೆದೊಯ್ದು ಹಲ್ಲೆ ಆರೋಪ

ಮಹಿಳಾ ಸಂಘಟನೆಗಳಿಂದ ಪ್ರತಿಭಟನೆ, ಪಿಎಸ್ಐ ಅಮಾನತು

ಮಂಡ್ಯ,ಫೆ.14– ರಸ್ತೆಗೆ ಕಟ್ಟಿದ ಹಸುವೊಂದು ದ್ವಿಚಕ್ರವಾಹನದಲ್ಲಿ ಚಲಿಸುತ್ತಿದ್ದ ಮಹಿಳಾ ಪೊಲೀಸ್ ಸಿಬ್ಬಂದಿಗೆ ಅಡ್ಡಬಂತು ಎಂಬ ಕಾರಣಕ್ಕೆ ಹಸು ಸಾಕಿದ್ದ ರೈತ ಮಹಿಳೆಯನ್ನು ಪೊಲೀಸ್ ಠಾಣೆಗೆ ಕರೆದೊಯ್ದು ಹಲ್ಲೆ ನಡೆಸಿದ್ದು, ರೊಚ್ಚಿಗೆದ್ದ ಮಹಿಳಾ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದ ಘಟನೆ ವರದಿಯಾಗಿದೆ.

ಮಂಡ್ಯದ ಅಶೋಕ ನಗರದ ವಿವೇಕಾನಂದ ಜೋಡಿ ರಸ್ತೆಯ ರವಿ ನರ್ಸಿಂಗ್ ಹೋಂ ಪಕ್ಕದಲ್ಲಿ ವಾಸವಾಗಿರುವ ರೂಪಾದೇವಿ(40) ಎಂಬುವರೇ ಹಲ್ಲೆಗೊಳಗಾದವರು. ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.



ಮಂಡ್ಯದಲ್ಲಿ ಹಲ್ಲೆಯನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ಮಹಿಳಾ ಸಂಘಟನೆ ಕಾರ್ಯಕರ್ತರು.

ರೂಪಾದೇವಿ ಹಸುಗಳನ್ನು ಸಾಕಿದ್ದು, ಬೆಳಿಗ್ಗೆ ಮತ್ತು ಸಂಜೆಯ ವೇಳೆ ಹಾಲು ಕರೆಯುವ ಸಲುವಾಗಿ ರಸ್ತೆಯಲ್ಲಿ ಕಟ್ಟಿ ಹಾಕಿ ಹಾಲು ಕರೆಯುತ್ತಿದ್ದರು. ಇದರಿಂದ ಟ್ರಾಫಿಕ್ ಜಾಮ್ ಉಂಟಾಗುತ್ತದೆ ಎಂದು ಪೂರ್ವ ಠಾಣೆ ಪೊಲೀಸರು ಆಕೆಯನ್ನು ವಶಕ್ಕೆ ಪಡೆದು ಠಾಣೆಯಲ್ಲಿ ಮನಸೋ ಇಚ್ಛೆ ಥಳಿಸಿದ್ದಾರೆ ಎಂದು ಆಪಾದಿಸಲಾಗಿದೆ.

ಘಟನೆಯ ವಿವರ: ರೂಪಾದೇವಿ ಮತ್ತು ಕುಟುಂಬ ಹಲವು ವರ್ಷಗಳಿಂದ ಹಸುಗಳನ್ನು ಸಾಕಿಕೊಂಡು ಜೀವನ ನಡೆಸುತ್ತಿದ್ದು, ಹಸು ಸಾಕಿರುವ ಜಾಗ ಕಿಷ್ಕಿಂದೆಯಿಂದ ಕೂಡಿರುವುದರಿಂದ ಜೋಡಿ ರಸ್ತೆಯಲ್ಲಿ ಹಸು ಕಟ್ಟಿ ಹಾಕಿ ಹಲವು ವರ್ಷಗಳಿಂದ ಹಾಲು ಕರೆಯುವುದು ಅಭ್ಯಾಸ. ಜನನಿಬಿಡ ಪ್ರದೇಶವಾಗಿರುವುದರಿಂದ ಜೋಡಿ ರಸ್ತೆಯಲ್ಲಿ ಸಂಜೆ ವೇಳೆ ಟ್ರಾಫಿಕ್ ಹೆಚ್ಚಾಗಿರುತ್ತದೆ. ಇತ್ತೀಚೆಗೆ ಸಂಜೆ ಸಮಯದಲ್ಲಿ ರಸ್ತೆಯಲ್ಲಿ ಹಸು ಕಟ್ಟಿದ್ದಾಗ ಪೂರ್ವ ಠಾಣೆ ಸಿಬ್ಬಂದಿ ವನಜಾಕ್ಷಿ ಅವರಿಗೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ ಹಸು ಅಡ್ಡ ಬಂದಿದೆ.

ಇದರಿಂದ ಸಿಡಿಮಿಡಿಗೊಂಡ ವನಜಾಕ್ಷಿ ರೂಪಾಗೆ ರಸ್ತೆಯಲ್ಲಿ ಹಸು ಕಟ್ಟದಂತೆ ತಾಕೀತು ಮಾಡಿ ಅಲ್ಲಿಂದ ತೆರಳಿದ್ದರು. ಆದರೆ ವನಜಾಕ್ಷಿ ಅದೇ ರಸ್ತೆಯಲ್ಲಿ ಓಡಾಡುವಾಗ ಎಂದಿನಂತೆ ರಸ್ತೆಯಲ್ಲೇ ಹಸು ಕಟ್ಟಿರುವುದನ್ನು ಗಮನಿಸಿ, ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಸೋಮವಾರ ಪೂರ್ವ ಠಾಣೆ ಪೊಲೀಸರು ಅದೇ ರಸ್ತೆಯಲ್ಲಿ ಸಂಚರಿಸುವಾಗ ರೂಪಾ ಹಸು ಕಟ್ಟಿದ್ದರಿಂದ ವಿವೇಕಾನಂದ ಜೋಡಿ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆಗಿದೆ ಎಂಬ ಕಾರಣಕ್ಕೆ ರೂಪಾಳನ್ನು ಜೀಪ್‌ನಲ್ಲಿ ಠಾಣೆಗೆ ಕರೆದೊಯ್ದು ಮನಸೋ ಇಚ್ಛೆ ಹಲ್ಲೆ ಮಾಡಿದ್ದಾರೆ ಎಂದು ಆಪಾದಿಸಲಾಗಿದೆ.

ಆಕೆಯನ್ನು ಠಾಣೆಗೆ ಕರೆತಂದಾಗ ನಿಯಮದಂತೆ ಮಹಿಳಾ ಪೊಲೀಸ್ ಸಿಬ್ಬಂದಿ ಇರಬೇಕು. ಆದರೆ ಯಾವುದೇ ಮಹಿಳಾ ಪೊಲೀಸ್ ಸಿಬ್ಬಂದಿ ಇರಲಿಲ್ಲ. ಪಿಎಸ್ಐ ಅಯ್ಯನ್‌ಗೌಡ ಸೇರಿದಂತೆ ಇಬ್ಬರು ನನ್ನ ಮೇಲೆ ಮನಸೋ ಇಚ್ಛೆ ಹಲ್ಲೆ ಮಾಡಿದರು ಎಂದು ಹಲ್ಲೆಗೊಳಗಾದ ರೂಪ ಆರೋಪಿಸಿದ್ದಾರೆ. ಹಲ್ಲೆಗೊಳಗಾದ ರೂಪಾಗೆ ಎರಡು ಕೈ ಹಾಗೂ ಕಾಲಿಗೆ ಗಂಭೀರ ಸ್ವರೂಪದ ಪೆಟ್ಟಾಗಿದ್ದು, ಆಕೆಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಹೋರಾಟಗಾರರು ಠಾಣೆಗೆ ಭೇಟಿ ಕೊಡುತ್ತಲೇ ಆಕೆಯನ್ನು ಬಿಟ್ಟು ಕಳುಹಿಸಿದ ಪೊಲೀಸರು, ಬಳಿಕ ರೂಪಾಳನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿ, ಚಿಕಿತ್ಸೆ ಕೊಡಿಸಲಾಗುತ್ತಿದೆ.

ಅಮಾನತಿಗೆ ಆಗ್ರಹಿಸಿ ಪ್ರತಿಭಟನೆ: ಮಹಿಳೆ ಮೇಲೆ ದೌರ್ಜನ್ಯ ಮಾಡಿರುವ ಪೂರ್ವ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಅಯ್ಯನ್ ಗೌಡ ಸೇರಿದಂತೆ ಠಾಣೆಯ ಪೊಲೀಸರನ್ನು ಸೇವೆಯಿಂದ ಅಮಾನತು ಮಾಡುವಂತೆ ಒತ್ತಾಯಿಸಿ ಪ್ರಗತಿಪರ ಮಹಿಳಾ ಸಂಘಟನೆಗಳ ಕಾರ್ಯಕರ್ತರು ಠಾಣೆಯ ಮುಂದೆ ಬೆಳಿಗ್ಗೆ ಪ್ರತಿಭಟನೆ ನಡೆಸಿದರು.

ನಗರದ ಪೂರ್ವ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿ ಮಹಿಳೆ ಮೇಲೆ ದೌರ್ಜನ್ಯ ನಡೆಸಿರುವ ಪೊಲೀಸರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಯಾವುದೇ ದೂರು ಇಲ್ಲದಿದ್ದರೂ ಅಮಾಯಕ ಮಹಿಳೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಬಲವಂತವಾಗಿ ಜೀಪ್‌ಗೆ ಹತ್ತಿಸಿಕೊಂಡು ಠಾಣೆಗೆ ಕರೆತಂದು ಕೋಣೆಯೊಂದರಲ್ಲಿ ಕೂಡಿ ಹಾಕಿ ಸಬ್ ಇನ್‌ಸ್ಪೆಕ್ಟರ್ ಅಯ್ಯನ್ ಗೌಡ ಮತ್ತು ಮಹಿಳಾ ಸಿಬ್ಬಂದಿ ಸೇರಿ ಹಲವು ಪೊಲೀಸರು ಮನಸೋ ಇಚ್ಛೆ ಥಳಿಸಿ ಮಾರಣಾಂತಿಕ ಹಲ್ಲೆ ಮಾಡಿದ್ದಾರೆ ಎಂದು ಆಪಾದಿಸಿದರು.

ಕರ್ನಾಟಕ ಜನಶಕ್ತಿಯ ಪೂರ್ಣಿಮಾ, ಸಿಐಟಿಯುನ ಸಿ.ಕುಮಾರಿ, ಸಿಪಿಐಎಂ ಪಕ್ಷದ ಕೃಷ್ಣೇಗೌಡ, ರೈತ ಸಂಘದ ಲತಾ ಶಂಕರ್, ರಾಷ್ಟ್ರೀಯ ಭಾರತೀಯ ಮಾನವ ಹಕ್ಕುಗಳ ಸಂಘದ ರಾಧಾಮಣಿ, ಶಶಿಕಲಾ, ವಿಮೋಚನ ಮಹಿಳಾ ಸಂಘಟನೆಯ ಜನಾರ್ದನ್, ಸಿದ್ದರಾಜು ಭಾಗವಹಿಸಿದ್ದರು.

ಪಿಎಸ್ಐ ಅಯ್ಯನ್ ಗೌಡ ಅಮಾನತು



ಮಹಿಳೆ ಮೇಲೆ ದೌರ್ಜನ್ಯ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೂರ್ವ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಅಯ್ಯನಗೌಡರನ್ನು ಸೇವೆಯಿಂದ ಅಮಾನತು ಮಾಡಿ ಎಸ್ಪಿ ಎನ್.ಯತೀಶ್ ಆದೇಶ ಹೊರಡಿಸಿದ್ದಾರೆ.

ಮಂಡ್ಯದ ಅಶೋಕ ನಗರದ ರೂಪಾದೇವಿ ಮೇಲೆ ದೌರ್ಜನ್ಯ ನಡೆಸಿ ಮಾರಣಾಂತಿಕ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಯ್ಯನಗೌಡ ವಿರುದ್ಧ ಪ್ರಕರಣ ದಾಖಲಾಗುತ್ತಿದ್ದಂತೆ ಸೇವೆಯಿಂದ ಅಮಾನತು ಮಾಡಲಾಗಿದೆ.

ಠಾಣೆಯ ಕೊಠಡಿಯಲ್ಲಿ ಕೂಡಿ ಹಾಕಿ ಅಯ್ಯನ್‌ಗೌಡ ಮತ್ತು ಇತರೆ ಪೊಲೀಸರು ಮಹಿಳೆಯ ಮೇಲೆ ಮನಸೋ ಇಚ್ಛೆ ಥಳಿಸಿದ್ದಾರೆಂಬ ಆರೋಪದಡಿ ರೂಪಾಳ ತಾಯಿ ಗೌರಮ್ಮ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು ಅಯ್ಯನಗೌಡನನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಅಯ್ಯನ್‌ಗೌಡ ಈ ಹಿಂದೆಯೂ ಕೆ.ಎಂ.ದೊಡ್ಡಿ ಹಾಗೂ ಇನ್ನಿತರೆ ಠಾಣೆಯಲ್ಲಿ ಪೊಲೀಸ್ ಅಧಿಕಾರಿಯಾಗಿದ್ದಾಗ ಸಾರ್ವಜನಿಕ ವಲಯದಲ್ಲಿ ಇವರ ವಿರುದ್ಧ ವ್ಯಾಪಕ ದೂರುಗಳು ಕೇಳಿ ಬಂದಿತ್ತು. ಆದರೆ ಇದೀಗ ಮಹಿಳೆಯ ಮೇಲಿನ ದೌರ್ಜನ್ಯದ ಆರೋಪದಡಿ ಅಮಾನತಾಗಿದ್ದಾರೆ.

ಡಿವೈಡರ್ ಹಾರಿ ಕಾರಿಗೆ ಡಿಕ್ಕಿ ಹೊಡೆದ ಮತ್ತೊಂದು ಕಾರು

ಮೈಸೂರಿನ ಯುವಕ ಸಾವು

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ದುರಂತ

ಶ್ರೀರಂಗಪಟ್ಟಣ, ಫೆ.14– ಕಾರೊಂದು ಎದುರು ರಸ್ತೆಯಲ್ಲಿ ಬರುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಮೈಸೂರಿನ ಯುವಕ ಮೃತಪಟ್ಟಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಶ್ರೀನಿವಾಸ ಅಗ್ರಹಾರ ಗ್ರಾಮದ ಬಳಿಯ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ವರದಿಯಾಗಿದೆ.

ಮೈಸೂರು ಇಟ್ಟಿಗೆಗೂಡಿನ ನಿವಾಸಿ ಅಕ್ಷಯ್(26) ಮೃತ ಯುವಕ. ಸುಧೀರ್ ಸೇರಿದಂತೆ ಮೂವರಿಗೆ ಗಂಭೀರ ಗಾಯಗಳಾಗಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬೆಂಗಳೂರಿನಿಂದ ಮೈಸೂರಿಗೆ ವೇಗವಾಗಿ ಬರುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ, ಡಿವೈಡರ್ ಹಾರಿ ಪಕ್ಕದ ರಸ್ತೆಯಲ್ಲಿ ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ದುರಂತ ಸಂಭವಿಸಿದೆ.



ಡಿಕ್ಕಿಯ ರಭಸಕ್ಕೆ ಎರಡು ಕಾರುಗಳು ಸಂಪೂರ್ಣ ಜಖಂಗೊಂಡಿದ್ದು, ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಕಾರುಗಳನ್ನು ತೆರವು ಮಾಡಿ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪಾಲಹಳ್ಳಿಯಲ್ಲಿ ಇತ್ತೀಚೆಗೆ ನಡೆದ ಕೊಲೆ ಮತ್ತು ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಕೆ.ಆರ್.ಎಸ್‌ನಲ್ಲಿ ಪೊಲೀಸ್ ಅಧಿಕಾರಿಗಳು ರೌಡಿಶೀಟರ್‌ಗಳ ಪರೇಡ್ ನಡೆಸಿ ಕಾನೂನು ನಿಯಮಗಳನ್ನು ಪಾಲಿಸುವಂತೆ ಸೂಚಿಸಿದರು. ಈ ವೇಳೆ 30ಕ್ಕೂ ಹೆಚ್ಚು ರೌಡಿಶೀಟರ್‌ಗಳು ಭಾಗವಹಿಸಿದ್ದರು.

ಕೆಆರ್‌ಎಸ್ ವ್ಯಾಪ್ತಿಯ 20 ಕಿಮೀ ವರೆಗೆ ಗಣಿಗಾರಿಕೆ ನಿಷೇಧ ಹಿನ್ನೆಲೆ

ಟ್ರಯಲ್ ಬ್ಲಾಸ್ಟ್ ನಡೆಸಿದ ಬಳಿಕವಷ್ಟೇ ಗಣಿಗಾರಿಕೆಗೆ ಅವಕಾಶ

ಪಾಂಡವಪುರ: ಟ್ರಯಲ್ ಬ್ಲಾಸ್ಟ್ ನಡೆಸಿದ ವರದಿ ಬಂದ ಬಳಿಕವಷ್ಟೇ ಗಣಿಗಾರಿಕೆ ನಡೆಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲಿಯವರೆಗೆ ಸಹಕಾರ ನೀಡಬೇಕು ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ತಾಲೂಕಿನ ಬೇಬಿಬೆಟ್ಟದಲ್ಲಿ ಗಣಿಗಾರಿಕೆ ಸಂಬಂಧ ಕಾವೇರಿಪುರ ಗ್ರಾಮಸ್ಥರೊಂದಿಗೆ ನಡೆದ ಸಭೆಯಲ್ಲಿ ಮನವಿ ಮಾಡಿದ ಅವರು, ಹೈಕೋರ್ಟ್ ಕೆಆರ್‌ಎಸ್ ಅಣೆಕಟ್ಟೆ ಹಿತದೃಷ್ಟಿಯಿಂದ ಕೆಆರ್‌ಎಸ್ ವ್ಯಾಪ್ತಿಯ 20 ಕಿಮೀ ವರೆಗೆ ಎಲ್ಲಾ ತರಹದ ಕಲ್ಲುಗಣಿಗಾರಿಕೆಗೆ ನಿಷೇಧಿಸಿ ಆದೇಶ ಹೊರಡಿಸಿದೆ. ನಾವು ನೀವೆಲ್ಲರು ಕೋರ್ಟ್ ಆದೇಶವನ್ನು ಪಾಲನೆ ಮಾಡಬೇಕಿದೆ. ಮಾ.4ರಿಂದ 15ರೊಳಗೆ ಕೆಆರ್‌ಎಸ್ ಅಣೆಕಟ್ಟೆ ವ್ಯಾಪ್ತಿಯಲ್ಲಿ ಟ್ರಯಲ್ ಬ್ಲಾಸ್ಟ್ ನಡೆಸಲಾಗುವುದು, ಆ ಬಳಿಕ ಇಲ್ಲಿ ಗಣಿಗಾರಿಕೆ ಮಾಡಬಹುದೇ ಇಲ್ಲವೇ ಎನ್ನುವುದನ್ನು ವರದಿ ಬಂದ ಬಳಿಕ ಕ್ರಮವಹಿಸಲಾಗುವುದು, ಅಲ್ಲಿಯವರೆಗೆ ಎಲ್ಲರು ಸಹಕಾರ ನೀಡಬೇಕು ಎಂದರು.

ಕಾವೇರಿಪುರ ಗ್ರಾಮಸ್ಥರ ಸಮಸ್ಯೆ ನನಗೆ ಅರ್ಥವಾಗುತ್ತಿದೆ. ಇಲ್ಲಿಗೆ ಬಂದಿರುವ ಎಲ್ಲರು ಬಡವರೇ, ಪ್ರತಿವಾರ ಸಾಲದ ಇಎಂಐ ಕಟ್ಟಬೇಕು. ಹಲವಾರು ಆರ್ಥಿಕ ಸಮಸ್ಯೆಯಲ್ಲಿ ಸಿಲುಕಿಕೊಂಡಿದ್ದಾರೆ. ಗಣಿಗಾರಿಕೆ ವಿಚಾರವಾಗಿ ನಾನು ಈಗಾಗಲೆ ಜಿಲ್ಲಾ ಉಸ್ತುವಾರಿ ಸಚಿವರು, ಗಣಿ ಸಚಿವರು, ಜಿಲ್ಲೆಯ ಎಲ್ಲಾ ಶಾಸಕರು ಹಾಗೂ ಜಿಲ್ಲಾಧಿಕಾರಿ, ಗಣಿ ಅಧಿಕಾರಿಗೊಂದಿಗೆ ಚರ್ಚಿಸಿದ್ದೇನೆ ಎಂದು ತಿಳಿಸಿದರು.




ಬೇಬಿಬೆಟ್ಟದಲ್ಲಿ ಗಣಿಗಾರಿಕೆ ಸಂಬಂಧ ನಡೆದ ಸಭೆಯಲ್ಲಿ ಮಾತನಾಡುತ್ತಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ

ಈ ಭಾಗದ ಏಳೆಂಟು ಗ್ರಾಪಂ ವ್ಯಾಪ್ತಿಯರು ಬಹುತೇಕ ಜೀವನ ಗಣಿಗಾರಿಕೆಯ ಮೇಲೆ ಅವಲಂಬಿತವಾಗಿದೆ ಕಳೆದ ಹಲವಾರು ವರ್ಷಗಳಿಂದ ಗಣಿ ಸಮಸ್ಯೆಯಾಗಿ ಸಾಕಷ್ಟು ಸಮಸ್ಯೆಗೆ ಸಿಲುಕುತ್ತಿದ್ದೀರಿ, ಅದರಿಂದ ಸ್ವಲ್ಪ ಜನಗಳನ್ನಾದರೂ ಹೊರಗಡೆ ತರಬೇಕು ಎನ್ನುವ ಪ್ರಯತ್ನ ಮಾಡುತ್ತಿದ್ದೇನೆ. ಈ ಭಾಗದ ಜನರಿಗೆ ಬೇರೆ ಉದ್ಯೋಗ ಕಲ್ಪಿಸುವ ಆಲೋಚನೆಯನ್ನು ನಡೆಸಿದ್ದೇನೆ ಎಂದರು.

ಗಣಿ ಮತ್ತು ಹಿರಿಯ ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ನಾಗಮಧು ಮಾತನಾಡಿ, 1911ರಲ್ಲಿ ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣವಾಗಿದ್ದು, 100 ವರ್ಷದ ಇತಿಹಾಸ ಹೊಂದಿರುವ ಹಳೇ ಡ್ಯಾಂ ಆಗಿದೆ. ಇದರ ರಕ್ಷಣೆ ಮಾಡುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ ಇಲ್ಲಿನ ಗಣಿಗಾರಿಕೆಯಿಂದ ಕೆಆರ್‌ಎಸ್ ಡ್ಯಾಂಗೆ ಅಪಾಯವಿದೆ ಎಂಬ ಕಾರಣಕ್ಕೆ ಡ್ಯಾಂನ 20 ಕಿಮೀ ಎಲ್ಲಾ ತರಹದ ಗಣಿಗಾರಿಕೆ ನಿಷೇಧಿಸಲಾಗಿದೆ ಎಲ್ಲರು ಸಹಕಾರ ನೀಡಬೇಕು, ಟ್ರಯಲ್ ಬ್ಲಾಸ್ಟ್ ನಡೆಸಿ ವರದಿಯನ್ನು ಸರಕಾರಕ್ಕೆ ಸಲ್ಲಿಕೆಮಾಡುತ್ತೇವೆ. ಅಲ್ಲಿಂದ ವರದಿ ಬಂದ ಬಳಿಕ ಗಣಿಗಾರಿಕೆ ನಡೆಸಬೇಕೇ? ಎಷ್ಟು ಕಿಮೀನಲ್ಲಿ ನಡೆಸಬೇಕು? ಎನ್ನುವ ಬಗ್ಗೆ ಸರ್ಕಾರ ತೀರ್ಮಾನಿಸಲಿದೆ ಎಂದರು.

ಇದೇ ವೇಳೆ ಬೇಬಿ ಬೆಟ್ಟದ ಜಾತ್ರಾ ಸಮಿತಿಯನ್ನು ರಚಿಸಲಾಯಿತು. ಈ ಸಂದರ್ಭದಲ್ಲಿ ಗಣಿ ಅಧಿಕಾರಿ ರೇಷ್ಮಾ, ತಹಶೀಲ್ದಾರ್ ಶ್ರೇಯಸ್, ಮುಖಂಡರಾದ ನಾಗರಾಜು, ದಯಾನಂದ, ಬನ್ನಂಗಾಡಿ ಬಿ.ಕೆ.ಶ್ರೀನಿವಾಸ್, ಎಚ್.ಕೃಷ್ಣೇಗೌಡ, ಸಿ.ಆರ್.ರಮೇಶ್ ಇತರರಿದ್ದರು.

ಕೊನೆಗೂ ಬೆಂಗಳೂರಿಗೆ ಬಂತು ಚಾಲಕರಹಿತ ಮೆಟ್ರೋ ಬೋಗಿ



ಬೆಂಗಳೂರು, ಫೆ.14– ಸಿಲಿಕಾನ್ ಸಿಟಿ ಬೆಂಗಳೂರಿಗೆ ಮೊದಲ ಚಾಲಕ ರಹಿತ ಮೆಟ್ರೋ ರೈಲು ಬೋಗಿ ಚೀನಾದಿಂದ ಆಗಮಿಸಿದೆ.

ಬಿಎಂಆರ್‌ಸಿಎಲ್ ನಮ್ಮ ಮೆಟ್ರೋ ಹಳದಿ ಮಾರ್ಗವಾದ ಆರ್.ವಿ.ರಸ್ತೆ–ಬೊಮ್ಮಸಂದ್ರ ನಡುವೆ ಈ ರೈಲು ಓಡಿಸಲು ಯೋಜನೆ ರೂಪಿಸಿದ್ದು, ನಮ್ಮ ಮೆಟ್ರೋದ ಮೊದಲ ಚಾಲಕ ರಹಿತ ರೈಲು ಬೋಗಿ ಚೀನಾದಿಂದ ಕಳೆದ ವಾರ ಚೆನ್ನೈ ಬಂದರಿಗೆ ಬಂದು ತಲುಪಿತ್ತು. ಕಸ್ಟಮ್ಸ್ ಸೇರಿದಂತೆ ವಿವಿಧ ಪ್ರಕ್ರಿಯೆ ಪೂರ್ಣಗೊಳಿಸಿಕೊಂಡು ರಸ್ತೆ ಮಾರ್ಗವಾಗಿ ರೈಲು ಬೋಗಿಗಳನ್ನು ಬೆಂಗಳೂರಿಗೆ ತರುವ ಪ್ರಕ್ರಿಯೆ ಆರಂಭವಾಗಿತ್ತು. ಒಟ್ಟು ಮೂರು ಲಾರಿಗಳಲ್ಲಿ 6 ಚಾಲಕ ರಹಿತ ನಮ್ಮ ಮೆಟ್ರೋ ಬೋಗಿಗಳು ಬುಧವಾರ ಮುಂಜಾನೆ 3.30ಕ್ಕೆ ಬೆಂಗಳೂರಿನ ಹೆಬ್ಬಗೋಡಿ ಡಿಪೋಗೆ ಬಂದು ತಲುಪಿವೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ನಮ್ಮ ಮೆಟ್ರೋ ಮಾಹಿತಿ ನೀಡಿದ್ದು ಚಿತ್ರಗಳನ್ನು ಸಹ ಪೋಸ್ಟ್ ಮಾಡಿದೆ.

ಚಾಲಕ ರಹಿತ ನಮ್ಮ ಮೆಟ್ರೋ ಬೋಗಿಗಳನ್ನು ತಯಾರು ಮಾಡಲು ಚೀನಾ ಮೂಲದ CRRC Nanjing Puzhen Co Ltd.T ಟೆಂಡರ್ ಪಡೆದಿತ್ತು ಈ ಬೋಗಿಗಳು ತಯಾರಾದ ಬಳಿಕ ಬಿಎಂಆರ್‌ಸಿಎಲ್ ಅಧಿಕಾರಿಗಳು ಚೀನಾಕ್ಕೆ ತೆರಳಿ, ಅವುಗಳನ್ನು ಪರಿಶೀಲಿಸಿದ್ದರು. ಬಳಿಕ ಭಾರತಕ್ಕೆ ತರುವ ಪ್ರಕ್ರಿಯೆ ಆರಂಭವಾಯಿತು. 6 ಬೋಗಿಯ ಮೆಟ್ರೋ ರೈಲು ಜನವರಿ 24ರಂದು ಶಾಂಘೈ ಬಂದರಿನಿಂದ ಹೊರಟಿದ್ದವು. ಸಮುದ್ರ ಮಾರ್ಗವಾಗಿ ಫೆಬ್ರವರಿ 6ರಂದು ಚೆನ್ನೈ ಬಂದರಿಗೆ ಆಗಮಿಸಿದ್ದವು. ಅಲ್ಲಿನ ಕಸ್ಟಮ್ಸ್ ಪ್ರಕ್ರಿಯೆ ಪೂರ್ಣಗೊಳಿಸಿಕೊಂಡು ಬೃಹತ್ ಲಾರಿಗಳ ಮೂಲಕ ಅವುಗಳನ್ನು ಬೆಂಗಳೂರಿ ತರಲಾಗಿದೆ. ಈ ಮೂಲಕ ಬೆಂಗಳೂರು ನಗರಕ್ಕೆ ಚಾಲಕ ರಹಿತ ನಮ್ಮ ಮೆಟ್ರೋ ರೈಲಿನ ಆಗಮನವಾಗಿದೆ.

ರಾಜ್ಯಸಭಾ ಚುನಾವಣೆ 2024

ಬಿಜೆಪಿ ಸೇರಿದ್ದ ಅಶೋಕ್ ಚವಾಣ್‌ಗೆ ಟಿಕೆಟ್: ಗುಜರಾತಿನಿಂದ ಜೆ.ಪಿ.ನಡ್ಡಾ ಸ್ಪರ್ಧೆ!

ನವದೆಹಲಿ, ಫೆ.14– ಬಿಜೆಪಿ ರಾಜ್ಯಸಭಾ ಚುನಾವಣೆಗೆ ತನ್ನ ಅಭ್ಯರ್ಥಿಗಳ ಮೂರನೇ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಪಕ್ಷವು ಗುಜರಾತ್‌ನಿಂದ ಜೆ.ಪಿ.ನಡ್ಡಾ ಮಹಾರಾಷ್ಟ್ರದಿಂದ ಅಶೋಕ್ ಚವಾಣ್ ಅವರನ್ನು ನಾಮನಿರ್ದೇಶನ ಮಾಡಿದೆ. ಅಶೋಕ್ ಚವಾಣ್ ಅವರು ಫೆಬ್ರವರಿ 13 ರಂದು ಬಿಜೆಪಿ ಸೇರಿದ್ದರು. ಇದಲ್ಲದೇ ಮಹಾರಾಷ್ಟ್ರದಿಂದ ರಾಜ್ಯಸಭೆಗೆ ಮೇಧಾ ಕುಲಕರ್ಣಿ ಮತ್ತು ಅಜಿತ್ ಗೋಪ್‌ಚಾಡೆ ಅವರನ್ನು ಬಿಜೆಪಿ ಅಭ್ಯರ್ಥಿಯನ್ನಾಗಿ ಮಾಡಿದೆ.

ಬಿಜೆಪಿ ಗುಜರಾತ್‌ನಿಂದ ಜೆಪಿ ನಡ್ಡಾ ಜೊತೆಗೆ ಗೋವಿಂದಭಾಯಿ ಧೋಲಾಕಿಯಾ, ಮಾಯಾಂಕ್‌ಭಾಯ್ ನಾಯಕ್, ಜಶ್ವಂತ್ ಸಿಂಗ್ ಸಲಾಂಸಿಂಗ್ ಪರ್ಮಾರ್ ಅವರನ್ನು ರಾಜ್ಯಸಭಾ ಅಭ್ಯರ್ಥಿಗಳನ್ನಾಗಿ ಮಾಡಿದೆ. ನಾಳೆ ಬೆಳಗ್ಗೆ 11 ಗಂಟೆಗೆ ಶಿವಸೇನೆ ಶಿಂಧೆ ಬಣದ ಪರವಾಗಿ ಮಿಲಿಂದ್ ದೇವ್ರಾ ರಾಜ್ಯಸಭಾ ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸಲಿದ್ದಾರೆ. ಮಿಲಿಂದ್ ದಿಯೋರಾ ಇತ್ತೀಚೆಗೆ ಕಾಂಗ್ರೆಸ್ ತೊರೆದು ಶಿವಸೇನೆ ಸೇರಿದ್ದರು.

ಇದಕ್ಕೂ ಮುನ್ನ ಬಿಜೆಪಿ ಮಧ್ಯಪ್ರದೇಶದಿಂದ ನಾಲ್ವರು ಮತ್ತು ಒಡಿಶಾದಿಂದ ಒಬ್ಬರ ಹೆಸರನ್ನು ರಾಜ್ಯಸಭೆಗೆ ಘೋಷಿಸಿತ್ತು. ರಾಜ್ಯಸಭಾ ಚುನಾವಣೆಯ ಮೊದಲ ಪಟ್ಟಿಯನ್ನು ಬಿಜೆಪಿ ಫೆ.11ರಂದು ಬಿಡುಗಡೆ ಮಾಡಿದ್ದು, ಇದರಲ್ಲಿ ಬಿಹಾರ, ಛತ್ತೀಸ್‌ಗಢ, ಹರಿಯಾಣ, ಕರ್ನಾಟಕ, ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಪಶ್ಚಿಮ ಬಂಗಾಳದ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಾಗಿತ್ತು.



ಜೆ.ಪಿ.ನಡ್ಡಾ ಅಶೋಕ್ ಚವಾಣ್

ಒಡಿಶಾ ಮತ್ತು ಮಧ್ಯಪ್ರದೇಶದ ಅಭ್ಯರ್ಥಿಗಳ ಹೆಸರು: ಇಂದು ಬೆಳಗ್ಗೆ ಬಿಜೆಪಿ ರಾಜ್ಯಸಭಾ ಚುನಾವಣೆಗೆ ತನ್ನ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಮಧ್ಯಪ್ರದೇಶದಿಂದ ಕೇಂದ್ರ ಸಚಿವರಾದ ಎಲ್ ಮುರುಗನ್, ಮಾಯಾ ನರೋಲಿಯಾ, ಬನ್ಸಿಲಾಲ್ ಗುರ್ಜರ್ ಮತ್ತು ಉಮೇಶ್ ನಾಥ್ ಮಹಾರಾಯ್ ನಾಮನಿರ್ದೇಶನಗೊಂಡಿದ್ದಾರೆ. ಒಡಿಶಾದಿಂದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಬಿಜೆಪಿ ಅಭ್ಯರ್ಥಿಯನ್ನಾಗಿ ಮಾಡಿದೆ.

ರಾಜ್ಯಸಭೆಯ 56 ಸ್ಥಾನಗಳಿಗೆ ಫೆ 27ರಂದು ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಸಲು ಫೆ.15 ಕೊನೆಯ ದಿನವಾಗಿದೆ. ಕೇಂದ್ರ ಸಚಿವರಾದ ಮನ್ಸುಖ್ ಮಾಂಡವಿಯಾ, ಪುರುಷೋತ್ತಮ್ ರೂಪಾಲಾ (ಗುಜರಾತ್) ಮತ್ತು ಕೇಂದ್ರ ಸಚಿವ ನಾರಾಯಣ ರಾಣೆ (ಮಹಾರಾಷ್ಟ್ರ) ಅವರ ಅಧಿಕಾರಾವಧಿಯೂ ಪೂರ್ಣಗೊಳ್ಳುತ್ತಿದೆ.

ಮುಂಬರುವ ರಾಜ್ಯಸಭಾ ಚುನಾವಣೆಗೆ ಬಿಜೆಪಿಯ ಏಳು ಅಭ್ಯರ್ಥಿಗಳು ಬುಧವಾರ (ಫೆ.14) ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಸಿದವರಲ್ಲಿ ಮಾಜಿ ಕೇಂದ್ರ ಸಚಿವ ಆರ್‌ಪಿಎನ್ ಸಿಂಗ್, ಮಾಜಿ ಸಂಸದ ಚೌಧರಿ ತೇಜ್‌ವೀರ್ ಸಿಂಗ್, ರಾಜ್ಯ ಪಕ್ಷದ ಪ್ರಧಾನ ಕಾರ್ಯದರ್ಶಿ ಅಮರ್‌ಪಾಲ್ ಮೌರ್ಯ, ಮಾಜಿ ರಾಜ್ಯ ಸಚಿವೆ ಸಂಗೀತಾ ಬಲ್ವಂತ್, ಪಕ್ಷದ ವಕ್ತಾರ ಸುಧಾಂಶು ತ್ರಿವೇದಿ, ಮಾಜಿ ಶಾಸಕಿ ಸಾಧನಾ ಸಿಂಗ್ ಮತ್ತು ಆಗ್ರಾ ಮಾಜಿ ಮೇಯರ್ ನವೀನ್ ಜೈನ್ ಸೇರಿದ್ದಾರೆ.

ಬಿಜೆಪಿ, ಜೆಡಿಎಸ್‌ನವರೂ ನಮ್ಮ 'ಗ್ಯಾರಂಟಿ' ಫಲಾನುಭವಿಗಳು

ಆದರೆ ಎರಡೂ ಪಕ್ಷದ ನಾಯಕರೂ ವಿರೋಧಿಸುತ್ತಿದ್ದಾರೆ: ಸಿಎಂ

ಬೆಂಗಳೂರು: ಬಿಜೆಪಿ ಮತ್ತು ಜೆಡಿಎಸ್‌ನ ಬೆಂಬಲಿಗರು, ಮತದಾರರು ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ಆದರೆ ಎರಡೂ ಪಕ್ಷದ ನಾಯಕರು ನಮ್ಮನ್ನು ವಿರೋಧಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.



ಏಟ್ರಿಯಾ ಹೋಟೆಲಿನಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬಿಜೆಪಿ, ಜೆಡಿಎಸ್ ನಾಯಕರು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಾಗಿರುವ ನಾಡಿನ ಜನತೆಯನ್ನು ನಿರಂತರವಾಗಿ ಅವಮಾನಿಸುತ್ತಿದ್ದಾರೆ. ಸತ್ಯ ಶಾಶ್ವತ. ಹಳ್ಳಿ ಹಳ್ಳಿಗೆ ಗ್ಯಾರಂಟಿ ಯೋಜನೆ ಪರಿಣಾಮಕಾರಿಯಾಗಿ ತಲುಪುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶಾಸಕರು ಸದನದಲ್ಲಿ ಪರಿಣಾಮಕಾರಿಯಾಗಿ, ಕಡ್ಡಾಯವಾಗಿ ಭಾಗವಹಿಸುವ ಮೂಲಕ ಸದನದ ಸಮಯವನ್ನು ಅರ್ಥಪೂರ್ಣಗೊಳಿಸಿ. ಬಿಜೆಪಿ ಸರಣಿ ಸುಳ್ಳುಗಳ ಮೂಲಕ ಸತ್ಯವನ್ನು ಹುದುಗಿಸಿಡಲು ಯತ್ನಿಸುತ್ತಿದೆ. ಏಕೆಂದರೆ ಲೋಕಸಭಾ ಚುನಾವಣೆಗೆ ಜನರ ಬಳಿಗೆ ಹೋಗಿ ಮುಖ ತೋರಿಸಲು ಬಿಜೆಪಿಗೆ ಅಭಿವೃದ್ಧಿ ವಿಚಾರಗಳೇ ಇಲ್ಲ. ಕಳೆದ ಹತ್ತು ವರ್ಷಗಳಲ್ಲಿ ಅಭಿವೃದ್ಧಿಯನ್ನು ಮರೆತು ಈಗ ಚುನಾವಣೆ ವೇಳೆ ಅಯೋಧ್ಯೆ ವಿಚಾರ ಒಂದನ್ನೇ ಮುಂದಿಟ್ಟುಕೊಂಡು ಹೊರಟಿದ್ದಾರೆ. ಈ ಸತ್ಯ ನಾಡಿನ ಜನತೆಗೆ ಮನವರಿಕೆಯಾಗಿದೆ. ಆದರೆ ಸದನದ ಕಡತಕ್ಕೆ ಹೋಗಲಿ ಎಂದು ಬಿಜೆಪಿಯವರು ಸುಳ್ಳು ಆರೋಪಗಳನ್ನು ಮಾಡುತ್ತಾರೆ. ಇದಕ್ಕೆ ಸತ್ಯದ ಮೂಲಕ, ಅಧಿಕೃತ ಅಂಕಿ–ಅಂಶಗಳ ಮೂಲಕ ಸ್ಪಷ್ಟ ಉತ್ತರ ಕೊಡಿ ಎಂದು ತಮ್ಮ ಶಾಸಕರಿಗೆ ಕರೆ ನೀಡಿದರು.

ಬಿಜೆಪಿ – ಜೆಡಿಎಸ್ ಗ್ಯಾರಂಟಿ ಯೋಜನೆಗಳ 5 ಕೋಟಿ ಫಲಾನುಭವಿಗಳನ್ನು ನಿರಂತರವಾಗಿ ಅವಮಾನಿಸುತ್ತಿದ್ದಾರೆ. ನಾವು ಈ ಜನರ ಪರವಾಗಿ ನಿಂತಿದ್ದೇವೆ. ಕಾಂಗ್ರೆಸ್ಸಿನ ಗ್ಯಾರಂಟಿ ಯೋಜನೆಗಳು ಈ ಜನರ ಹಕ್ಕು. ಇದನ್ನು ನಾವು ಗಟ್ಟಿ ಧ್ವನಿಯಲ್ಲಿ ಹೇಳಬೇಕು ಎಂದು ಕರೆ ನೀಡಿದರು. ಇದೇ ಸಂದರ್ಭದಲ್ಲಿ ರಾಜ್ಯಸಭೆಗೆ ರಾಜ್ಯದಿಂದ ಅಭ್ಯರ್ಥಿಗಳಾಗಿರುವ ನಾಸಿರ್ ಹುಸೇನ್, ಜಿ.ಸಿ.ಚಂದ್ರಶೇಖರ್ ಮತ್ತು ಅಜಯ್ ಮಾಕೆನ್ ಅವರನ್ನು ಅಭಿನಂದಿಸಲಾಯಿತು.

ಜನಪ್ರತಿನಿಧಿಗಳ ವಿಶೇಷ ಕೋರ್ಟ್ ದಂಡ ಪ್ರಶ್ನಿಸಿ

ಸಿಎಂ ಸಿದ್ದರಾಮಯ್ಯ 'ಸುಪ್ರೀಂ' ಮೊರೆ

ಬೆಂಗಳೂರು, ಫೆ.14– ಮುಖ್ಯಮಂತ್ರಿ ಸಿದ್ದರಾಮಯ್ಯ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ. ಪ್ರತಿಭಟನೆ ವೇಳೆ ಸಾರ್ವಜನಿಕ ಆಸ್ತಿಪಾಸ್ತಿ ಹಾನಿಯಾಗಿದೆ ಎಂಬ ಕಾರಣಕ್ಕಾಗಿ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ತಮ್ಮ ವಿರುದ್ಧ 10 ಸಾವಿರ ರೂಪಾಯಿ ದಂಡ ವಿಧಿಸಿದ್ದನ್ನು ಪ್ರಶ್ನಿಸಿ ಸಿಎಂ ಸಿದ್ದರಾಮಯ್ಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಏನಿದು ಪ್ರಕರಣ: ಬಿಜೆಪಿ ಸರ್ಕಾರದ ಅವಧಿಯಲ್ಲಿ ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣದಲ್ಲಿ ಆರೋಪ ಎದುರಿಸಿದ್ದ ಅಂದಿನ ಸಚಿವ ಕೆ.ಎಸ್.ಈಶ್ವರಪ್ಪ ಅವರ ವಿರುದ್ಧ 2022ರ ಏಪ್ರಿಲ್ 14ರಂದು ಕಾಂಗ್ರೆಸ್ ಪ್ರತಿಭಟನೆ ನಡೆಸಿತ್ತು. ಅದರ ನೇತೃತ್ವವನ್ನು ಆಗ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ವಹಿಸಿದ್ದರು.

ಮೃತ ಸಂತೋಷ್ ಬರೆದಿಟ್ಟಿದ್ದ ಡೆತ್‌ನೋಟ್‌ನಲ್ಲಿ ಅಂದಿನ ಸಚಿವ ಕೆ.ಎಸ್. ಈಶ್ವರಪ್ಪ ಅವರ ಹೆಸರನ್ನು ಉಲ್ಲೇಖ ಮಾಡಲಾಗಿತ್ತು. ಹೀಗಾಗಿ ನೈತಿಕ ಹೊಣೆ ಹೊತ್ತು ಕೆ.ಎಸ್. ಈಶ್ವರಪ್ಪ ಅವರ ರಾಜೀನಾಮೆಗೆ ಆಗ್ರಹಿಸಿ ಬೆಂಗಳೂರಿನ ರೇಸ್ ವ್ಯೂ ಹೋಟೆಲ್ ಬಳಿ ಪ್ರತಿಭಟನೆಯನ್ನು ಕಾಂಗ್ರೆಸ್ ನಾಯಕರು ಮಾಡಿದ್ದರು. ಈ ವೇಳೆ ಸಾರ್ವಜನಿಕ ಮುಕ್ತ ಸಂಚಾರಕ್ಕೆ ಅಡ್ಡಿಪಡಿಸಿದ, ಕಾನೂನು–ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡಿದ ಆರೋಪದ ಮೇಲೆ ನಗರದ ಹೈ ಗ್ರೌಂಡ್ಸ್ ಠಾಣಾ ಪೊಲೀಸರು ದೂರು ದಾಖಲಿಸಿಕೊಂಡಿದ್ದರು.

ತಮಗೆ ದಂಡ ವಿಧಿಸಿರುವುದು, ಕೋರ್ಟ್‌ಗೆ ಹಾಜರಾಗುವಂತೆ ಸೂಚನೆ ನೀಡಿದ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಿಎಂ ಸಿದ್ದರಾಮಯ್ಯ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ. ಪ್ರತಿಭಟನೆ ಕಾನೂನು ಬದ್ಧವಾಗಿದೆ ಎಂಬ ವಾದದೊಂದಿಗೆ ಅವರು ಸುಪ್ರೀಂಕೋರ್ಟ್‌ನಿಂದ ನ್ಯಾಯದಾನದ ನಿರೀಕ್ಷೆಯಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಕರ್ನಾಟಕ ಕ್ರೈಂ ನಾಡಾಗುತ್ತಿದೆ...!

● ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸರ್ಕಾರದ ವಿರುದ್ಧ ವಾಗ್ದಾಳಿ ● ಮಹಿಳೆಯರ ಮೇಲಿನ ದೌರ್ಜನ್ಯದಲ್ಲಿ ರಾಜ್ಯ ದೇಶದಲ್ಲೇ 3ನೇ ಸ್ಥಾನ; ಸೈಬರ್ ಕ್ರೈಂನಲ್ಲಿ ಒಂದೇ ವರ್ಷ 432 ಕೋಟಿ ಲೂಟಿ

ಬೆಂಗಳೂರು, ಫೆ.14(ಕೆಎಂಶಿ)– ಶಾಂತಿ ಸುವ್ಯವಸ್ಥೆಗೆ ಹೆಸರಾಗಿದ್ದ ಕರ್ನಾಟಕ ಅಪರಾಧದ ನಾಡಾಗಿ ಕುಖ್ಯಾತಿ ಪಡೆಯುತ್ತಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ವಿಧಾನಸಭೆಯಲ್ಲಿಂದು ಆರೋಪಿಸಿದರು.



ನಿಯಮ 69ರಡಿ ರಾಜ್ಯದಲ್ಲಿನ ಕಾನೂನು ಸುವ್ಯವಸ್ಥೆ ಕುರಿತು ಮಾತನಾಡಿದ ಅವರು, ರಾಜ್ಯದಲ್ಲಿ ಅಪರಾಧಗಳ ಸಂಖ್ಯೆ ಶೇ.25ರಿಂದ ಶೇ.30ರಷ್ಟು ಹೆಚ್ಚಳವಾಗಿದೆ, ಕಳೆದ ವರ್ಷ 1,80,742 ಪ್ರಕರಣಗಳು ವರದಿಯಾಗಿವೆ. ನಮ್ಮ ಸರ್ಕಾರದ ಅವಧಿಗಿಂತ ಇದು ಶೇ.40ರಷ್ಟು ಹೆಚ್ಚಾಗಿದೆ. ಹಿರಿಯ ನಾಗರಿಕರ ಮೇಲಿನ ದೌರ್ಜನ್ಯ ಪ್ರಕರಣಗಳು ಶೇ.56ರಷ್ಟು ಹೆಚ್ಚಾಗಿವೆ ಎಂದರು.

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ರಾಜ್ಯ 3ನೇ ಸ್ಥಾನದಲ್ಲಿದೆ, ಬೆಂಗಳೂರು ಕ್ರೈಂ ರಾಜಧಾನಿಯಾಗುತ್ತಿದೆ, ಸೈಬರ್ ಕ್ರೈಂನಲ್ಲಿ ಮೊದಲ ಸ್ಥಾನದಲ್ಲಿದೆ, ಒಂದೇ ವರ್ಷದಲ್ಲಿ 432 ಕೋಟಿ ರೂ. ಸೈಬರ್ ಕ್ರೈಂ ಮೂಲಕ ಲೂಟಿಯಾಗಿದೆ.

ಬೆಂಗಳೂರು ಸುರಕ್ಷಿತಾ ನಗರ ಬದಲಿಗೆ ಕ್ರೈಂ ಸಿಟಿಯಾಗಿ ಮಾರ್ಪಡುತ್ತಿದೆ. ಭಯೋತ್ಪಾದಕ ಚಟುವಟಿಕೆಗಳು ನಡೆಯುತ್ತಿವೆ ಕೆಎಫ್‌ಡಿ, ಪಿಎಫ್‌ಐ ಮೇಲಿನ 1,600 ಕೇಸುಗಳನ್ನು ಸರ್ಕಾರ ವಾಪಸ್ಸು ಪಡೆದಿದೆ. ಇದರಿಂದ ಅಂತಹವರಿಗೆ ಧೈರ್ಯ ಬಂದಂತಾಗಿದೆ.

ಕೋಲಾರದಲ್ಲಿ ಸ್ಟೀಲ್‌ನಿಂದ ನಿರ್ಮಿಸಿದ 30 ಅಡಿ ಅಗಲ, 40 ಅಡಿ ಎತ್ತರದ ಮಚ್ಚು, ಲಾಂಗಿನಿಂದ ಮಾಡಿದ ಕಟೌಟ್ ಹಾಕಲಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇಂತಹ ಘಟನೆಗಳು ನಡೆಯುತ್ತಿವೆ ಎಂದು ಆರೋಪಿಸಿದರು.

ಬಳ್ಳಾರಿಯಲ್ಲಿ 8 ಮಂದಿ ಶಂಕಿತ ಉಗ್ರರನ್ನು ಎನ್‌ಐಎ ಬಂಧಿಸಿದೆ. ರಾಜ್ಯ ಗುಪ್ತಚರ ಇಲಾಖೆ ಸತ್ತಿದೆಯೋ, ಬದುಕಿದೆಯೋ ಅಥವಾ ಐಸಿಯುವಿನಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆಯೋ ಗೊತ್ತಿಲ್ಲ. ಸಮಾಜದಲ್ಲಿ ಭೀತಿ ಹುಟ್ಟಿಸುವ ಕೆಲಸವನ್ನು ಮಾಡಲಾಗುತ್ತಿದೆ.

ಇವರಿಗೆ ಹಣ ಎಲ್ಲಿಂದ ಬಂತು, ಯಾರು ಕಳುಹಿಸಿದರು ಎಂಬುದು ಗೊತ್ತಾಗುವುದಿಲ್ಲ ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು ಚಿತ್ರದುರ್ಗದ ಸರ್ಕಾರಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿ ನಡೆಸುವಾಗ ಹಲ್ಲೆ ನಡೆಸಲಾಗಿದೆ.


ಚಿಕ್ಕಮಗಳೂರಿನಲ್ಲಿ ಪೊಲೀಸರು ಪ್ರತಿಭಟನೆ ಮಾಡುತ್ತಾರೆ. ಅದು ಪೊಲೀಸಿನವರಿಗೇ ಗೊತ್ತಾಗುವುದಿಲ್ಲ. ಪ್ರತಿಭಟನೆ ಮಾಡಿದವರ ಮೇಲೆ ಕ್ರಮವೂ ಆಗುವುದಿಲ್ಲ. ಪೊಲೀಸರು ನೈತಿಕವಾಗಿ ಕುಗ್ಗಿ ಹೋಗಿದ್ದಾರೆ ಎಂದರು.

ಬೆಳಗಾವಿಯಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿದ ಘಟನೆ, ಕೋಲಾರ ಮತ್ತು ಬೆಂಗಳೂರಿನ ಆಂದ್ರಹಳ್ಳಿಯಲ್ಲಿ ಶಾಲಾ ಮಕ್ಕಳಿಂದ ಶೌಚಾಲಯ ಶುಚಿಗೊಳಿಸಿದ ಪ್ರಕರಣವನ್ನು ಎಳೆಎಳೆಯಾಗಿ ಬಿಡಿಸಿಟ್ಟ ಅಶೋಕ್, ಇದಕ್ಕೆ ಸರ್ಕಾರದ ಆಡಳಿತ ವೈಫಲ್ಯ ಕಾರಣ ಎಂದು ದೂರಿದರು.

ಚಿಂತಾಮಣಿಯಲ್ಲಿ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಊಟ ನೀಡಲಿಲ್ಲ ಎಂದು ಪ್ರತಿಭಟಿಸಿದ ವಿದ್ಯಾರ್ಥಿಗಳ ಮೇಲಿನ ಕೋಪಕ್ಕೆ ಅಲ್ಲಿನ ವಾರ್ಡನ್ ಊಟದಲ್ಲಿ ಮಲ ಬೆರೆಸಿರುವುದು ಎಫ್‌ಎಸ್‌ಐಎಲ್ ವರದಿಯಲ್ಲಿ ಗೊತ್ತಾಗಿದೆ.

ವರದಿ ಬಂದು ಮೂರು ತಿಂಗಳಾದರೂ ಯಾವುದೇ ಕ್ರಮ ಕೈಗೊಂಡಿಲ್ಲ, ಹಾವೇರಿಯಲ್ಲಿ ಮಹಿಳೆಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ. ಮೈಸೂರಿನಲ್ಲಿ ಶಾಸಕ ತನ್ವೀರ್ ಸೇಟ್ ಅವರ ಮೇಲೆ ಹಲ್ಲೆ ಆಗಿತ್ತು. ಬೆಂಗಳೂರಿನಲ್ಲಿ ಮಾಜಿ ಶಾಸಕ ಅಖಂಡ ಶ್ರೀನಿವಾಸ್ ಅವರ ಮನೆಗೆ ಬೆಂಕಿ ಹಾಕಲಾಗಿತ್ತು ಎಂಬುದು ಸೇರಿದಂತೆ ಹಲವು ಘಟನೆಗಳನ್ನು ಉಲ್ಲೇಖಿಸಿ, ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿದರು.

ಹ್ಯಾಮರ್ ಎಸೆತಗಾರ್ತಿ ರಚನಾ ಕುಮಾರಿಗೆ 12 ವರ್ಷ ನಿಷೇಧ!



ನವದೆಹಲಿ, ಫೆ.14– ಉದ್ದೀಪನ ಮದ್ದು ಸೇವನೆ ಆರೋಪಕ್ಕೊಳಗಾಗಿದ್ದ ಭಾರತದ ಖ್ಯಾತ ಹ್ಯಾಮರ್ ಎಸೆತಗಾರ್ತಿ ರಚನಾ ಕುಮಾರಿ ಅಂತಾರಾಷ್ಟ್ರೀಯ ಫೆಡರೇಶನ್‌ನ ಅಥ್ಲೆಟಿಕ್ಸ್ ಇಂಟಗ್ರಿಟಿ ಯೂನಿಟ್‌ನ (ಎಐಯು) ಬಹು ಡೋಪ್ ಪರೀಕ್ಷೆಯಲ್ಲಿ ವಿಫಲರಾಗಿದ್ದಕ್ಕಾಗಿ ಮಂಗಳವಾರ 12 ವರ್ಷಗಳ ಕಾಲ ನಿಷೇಧಕ್ಕೊಳಗಾಗಿದ್ದಾರೆ. ಪ್ರಮುಖವಾಗಿ ಅವರ ವೃತ್ತಿಜೀವನವನ್ನು ಕೊನೆಗೊಳಿಸಿ ಕೊಂಡಿದ್ದಾರೆ.

ಏಷ್ಯನ್ ಗೇಮ್ಸ್‌ಗೆ ಕೆಲವೇ ದಿನಗಳ ಮೊದಲು ಪರೀಕ್ಷೆಗಾಗಿ ಕುಮಾರಿ ಅವರಿಂದ ಮಾದರಿಗಳನ್ನು ಅಥ್ಲೆಟಿಕ್ಸ್ ಇಂಟಗ್ರಿಟಿ ಯೂನಿಟ್ ಪಡೆದಿತ್ತು. 30 ವರ್ಷದ ಕ್ರೀಡಾಪಟುವಿನ ಪರೀಕ್ಷಾ ಮಾದರಿಯಲ್ಲಿ ಸ್ಟೊರ್ಘೋಲೋಲ್, ಮೆಟಂಡಯನೋನ್ ಮತ್ತು ಡೀಹೈಡ್ರೋಕ್ಲೋರೋಮಿತ್ಯಲ್‌ಟೆಸ್ಟೋಸ್ಟಿರೋನ್ ಎಂಬ ಸ್ಟೀರಾಯ್ಡ್‌ಗಳು ಪತ್ತೆಯಾಗಿದ್ದವು.

ಸ್ಥಳೀಯರಿಗೆ ಉದ್ಯೋಗ ನೀಡದಿದ್ದರೆ ಕೈಗಾರಿಕೆಗಳಿಗೆ ದಂಡ



ವಿಧಾನಸಭೆ, ಫೆ.14– ಸರ್ಕಾರದಿಂದ ಜಾಗ ಸೇರಿದಂತೆ ಇನ್ನಿತರ ಅನುಕೂಲ ಪಡೆದು ಕೈಗಾರಿಕೆ ಸ್ಥಾಪಿಸಿದವರು ಕಡ್ಡಾಯವಾಗಿ ಭೂಮಿ ನೀಡಿದ ರೈತರ ಕುಟುಂಬ ಸದಸ್ಯರಿಗೆ ಉದ್ಯೋಗ ನೀಡಬೇಕು. ಒಂದು ವೇಳೆ ಉದ್ಯೋಗ ನೀಡದ ಸಂಸ್ಥೆಗಳಿಗೆ ಭಾರೀ ಪ್ರಮಾಣದ ದಂಡ ಹಾಗೂ ಕೈಗಾರಿಕಗಳಿಂದ ಭೂಮಿ ಹಿಂಪಡೆಯುವಂತಹ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಎಚ್ಚರಿಕೆ ನೀಡಿದರು. ಕೋಲಾರ ಜಿಲ್ಲೆ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪನೆಯಾಗಿರುವ ಕೈಗಾರಿಕೆಗಳು ಸ್ಥಳೀಯರಿಗೆ ಉದ್ಯೋಗ ನೀಡದಿರುವ ಕುರಿತು ಜೆಡಿಎಸ್‌ನ ಸಮೃದ್ಧಿ ವಿ.ಮಂಜುನಾಥ್ ವಿಷಯ ಪ್ರಸ್ತಾಪಕ್ಕೆ ಎಂ.ಬಿ. ಪಾಟೀಲ್ ಉತ್ತರಿಸಿದರು.

ಒಂದನೇ ಪುಟದಿಂದ

ಇನ್ನು ಮೂರು ತಿಂಗಳು ಕಾಲಾವಕಾಶ

ಗಡುವು ವಿಸ್ತರಿಸುತ್ತೇವೆ. ಈ ಯೋಜನೆ ಪಾರದರ್ಶಕವಾಗಿದೆ. ಎಲ್ಲೂ ಕ್ಯಾಶ್ ಟ್ರಾನ್ಸಾಕ್ಷನ್ ಇಲ್ಲ. ಫೇಕ್ ವೆಬ್ ಸೈಟ್ ಬಗ್ಗೆ ಎಚ್ಚರ ವಹಿಸಲಾಗುತ್ತದೆ. ಪರಿಶೀಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು. ಸಾರಿಗೆ ಇಲಾಖೆ HSRP ನೋಂದಣಿಗೆ ಫೆಬ್ರವರಿ 17ಕ್ಕೆ ಡೆಡ್‌ಲೈನ್ ನೀಡಿತ್ತು. ಆದರೆ ಕೊನೆ ಕ್ಷಣದಲ್ಲಿ ಬಹಳಷ್ಟು ಮಂದಿ ನೋಂದಣಿಗೆ ಮುಂದಾಗಿದ್ದರಿಂದ ತಾಂತ್ರಿಕ ಅಡಚಣೆ ಎದುರಾಗಿತ್ತು. ಹೀಗಾಗಿ ಇಡೀ ರಾಜ್ಯದಲ್ಲಿ 2 ಕೋಟಿ ವಾಹನಗಳ ಪೈಕಿ 18.5 ಲಕ್ಷ ವಾಹನಗಳಿಗೆ ಅಂದರೆ ಶೇ. 9ರಷ್ಟು ವಾಹನಗಳಿಗೆ ಮಾತ್ರ HSRP ನಂಬರ್ ಪ್ಲೇಟ್ ಅಳವಡಿಕೆ ಕಾರ್ಯ ಮುಗಿದಿದೆ. ಅದರಲ್ಲೂ ಶೇ.90ರಷ್ಟು ಸರ್ಕಾರಿ ವಾಹನಗಳಿಗೇ ನೋಂದಣಿ ಮಾಡಲಾಗಿಲ್ಲ. ಈ ಹಿನ್ನೆಲೆಯಲ್ಲಿ ಗಡುವನ್ನು ವಿಸ್ತರಿಸುವಂತೆ ಸಾರ್ವಜನಿಕ ವಲಯದಿಂದ ಒತ್ತಾಯ ಕೇಳಿ ಬಂದಿತ್ತು. ಹೀಗಾಗಿ ಸಚಿವ ರಾಮಲಿಂಗಾರೆಡ್ಡಿ ಅವರು ಸಾರಿಗೆ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಡೆಡ್‌ಲೈನ್ ವಿಸ್ತರಿಸುವಂತೆ ಸೂಚನೆ ನೀಡಿದ್ದರು.

ಕಾಂಗ್ರೆಸ್ ಅಭ್ಯರ್ಥಿಗಳು

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ನಾಳೆ ಕೊನೆಯ ದಿನವಾಗಿದೆ. ಈಗಾಗಲೇ ಬಿಜೆಪಿ ತನಗೆ ದಕ್ಕಬಹುದಾದ ಒಂದು ಸ್ಥಾನಕ್ಕೆ ಅಭ್ಯರ್ಥಿಯನ್ನು ಹೆಸರಿಸಿದೆ.

ಕಾಂಗ್ರೆಸ್ ಯಾವ ರಾಜ್ಯಗಳಲ್ಲಿ ಬಲಿಷ್ಠವಾಗಿದೆಯೋ ಅಂತಹ ರಾಜ್ಯಗಳಿಂದ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಸೇರಿದಂತೆ ಕೆಲವು ಮುಖಂಡರನ್ನು ರಾಜ್ಯಸಭೆಗೆ ಕಳುಹಿಸಲು ಹೆಸರು ಪ್ರಕಟಿಸಿದೆ. ಅಂತೆಯೇ ಕರ್ನಾಟಕದಿಂದ ಎಐಸಿಸಿ ವಕ್ತಾರ ಅಜಯ್ ಮಾಕೆನ್ ಅವರಿಗೆ ಅವಕಾಶ ಮಾಡಿಕೊಟ್ಟಿದೆ. ಅಲ್ಲದೆ, ಜಿ.ಸಿ. ಚಂದ್ರಶೇಖರ್ ಮತ್ತು ಸಯ್ಯದ್ ನಾಸಿರ್ ಹುಸೇನ್ ಅವರನ್ನು ಮತ್ತೊಂದು ಅವಧಿಗೆ ಕಣಕ್ಕಿಳಿಸಿದೆ. ವಿಧಾನಸಭೆಯಲ್ಲಿನ ಬಲಾಬಲದ ಆಧಾರದ ಮೇಲೆ ಕಾಂಗ್ರೆಸ್ ತನ್ನ ಮೂವರು ಅಭ್ಯರ್ಥಿಗಳನ್ನು ರಾಜ್ಯಸಭೆಗೆ ಕಳುಹಿಸಬಹುದಾಗಿದೆ. ಬಿಜೆಪಿ ತನಗಿರುವ ಸಂಖ್ಯಾಬಲದ ಆಧಾರದ ಮೇಲೆ ಒಬ್ಬರನ್ನು ಕಣಕ್ಕಿಳಿಸಿರುವುದರಿಂದ ಈ ನಾಲ್ವರೂ ಅವಿರೋಧವಾಗಿ ಆಯ್ಕೆಯಾಗುವುದು ಖಚಿತ.

ಅಭ್ಯರ್ಥಿಗಳ ಪಟ್ಟಿ ಪ್ರಕಟ

ಜಿಲ್ಲಾ ಘಟಕ, ಪ್ರತಿ ಕ್ಷೇತ್ರಕ್ಕೆ ನೇಮಕಗೊಂಡಿದ್ದ ಉಸ್ತುವಾರಿ ಸಚಿವರು ನೀಡಿರುವ ವರದಿ ಹಾಗೂ ಚುನಾವಣಾ ಪೂರ್ವ ಸಮೀಕ್ಷಾ ವರದಿಗೆ ಬಹಳಷ್ಟು ಕ್ಷೇತ್ರಗಳಲ್ಲಿ ತಾಳೆ ಆಗದ ಕಾರಣ ಮತ್ತೆ ಸಮೀಕ್ಷೆ ನಡೆಸಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಇಂದು ಸೇರಿದ್ದ ಸಭೆ ನಿರ್ಧರಿಸಿದೆ. ಸುಮಾರು 10 ಕ್ಷೇತ್ರಗಳಲ್ಲಿ ಸಮರ್ಥ ಅಭ್ಯರ್ಥಿಗಳೇ ದೊರಕದಿರುವುದು ಪಕ್ಷಕ್ಕೆ ತಲೆನೋವಾಗಿದ್ದು, ಇಲ್ಲಿಯ ಅಭ್ಯರ್ಥಿಗಳ ಆಯ್ಕೆಯನ್ನು ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಿಗೆ ಬಿಡಲಾಗಿದೆ. ಅಭ್ಯರ್ಥಿಗಳ ಆಯ್ಕೆ ಸಂಬಂಧ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಪಟ್ಟಿ ಪರಿಷ್ಕರಣೆ ಸಮಿತಿ ಅಧ್ಯಕ್ಷ ಹರೀಶ್ ಚೌಧರಿ, ರೋಜಿ ಜಾನ್, ಅಭಿಷೇಕ್ ದತ್, ಮಯೂರ ಜಯಕುಮಾರ್, ಜಿಗ್ನೇಶ್ ಮೆವಾನಿ, ಡಾ. ವಿಶ್ವಜಿತ್ ಕದಂ ಅವರನ್ನು ಒಳಗೊಂಡ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಪರಿಷ್ಕರಣಾ ಪಟ್ಟಿ ಸಮಿತಿಯು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಂದ ಎಲ್ಲಾ 28 ಕ್ಷೇತ್ರಗಳ ಬಗ್ಗೆಯೂ ಮಾಹಿತಿ ಪಡೆದು ಪ್ರತಿ ಕ್ಷೇತ್ರದ ಬಗ್ಗೆಯೂ ಸುದೀರ್ಘ ಚರ್ಚೆ ನಡೆಸಿತು.

ರಾಷ್ಟ್ರದ 543 ಲೋಕಸಭಾ ಕ್ಷೇತ್ರಗಳ ಚುನಾವಣೆಗೆ ಮಾರ್ಚ್ 10 ರಂದು ಅಧಿಸೂಚನೆ ಹೊರಬೀಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅಧಿಸೂಚನೆಗೂ ಮುನ್ನವೇ ಅಭ್ಯರ್ಥಿಗಳನ್ನು ಪ್ರಕಟಿಸಲು ಸಭೆ ತೀರ್ಮಾನಿಸಿದೆ. ಕನಿಷ್ಠ 25 ಕ್ಷೇತ್ರಗಳನ್ನು ಗೆಲ್ಲಲೇಬೇಕೆಂದು ಪಣ ತೊಟ್ಟಿರುವ ಕೆಪಿಸಿಸಿ, ಗೆಲುವನ್ನೇ ಮಾನದಂಡವಾಗಿಟ್ಟುಕೊಂಡು ಅಭ್ಯರ್ಥಿಗಳ ಆಯ್ಕೆ ಸಂಬಂಧ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರು ಸಮಿತಿಗೆ ಮಾಹಿತಿ ನೀಡಿದ್ದಾರೆ. ಈ ಮಾಹಿತಿ ಆಧಾರದ ಮೇಲೆ 18 ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ, ಆದರೆ ಇದು ಅಂತಿಮವಲ್ಲ. ಈ ಸಂಭವನೀಯ ಅಭ್ಯರ್ಥಿಗಳ ಹೆಸರೂ ತೃಪ್ತಿದಾಯಕವಾಗಿಲ್ಲದ ಹಿನ್ನೆಲೆಯಲ್ಲಿ ಮತ್ತೊಂದು ಸುತ್ತಿನ ಸಮೀಕ್ಷೆ ನಡೆಸಿ ವರದಿ ಪಡೆದುಕೊಳ್ಳಲು ತೀರ್ಮಾನಿಸಲಾಗಿದೆ. ಎಐಸಿಸಿಯ ಚುನಾವಣಾ ಸಮಿತಿ ಸಭೆ ಸೇರುವುದಕ್ಕೂ ಮುನ್ನ ಎಲ್ಲಾ ಕ್ಷೇತ್ರಗಳಿಗೂ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ಶಿಫಾರಸು ಮಾಡಲು ನಿರ್ಧರಿಸಲಾಗಿದೆ. ರಾಜ್ಯದ ಶಿಫಾರಸುಗಳ ಬಗ್ಗೆ ಎಐಸಿಸಿ ತೆಗೆದುಕೊಳ್ಳುವ ತೀರ್ಮಾನದ ನಂತರ ಅಭ್ಯರ್ಥಿಗಳ ಹೆಸರು ಪ್ರಕಟಗೊಳ್ಳಲಿದೆ.

ರೈತ ಮುಖಂಡರ ಸಮ್ಮತಿ

ನಿರ್ಧರಿಸಿದ್ದೇವೆ. ನಾವಿದ್ದ ಸ್ಥಳದಿಂದ ಮುಂದೆ ಹೋಗಲು ಪ್ರಯತ್ನಿಸುವುದಿಲ್ಲ ಎಂದು ನಿರ್ಧರಿಸಿದ್ದೇವೆ. ನಾಳೆ ಸಂಜೆ 5 ಗಂಟೆಗೆ ಸಭೆ ಕರೆಯಲಾಗಿದೆ. ನಾವು ನಮ್ಮ ಶಾಂತಿಯುತ ಪ್ರತಿಭಟನೆ ಯನ್ನು ಮುಂದುವರಿಸುತ್ತೇವೆ. ಅಲ್ಲಿಯವರೆಗೆ ನಮ್ಮ ಕಡೆಯಿಂದ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದಿದ್ದಾರೆ ಪಂಧೇರ್.

ಬುಧವಾರ ಶಾಂತಿಯುತ ಪ್ರತಿಭಟನೆ ನಡೆಸಿದರೂ ಡ್ರೋನ್ ಗಳನ್ನು ಬಳಸಲಾಗಿದ್ದು, ಅಶ್ರುವಾಯು ಶೆಲ್‌ಗಳು ಮತ್ತು ರಬ್ಬರ್ ಪೆಲೆಟ್‌ಗಳನ್ನು ಹಾರಿಸಲಾಗಿದೆ ಎಂದು ರೈತ ಮುಖಂಡರು ಆರೋಪಿಸಿದ್ದಾರೆ. ನಮ್ಮ ಮೇಲೆ ದಾಳಿ ಮಾಡಿದ್ದು ಪೋಲೀಸರಲ್ಲ, ಅರೆಸೇನಾ ಪಡೆಗಳು. ಇಷ್ಟೆಲ್ಲಾ ಆದರೂ ನಾವು ಕೇಂದ್ರ ಸರ್ಕಾರದೊಂದಿಗೆ ಮಾತನಾಡಲು ಸಿದ್ಧರಿದ್ದೇವೆ ಎಂದಿದ್ದಾರೆ. ಇದಕ್ಕೂ ಮುನ್ನ ಬುಧವಾರ ಕೃಷಿ ಸಚಿವ ಅರ್ಜುನ್ ಮುಂಡಾ ಅವರು ಸಂವಾದಕ್ಕೆ ಕರೆ ನೀಡಿದ್ದರು. ಸಾಮಾನ್ಯ ಜನರಿಗೆ ಅನಾನುಕೂಲವಾಗುವ ಯಾವುದನ್ನೂ ಮಾಡಬೇಡಿ ಎಂದು ಮುಂಡಾ ರೈತರಿಗೆ ಒತ್ತಾಯಿಸಿದರು. ನಾವು ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಚರ್ಚಿಸಬೇಕು. ರೈತರು ಸಹಜ ಜೀವನಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ಸಾಮಾನ್ಯ ಜನರಿಗೆ ಅನಾನುಕೂಲತೆಯನ್ನು ಉಂಟುಮಾಡುವ ಯಾವುದನ್ನಾದರೂ ಮಾಡುವುದರಿಂದ ಯಾವುದೇ ಪರಿಹಾರವನ್ನು ಕಂಡುಹಿಡಿಯಲಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಇಂತಹ ಕ್ರಮಗಳು ಹುಡುಕುವಲ್ಲಿ ಅಡೆತಡೆಗಳನ್ನು ಮಾತ್ರ ಸೃಷ್ಟಿಸುತ್ತವೆ. ಪರಿಹಾರ, ಸಂವಾದಕ್ಕೆ ಅನುಕೂಲಕರ ವಾತಾವರಣವನ್ನು ಕಾಯ್ದುಕೊಳ್ಳುವಂತೆ ನಾನು ಅವರನ್ನು ಒತ್ತಾಯಿಸುತ್ತೇನೆ ಎಂದು ಸಚಿವರು ಹೇಳಿದರು.

ಹಿಂದೂ ದೇವಸ್ಥಾನ ಉದ್ಘಾಟಿಸಿದ ಮೋದಿ

ನಿರ್ಮಿಸಲಾಗಿದೆ. 2018 ರಲ್ಲಿ ಮೋದಿಯವರ ಯುಎಇ ಭೇಟಿಯ ಸಂದರ್ಭದಲ್ಲಿ ಭಾರತವು ಅದರ ನಿರ್ಮಾಣವನ್ನು ಘೋಷಿಸಿತ್ತು. ಉತ್ತರ ಭಾರತದ ನಗರವಾದ ಅಯೋಧ್ಯೆಯಲ್ಲಿ ಹಿಂದೂ ದೇವರು ರಾಮನ ಭವ್ಯವಾದ ದೇವಾಲಯವನ್ನು ಮೋದಿಯವರು ಕಳೆದ ತಿಂಗಳು 22ರಂದು ಉದ್ಘಾಟಿಸಿದ್ದರು. ಅಬುಧಾಬಿಯಲ್ಲಿರುವ ದೇವಸ್ಥಾನವನ್ನು BAPS ಸ್ವಾಮಿನಾರಾಯಣ ಸಂಸ್ಥೆ ನಡೆಸುತ್ತಿದೆ, ಇದು ಆಧ್ಯಾತ್ಮಿಕ, ಸ್ವಯಂಸೇವಕ–ಚಾಲಿತ ಫೆಲೋಶಿಪ್ ಎಂದು ಕರೆದುಕೊಳ್ಳುತ್ತದೆ, ಇದು ನಂಬಿಕೆ, ಸೇವೆ ಮತ್ತು ಜಾಗತಿಕ ಸಾಮರಸ್ಯದ ಹಿಂದೂ ಮೌಲ್ಯಗಳನ್ನು ಬೆಳೆಸುವ ಗುರಿಯನ್ನು ಹೊಂದಿದೆ.

200 ವರ್ಷಗಳ ಇತಿಹಾಸವನ್ನು ಪ್ರತಿಪಾದಿಸುವ ಈ ಸಂಘಟನೆಯು ಮೋದಿಯವರ ತವರು ರಾಜ್ಯ ಗುಜರಾತ್‌ನಲ್ಲಿ ಪ್ರಧಾನ ಕಛೇರಿಯನ್ನು ಹೊಂದಿದೆ.

ದಶಕಗಳಿಂದ ಯುಎಇಯಲ್ಲಿ ದೇವಾಲಯಗಳು ಅಸ್ತಿತ್ವದಲ್ಲಿದ್ದರೂ, ಸಾಂಪ್ರದಾಯಿಕ ತಂತ್ರಗಳನ್ನು ಬಳಸಿ ನಿರ್ಮಿಸಲಾದ ಮೊದಲ ದೇವಾಲಯವಿದು ಎಂದು ಹೇಳಲಾಗುತ್ತಿದೆ. ರಾಜಸ್ಥಾನ ರಾಜ್ಯದ ಗುಲಾಬಿ ಮರಳುಗಲ್ಲು ಮತ್ತು ಬಿಳಿ ಇಟಾಲಿಯನ್ ಅಮೃತಶಿಲೆಯಿಂದ ಕಲ್ಲುಗಳನ್ನು ಭಾರತದಲ್ಲಿ ಕೆತ್ತಿ ದುಬೈನಲ್ಲಿ ಜೋಡಿಸಲಾಗಿದೆ.

ಯುಪಿಎಸ್‌ಸಿ ಪರೀಕ್ಷೆ–2024: ಅಧಿಸೂಚನೆ ಪ್ರಕಟ

ಎರಡೂ ಪತ್ರಿಕೆಗಳು ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಸಾಮಾನ್ಯ ಜ್ಞಾನ ಪತ್ರಿಕೆ–2 ಅರ್ಹತೆಯ ಪತ್ರಿಕೆಯಾಗಿದೆ. ಇದರಲ್ಲಿ ಕನಿಷ್ಠ ಶೇ 33ರಷ್ಟು ಅಂಕ ಗಳಿಸುವುದು ಕಡ್ಡಾಯ. ಇದು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಇರಲಿದೆ.

ಮುಖ್ಯ ಪರೀಕ್ಷೆ: ಮೆರಿಟ್ ಆಧಾರಿತ ಈ ಪರೀಕ್ಷೆಯಲ್ಲಿ ದೀರ್ಘ ಉತ್ತರಗಳನ್ನು ಬರೆಯಬೇಕು. ಪತ್ರಿಕೆ–1ರಲ್ಲಿ ಭಾರತೀಯ ಭಾಷೆ ಹಾಗೂ ಪತ್ರಿಕೆ–2ರಲ್ಲಿ ಇಂಗ್ಲಿಷ್ ಇರಲಿದೆ. 300 ಅಂಕಗಳಿಗೆ ಈ ಪರೀಕ್ಷೆ ನಡೆಯಲಿದೆ. ಪ್ರಬಂಧ, ಸಾಮಾನ್ಯ ಜ್ಞಾನ–1, 2, 3 ಹಾಗೂ 4 ಪತ್ರಿಕೆಗಳು ಮತ್ತು ಐಚ್ಛಿಕ ವಿಷಯ ಸೇರಿ 275 ಅಂಕಗಳಿಗೆ ಪರೀಕ್ಷೆ ನಡೆಯಲಿದೆ. ಇವುಗಳಲ್ಲಿ ಕನಿಷ್ಠ ಅರ್ಹತೆಯ ಅಂಕಗಳಿಲ್ಲ. ರಿಟನ್ ಟೆಸ್ಟ್‌ನಲ್ಲಿ 9 ಪತ್ರಿಕೆಗಳು ಇರಲಿವೆ. ಪ್ರಬಂಧ ಮಾದರಿಯ ಉತ್ತರಗಳನ್ನು ಬರೆಯಬೇಕಿದ್ದು ವಿಭಾಗ–2ರಲ್ಲಿ ಇರಲಿದೆ. ನಂತರ ಸಂದರ್ಶನ ನಡೆಯಲಿದೆ. ಸಂದರ್ಶನ ಹಂತಕ್ಕೆ ಅರ್ಹತೆ ಗಿಟ್ಟಿಸಿಕೊಳ್ಳಲು ಲಿಖಿತ ಪರೀಕ್ಷೆಯಲ್ಲಿ ಅಂಕಗಳು ಆಧಾರವಾಗಲಿವೆ.

ಮೈಸೂರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸಭೆ

ವಿದ್ಯುತ್ ದರ ಹೆಚ್ಚಳ ಪ್ರಸ್ತಾವನೆ: ಸಾರ್ವಜನಿಕರ ತೀವ್ರ ವಿರೋಧ

ಹಾಲಿ ದರದಲ್ಲೇ ಕಡಿತಕ್ಕೆ ಆಗ್ರಹ

ಮೈಸೂರು, ಫೆ.14(ಎಂಟಿವೈ)– ವಿದ್ಯುತ್ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಕರೆದಿದ್ದ ಸಭೆಯಲ್ಲಿ ವಿದ್ಯುತ್ ದರ ಹೆಚ್ಚಳಕ್ಕೆ ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ಹಾಲಿ ನಿಗಧಿ ಮಾಡಿರುವ ದರವನ್ನು ಕಡಿಮೆ ಮಾಡುವಂತೆ ಒಕ್ಕೊರಲಿನ ಒತ್ತಾಯ ಕೇಳಿ ಬಂದಿತು.

ಮೈಸೂರಿನ ಜಿ.ಪಂ ಸಭಾಂಗಣದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಸಹಯೋಗದಲ್ಲಿ ಆಯೋಜಿಸಿದ್ದ 2022–23ನೇ ಸಾಲಿನ ವಾರ್ಷಿಕ ಕಾರ್ಯಕ್ಷಮತೆ ವಿಮರ್ಶೆ ವರದಿ ಹಾಗೂ 2024–25ನೇ ಸಾಲಿನ ವಾರ್ಷಿಕ ಕಂದಾಯ ಅಗತ್ಯತೆ (ಎಆರ್‌ಆರ್) ಶುಲ್ಕಗಳಿಂದ ಬರಬಹುದಾದ ನಿರೀಕ್ಷಿತ ಆದಾಯ (ಇಆರ್‌ಸಿ) ಮತ್ತು ವಿದ್ಯುತ್ ದರ ಪರಿಷ್ಕರಣೆ ಕುರಿತು ನಡೆಸಿದ ಸಾರ್ವಜನಿಕರ ವಿಚಾರಣೆ ಸಭೆಯಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು, ಕೈಗಾರಿಕೋದ್ಯಮಿಗಳು ವಿದ್ಯುತ್ ದರ ಹೆಚ್ಚಳಕ್ಕೆ ವಿರೋಧ ವ್ಯಕ್ತಪಡಿಸಿದರಲ್ಲದೆ, ದರ ಹೆಚ್ಚಳ ಪ್ರಸ್ತಾವನೆ ಕೈಬಿಡುವಂತೆ ಆಗ್ರಹಿಸಿದರು.

ವಿದ್ಯುತ್ ದರ ಯುನಿಟ್‌ಗೆ 50 ಪೈಸೆ ಹೆಚ್ಚಳ ಮಾಡುವುದಕ್ಕೆ ಸೆಸ್ಕ್ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ಪ್ರಸ್ತಾಪವಾಗುತ್ತಿದ್ದಂತೆ ವಿದ್ಯುತ್ ದರ ಹೆಚ್ಚಳ ಬೇಡ, ಇರುವ ದರವನ್ನೇ ಕಡಿಮೆ ಮಾಡಬೇಕು. ಅನಗತ್ಯ ವೆಚ್ಚ ನಿಲ್ಲಿಸಿ, ಪರ್ಯಾಯ ಆದಾಯ ಮೂಲಕ್ಕೆ ಆದ್ಯತೆ ನೀಡಿ ಎಂಬ ಸಲಹೆ ವ್ಯಕ್ತವಾಯಿತು. ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಮಾತನಾಡಿ, ರಾಜ್ಯದಲ್ಲಿ ಪ್ರಸ್ತುತ ನಿಗದಿ ಮಾಡಿರುವ ವಿದ್ಯುತ್ ದರ ಹೆಚ್ಚಾಗಿದೆ. ಇದರಿಂದ ಗ್ರಾಹಕರಿಗೆ ಮಾತ್ರವಲ್ಲದೆ, ಸಣ್ಣ ಕೈಗಾರಿಕೋದ್ಯಮಿಗಳಿಗೂ ತೊಂದರೆಯಾಗಿದೆ. ಬೇರೆ ರಾಜ್ಯಗಳಲ್ಲಿ ಇರುವಂತೆ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಪ್ರತ್ಯೇಕ ವಿದ್ಯುತ್ ದರ ಪಟ್ಟಿ ನಿಗದಿ ಪಡಿಸಬೇಕು.

ವಿದ್ಯುತ್ ದರ ಹೆಚ್ಚಳದ ಪ್ರಸ್ತಾವನೆಯನ್ನು ತಿರಸ್ಕರಿಸುವುದರೊಂದಿಗೆ ಹಾಲಿ ಇರುವ ದರವನ್ನು ಇಳಿಕೆ ಮಾಡಬೇಕು ಎಂದು ಮನವಿ ಸಲ್ಲಿಸಿದರು. ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಮಾಜಿ ನಿರ್ದೇಶಕ ಕೆ.ರವೀಂದ್ರ ಪ್ರಭು ಮಾತನಾಡಿ, ಒಂದೆಡೆ ಸೆಸ್ಕ್‌ನ ನಿರ್ವಹಣೆ ವೆಚ್ಚ ಹೆಚ್ಚಾಗಿದೆ. ಬೇಕಾ ಬಿಟ್ಟಿಯಾಗಿ ಹೆಚ್ಚಿನ ದರ ನೀಡಿ ವಿದ್ಯುತ್ ಖರೀದಿ ಮಾಡುತ್ತಿರುವುದು ನಿಲ್ಲಿಸಬೇಕು. ದರ ಹೆಚ್ಚಳದ ಆಲೋಚನೆಗಿಂತ ಬೇರೆಯಾವ ಮೂಲದಿಂದ ಆದಾಯ ಗಳಿಸಬಹುದು ಎಂದು ಚಿಂತಿಸಬೇಕು. ಇದರಿಂದ ಜನರಿಗೆ ಆಗುವ ಹೊರೆ ತಪ್ಪಿಸಬಹುದು ಎಂದು ಅಭಿಪ್ರಾಯಪಟ್ಟರು.

ನಷ್ಟಕ್ಕೆ ಬ್ರೇಕ್ ಹಾಕಿ: ಗುತ್ತಿಗೆದಾರ ಚಂದ್ರಶೇಖರ್ ಮಾತನಾಡಿ, ವಿದ್ಯುತ್ ದರ ಹೆಚ್ಚಳ ಪ್ರಸ್ತಾವನೆ ಸರಿಯಲ್ಲ. ಆದಾಯ ಹೆಚ್ಚಿಸಲು ದರ ಹೆಚ್ಚಳ ಮಾಡುವುದೇ ಅಂತಿಮವಲ್ಲ. ವಿವಿಧೆಡೆ ಅಳವಡಿಸಿರುವ ಟ್ರಾನ್ಸ್‌ಫಾರ್ಮರ್‌ಗಳಿಂದ ಆಗುತ್ತಿರುವ ನಷ್ಟವನ್ನು ಸರಿಪಡಿಸಿಕೊಳ್ಳಬೇಕು. ವಿದ್ಯುತ್ ಸೋರಿಕೆ ತಡೆ ಗಟ್ಟಬೇಕು. ಗ್ರಾಹಕರೊಂದಿಗೆ ಉತ್ತಮವಾಗಿ ವರ್ತಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ತರಬೇತಿ ನೀಡಬೇಕು ಎಂದು ಸಲಹೆ ನೀಡಿದರು.

ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ: ಗ್ರಾಹಕ ರವಿರಾಜ್ ಅರಸ್ ಮಾತ ನಾಡಿ, ದರ ಹೆಚ್ಚಳ ಮಾಡುವುದೇ ಸೆಸ್ಕ್‌ನ ಮೂಲ ಉದ್ದೇಶವಾಗಬಾರದು. ವಿದ್ಯುತ್ ಉತ್ಪಾದನೆಗೆ ಸೋಲಾರ್ ಪ್ಯಾನಲ್ ಅಳವಡಿಕೆಗೆ ಪ್ರೋತ್ಸಾಹ ನೀಡುವುದರೊಂದಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಸೆಸ್ಕ್ ಅಧಿಕಾರಿಗಳು ಮತ್ತು ಸಿಬ್ಬಂದಿ ಮಾಡಬೇಕು. ಆ ಮೂಲಕ ವಿದ್ಯುತ್ ಉತ್ಪಾದನೆ ಕ್ರಮ ಕೈಗೊಳ್ಳಬೇಕು ಎಂದರು.

ಗುಣಮಟ್ಟದ ಸೇವಾ ಉದ್ದೇಶವಿಲ್ಲ: ಗ್ರಾಹಕ ರಾಮೇಗೌಡ ಮಾತನಾಡಿ, ದರ ಹೆಚ್ಚಳ ಮಾಡುವ ಪ್ರಸ್ತಾವನೆ ಗಮನಿಸಿದರೆ ಸೆಸ್ಕ್ ಸಾರ್ವಜನಿಕರಿಂದ ಹಣ ಕೀಳುವುದಕ್ಕೆ ಮಾತ್ರ ಸೀಮಿತವಾಗಿದೆ ಎನಿಸುತ್ತದೆ. ಹಾಲಿ ಇರುವ ದರವೇ ಸಾರ್ವಜನಿಕರಿಗೆ ಹೊರೆಯಾಗಿ ಪರಿಣಮಿಸಿದೆ. ಆದರೆ, ಗುಣಮಟ್ಟದ ಸೇವೆ ನೀಡುತ್ತಿಲ್ಲ. ಆಡಳಿತ ವೆಚ್ಚ ಕಡಿಮೆ ಮಾಡಿದರೆ ವಿದ್ಯುತ್ ದರ ಹೆಚ್ಚಳ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರು.

ಪರ್ಯಾಯ ಆದಾಯ ಮೂಲ ಹುಡುಕಿ: ಸಾರ್ವಜನಿಕರ ಮನವಿಗೆ ದನಿಗೂಡಿಸಿದ ಆಯೋಗದ ಅಧ್ಯಕ್ಷ ಪಿ.ರವಿ ಕುಮಾರ್, ಪ್ರತಿ ವರ್ಷ ವಿದ್ಯುತ್ ದರ ಏರಿಕೆಯ ಪ್ರಸ್ತಾವನೆ ಏಕೆ ಮಂಡಿಸುತ್ತೀರಿ. ಪರ್ಯಾಯ ಆದಾಯ ಮೂಲಗಳನ್ನು ಹುಡುಕುಕವ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ದರ ಹೆಚ್ಚಳ ಅನಿವಾರ್ಯ: ಇದಕ್ಕೂ ಮುನ್ನ ಸೆಸ್ಕ್‌ನ ಎಂಡಿ ಜಿ. ಶೀಲಾ ಮಾತನಾಡಿ, ಸೆಸ್ಕ್ ವ್ಯಾಪ್ತಿಯಲ್ಲಿ 2024–25ನೇ ಸಾಲಿನಲ್ಲಿ 7379.89 ಕೋಟಿ ರೂ. ವೆಚ್ಚವಾಗಿದೆ. ಆದರೆ, ವಿದ್ಯುತ್ ಬಿಲ್‌ನಿಂದಾಗಿ 6940.34 ಕೋಟಿ ರೂ. ಆದಾಯ ಬರುವ ನಿರೀಕ್ಷೆ ಇದ್ದು, 439.55 ಕೋಟಿ ರೂ. ಸೆಸ್ಕ್‌ಗೆ ಹೊರೆಯಾಗುತ್ತಿದ್ದು, ಅನಿವಾರ್ಯವಾಗಿ ಪ್ರತಿ ಯೂನಿಟ್‌ಗೆ 50 ಪೈಸೆ ದರವನ್ನು ಹೆಚ್ಚಳ ಮಾಡಬೇಕು ಎಂದು ಮನವಿ ಮಾಡಿದರು.

ಅಹವಾಲು ಸ್ವೀಕಾರ: ಸಭೆಯಲ್ಲಿ ಭಾಗವಹಿಸಿದ್ದ ಸಾರ್ವಜನಿಕರು ಸೇರಿ ದಂತೆ ಸಂಘ–ಸಂಸ್ಥೆಗಳ ಪ್ರತಿನಿಧಿಗಳಿಂದ ದರ ಹೆಚ್ಚಳ ಪ್ರಸ್ತಾಪ ಸಂಬಂಧ ಆಯೋಗದ ಅಧ್ಯಕ್ಷರು, ಅಹವಾಲು ಸ್ವೀಕರಿಸಿದರು. ಬಹುತೇಕ ಮಂದಿ ದರ ಹೆಚ್ಚಳಕ್ಕೆ ವಿರೋಧ ವ್ಯಕ್ತಪಡಿಸುವುದರೊಂದಿಗೆ ಇರುವ ದರವನ್ನು ಕಡಿಮೆ ಮಾಡಬೇಕು ಎಂದು ಮನವಿ ಮಾಡಿ ದರಲ್ಲದೆ, ಸೆಸ್ಕ್‌ನಿಂದ ಗುಣಮಟ್ಟದ ಸೇವೆ ಸಿಗುತ್ತಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಎಲ್ಲರ ಅಭಿಪ್ರಾಯ, ಸಲಹೆ, ಸೂಚನೆ ಹಾಗೂ ಅನಿಸಿಕೆಗಳನ್ನು ಆಲಿಸಿದ ಆಯೋಗದ ಅಧ್ಯಕ್ಷ ಪಿ.ರವಿಕುಮಾರ್ ಅವರು, ಅಗತ್ಯ ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು.

ಪ್ರಚಾರದ ಕೊರತೆ: ಸಭೆಯ ಆರಂಭದಲ್ಲಿಯೇ ಸಾಕಷ್ಟು ಮಂದಿ ಆಯೋಗ ವಿಚಾರಣೆ ಇರುವುದರ ಬಗ್ಗೆ ಸೆಸ್ಕ್‌ನಿಂದ ತಡವಾಗಿ ಮಾಹಿತಿ ಸಿಕ್ಕಿದೆ. ಪ್ರಚಾರದ ಕೊರತೆಯಿಂದ ಸಭೆಗೆ ಹೆಚ್ಚು ಮಂದಿ ಬರಲು ಸಾಧ್ಯವಾಗಿಲ್ಲ ಎಂದು ಸೆಸ್ಕ್ ನಡೆಗೆ ಆಕ್ಷೇಪ ವ್ಯಕ್ತಪಡಿಸಿದರು. ಸಭೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಸದಸ್ಯ ಎಂ.ಡಿ. ರವಿ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆಗಳ ಸಂಘದ ಅಧ್ಯಕ್ಷ ಕೆ.ಬಿ. ಲಿಂಗರಾಜು, ಅಶೋಕ್ ಇದ್ದರು.



ಮೈಸೂರು ಜಿ.ಪಂ ಸಭಾಂಗಣದಲ್ಲಿ ಬುಧವಾರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಸಹಯೋಗದಲ್ಲಿ ವಿದ್ಯುತ್ ದರ ಹೆಚ್ಚಳ ಪ್ರಸ್ತಾವನೆ ಕುರಿತು ಸಾರ್ವಜನಿಕ ವಿಚಾರಣಾ ಸಭೆ ನಡೆಯಿತು.

ದೆಹಲಿ ಸಭೆ ನಂತರ ಅಭ್ಯರ್ಥಿಗಳ ಪಟ್ಟಿಗೆ ಅಂತಿಮ ರೂಪ



ಬೆಂಗಳೂರು, ಫೆ.14(ಕೆಎಂಶಿ)– ಲೋಕಸಭೆ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಮತ್ತೊಂದು ಸುತ್ತಿನ ಸಮೀಕ್ಷೆ ನಡೆಸಿ, ದೆಹಲಿಯಲ್ಲಿ ಸಭೆ ಮಾಡಲಿದ್ದೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಚುನಾವಣೆ ಸಮಿತಿ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದಿನ ಸಭೆಯಲ್ಲಿ ಪಕ್ಷದ ವೀಕ್ಷಕರು, ಜಿಲ್ಲಾ ಮಂತ್ರಿಗಳು, ಕೆಲವು ಕಾರ್ಯಕರ್ತರು ಸಲ್ಲಿಸಿದ್ದ ವರದಿ ಹಾಗೂ ನಮ್ಮ ಸಮೀಕ್ಷಾ ವರದಿಗಳನ್ನು ಪರಾಮರ್ಶೆ ಮಾಡಿದ್ದೇವೆ, ಮತ್ತೊಂದು ಸುತ್ತಿನ ಸಮೀಕ್ಷೆ ಮೂಲಕ ಅಭಿಪ್ರಾಯ ಸಂಗ್ರಹಕ್ಕೆ ಸೂಚಿಸಿದ್ದೇವೆ. ಪಕ್ಷದ ಅಭ್ಯರ್ಥಿಗಳ ಪಟ್ಟಿ ಇನ್ನೂ ಅಂತಿಮವಾಗಿಲ್ಲ. ಮುಂದಿನ ಸುತ್ತಿನ ಸಭೆಯನ್ನು ದೆಹಲಿಯಲ್ಲಿ ನಡೆಸಲಾಗುವುದು, ಬಜೆಟ್ ಅಧಿವೇಶನದ ಹಿನ್ನೆಲೆಯಲ್ಲಿ ಈ ಬಾರಿ ಬೆಂಗಳೂರಿನಲ್ಲೇ ಸಭೆ ಮಾಡಲಾಗಿದೆ ಎಂದರು. ಅಭ್ಯರ್ಥಿಗಳ ಪಟ್ಟಿ ಆದಷ್ಟು ಬೇಗ ಅಂತಿಮಗೊಳಿಸಬೇಕು. ಶೇ.50ರಷ್ಟು ಅಭ್ಯರ್ಥಿಗಳಿಗಾದರೂ ಕೆಲಸ ಆರಂಭಿಸಲು ನಾವು ಸೂಚನೆ ನೀಡಬೇಕಿದೆ.

ಎಷ್ಟು ಕ್ಷೇತ್ರಗಳಲ್ಲಿ ಒಬ್ಬ ಆಕಾಂಕ್ಷಿ ಇದ್ದಾರೆ ಎಂಬ ವಿಚಾರವಾಗಿ ಚರ್ಚೆ ಮಾಡಿಲ್ಲ. ನಮಗೆ ಬಂದಿರುವ ವರದಿಗಳು, ಅಭಿಪ್ರಾಯದ ಬಗ್ಗೆ ಚರ್ಚೆ ಮಾಡಿದ್ದೇವೆ. ಎಐಸಿಸಿಗೆ ಕಳಿಸಲಾಗಿರುವ ಪಟ್ಟಿ ಬಗ್ಗೆ ಗೊಂದಲವಿದೆ ಎಂಬುದು ಸುಳ್ಳು. ನಾವು ಎಐಸಿಸಿಗೆ ಯಾವುದೇ ಪಟ್ಟಿ ನೀಡಿಲ್ಲ ಎಂದರು.

ನಂಜನಗೂಡು ಬಳಿ ಇದೆ ಕೋಮು ಸೌಹಾರ್ದತೆ ಸಾರುವ ದರ್ಗಾ...!

ಸರ್ವ ಧರ್ಮಿಯರ ಸಮಾಗಮ, ಕನ್ನಡದಲ್ಲೆ ಪ್ರಾರ್ಥನೆ ವೈಶಿಷ್ಟತೆ





ಮೈಸೂರು, ಫೆ.14(ಬಿಎಲ್‌ಯು)– ಧರ್ಮ ಪ್ರತಿಷ್ಠೆಗಾಗಿ ಕೆಲವೆಡೆ ಹಿಂದೂ–ಮುಸ್ಲಿಂರ ನಡುವೆ ಸೌಹಾರ್ದತೆ ಆಗಾಗ ಹದಗೆಡಬಹುದು. ನಂಜನಗೂಡು ಬಳಿಯ ದರ್ಗಾವೊಂದರಲ್ಲಿ ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತರು ಒಂದೆಡೆ ಸಮಾಗಮಗೊಳ್ಳುತ್ತಾರೆ. ಅಲ್ಲದೆ ಈ ದರ್ಗಾದಲ್ಲಿ ಪ್ರತಿ ಗುರುವಾರ ಉರ್ದು, ಅರೇಬಿಕ್ ಬದಲು ಕನ್ನಡದಲ್ಲೇ ಪ್ರಾರ್ಥನೆ ನಡೆಯಲಿದೆ. ಈ ಮೂಲಕ ದರ್ಗಾದಲ್ಲಿ ಕನ್ನಡದ ಕಂಪು ಪಸರಿಸಲಿದೆ.

ದೇವನೊಬ್ಬ ನಾಮ ಹಲವು, ರಾಮ ರಹೀಮ ಎಲ್ಲಾ ಒಬ್ಬನೆ. ಈ ಮಾತನ್ನು ಕೆಲವರು ಅರ್ಥ ಮಾಡಿಕೊಳ್ಳುತ್ತಿಲ್ಲ. ಕೆಲವರಿಗೆ ಧರ್ಮ ಒಂದು ರೀತಿ ಅಫೀಮು ಆಗಿದೆ ಹಾಗೂ ಸೌಹಾರ್ದತೆಗೆ ಮಾರಕವಾಗುತ್ತಿದ್ದಾರೆ. ಕೆಲವು ಸ್ಥಳಗಳಲ್ಲಿ ಧರ್ಮ ಪ್ರತಿಷ್ಠೆಗಾಗಿ ಕೋಮು ದಳ್ಳುರಿಯೇ ನಡೆದಿದೆ. ಇದರಿಂದ ಭಾರೀ ಪ್ರಾಣ ಹಾಗೂ ಆಸ್ತಿ–ಪಾಸ್ತಿ ಹಾನಿ ಕೂಡ ಆಗಿದೆ.

ಇಂತಹ ಪರಿಸ್ಥಿತಿಯಲ್ಲಿ ಮೈಸೂರಿನ ನಂಜನಗೂಡು ತಾಲೂಕು ಹುಲ್ಲಹಳ್ಳಿ ಬಳಿಯ ಬೆಳಲೆ ಗೇಟ್ ಬಳಿಯ ದರ್ಗಾದಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ ಎಂಬ ಭೇದ ಭಾವವಿಲ್ಲದೆ ಎಲ್ಲಾ ಧರ್ಮಿಯರು ಸಮಾಗಮಗೊಳ್ಳುತ್ತಾರೆ. ಎಲ್ಲರೂ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತಾರೆ. ವರ್ಷಕ್ಕೊಮ್ಮೆ ಈ ದರ್ಗಾದಲ್ಲಿ ನಡೆಯುವ ಉರುಸ್ ಕೂಡ ಸರ್ವ ಧರ್ಮ ಸಮ್ಮೇಳನದ ಮೂಲಕ ಆಚರಣೆ ಮಾಡಲಾಗುತ್ತದೆ.

ಬೆಳಲೆ ಗೇಟ್ ಬಳಿಯ ಹಜರತ್ ಸೈದಾನಿ ಭೀ ಮಾ ದರ್ಗಾ ಇತರೆ ದರ್ಗಾಗಳಿಗಿಂತ ಬಹಳ ವಿಶಿಷ್ಟ. ಸಾಮಾನ್ಯವಾಗಿ ದರ್ಗಾದಲ್ಲಿ ಉರ್ದು ಮತ್ತು ಅರೇಬಿಕ್ ಭಾಷೆಯಲ್ಲಿ ಪ್ರಾರ್ಥನೆ ಮಾಡಲಾಗುತ್ತದೆ. ಆದರೆ ಈ ದರ್ಗಾದಲ್ಲಿ ಪ್ರತಿ ಗುರುವಾರ ರಾತ್ರಿ 8 ರಿಂದ 9 ಗಂಟೆ ತನಕ ಕನ್ನಡದಲ್ಲಿ ಪ್ರಾರ್ಥನೆ ನಡೆಯಲಿದೆ.

ದರ್ಗಾದ ಗುರುಗಳಾದ ಹಜರತ್ ಶಂಶುದ್ದೀನ್ ಜೂರಿ ಖಾಜೂರ್ ನೇತೃತ್ವದಲ್ಲಿ ನಡೆಯುವ ಪ್ರಾರ್ಥನೆಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಸೇರಿದಂತೆ ಎಲ್ಲಾ ಧರ್ಮಿಯರು ಭಾಗಿಯಾಗುತ್ತಾರೆ. ಪ್ರಾರ್ಥನೆ ನಂತರ ಭಕ್ತರ ಸೇವಾರ್ಥದಿಂದ ಅನ್ನ ದಾಸೋಹ ಆಯೋಜಿಸಲಾಗುತ್ತದೆ.

ಹಜರತ್ ಸೈದಾನಿ ಭೀ ಮಾ ದರ್ಗಾದಲ್ಲಿ ಪ್ರಾರ್ಥನೆ ಮಾತ್ರವಲ್ಲದೆ ಪ್ರತಿಯೊಂದು ಆಚರಣೆಯೂ ಕನ್ನಡದಲ್ಲೇ ನಡೆಯಲಿದೆ. ಈ ಮೂಲಕ ಇದು ಹಿಂದೂ, ಮುಸ್ಲಿಂ ಭಾವೈಕ್ಯತೆ ಹಾಗೂ ಸಹೋದರತೆಯನ್ನು ಸಾರುವ ದರ್ಗಾವಾಗಿದೆ.

ಪ್ರತಿ ವರ್ಷ ನಡೆಯುವ ಉರುಸ್ ಆಚರಣೆಯನ್ನು ಕೂಡ ಸರ್ವ ಧರ್ಮ ಸಮಾವೇಶದ ಮೂಲಕ ಆಚರಣೆ ಮಾಡಲಾಗುತ್ತದೆ. ಹಿಂದೂ ಧರ್ಮದಿಂದ ಮಠಾಧೀಶರು, ಕ್ರಿಶ್ಚಿಯನ್ ಧರ್ಮದಿಂದ ಚರ್ಚ್ ಪಾದ್ರಿಗಳು ಹಾಗೂ ಮುಸ್ಲಿಂ ಧರ್ಮದಿಂದ ಧರ್ಮಗುರುಗಳು ಉರುಸ್ ಆಚರಣೆಯಲ್ಲಿ ಒಟ್ಟಾಗಿ ಭಾಗಿಯಾಗಲಿದ್ದಾರೆ. ಸರ್ವ ಧರ್ಮಿಯರ ಸಮಾಗಮ ಹಾಗೂ ಕನ್ನಡದಲ್ಲಿ ಪ್ರಾರ್ಥನೆ ಮಾಡುವ ಮೂಲಕ ಹಜರತ್ ಸೈದಾನಿ ಭೀ ಮಾ ದರ್ಗಾ ಮನೆ ಮಾತಾಗಿದೆ. ಈ ದರ್ಗಾಗೆ ನೂರು ವರ್ಷಗಳ ಇತಿಹಾಸವಿದೆ. ಜೊತೆಗೆ ಈ ದರ್ಗಾದಲ್ಲಿ ಬಹಳಷ್ಟು ಪವಾಡಗಳು ಕೂಡ ನಡೆದಿವೆ. ದರ್ಗಾಗೆ ಬಂದು ಪ್ರಾರ್ಥನೆ ಮಾಡುವ ಬಹಳಷ್ಟು ಜನರ ರೋಗ ನಿವಾರಣೆಯಾಗಲಿದೆ ಎಂದು ದರ್ಗಾದ ಗುರುಗಳಾದ ಹಜರತ್ ಶಂಶುದ್ದೀನ್ ರಝೂರಿ ಖಾಜೂರ್ ತಿಳಿಸುತ್ತಾರೆ.

ಹಿಂದೂ, ಮುಸ್ಲಿಂ ಎಂಬ ಭೇದ ಭಾವವಿಲ್ಲದೆ ಈ ದರ್ಗಾದಂತೆ ಎಲ್ಲರೂ ಧರ್ಮಾತೀತವಾದ ಭಾವೈಕ್ಯತೆ ಹಾಗೂ ಸಹೋದರತ್ವದ ಮನೋಭಾವ ಬೆಳೆಸಿಕೊಂಡರೆ ಸಮಾಜದಲ್ಲಿ ಶಾಂತಿಯ ವಾತಾವರಣವಿರುತ್ತದೆ. ಇದಕ್ಕೆ ಬೆಳಲೆ ಗ್ರಾಮದಲ್ಲಿರುವ ಹಜರತ್ ಸೈದಾನಿ ಭೀ ಮಾ ದರ್ಗಾ ಮಾದರಿಯಾಗಿದೆ.

ಇತ್ತೀಚಿಗೆ ದರ್ಗಾದಲ್ಲಿ ನಡೆದ ಉರುಸ್ ಆಚರಣೆಯಲ್ಲಿ ಹುಲ್ಲಹಳ್ಳಿಯ ಶ್ರೀ ಶಾಂತ ಮಲ್ಲಿಕಾರ್ಜುನ ಕ್ಷೇತ್ರ ವಿರಕ್ತ ಮಠದ ಮಠಾಧ್ಯಕ್ಷ ಶ್ರೀ ಇಮ್ಮಡಿ ಚೆನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ನಂಜನಗೂಡು ಚರ್ಚ್‌ನ ಫಾದರ್ ಎಂ.ಮುತ್ತಪ್ಪ ಮತ್ತು ಎಂ.ಅನಂತಪ್ಪ ಭಾಗಿಯಾಗಿದ್ದರು.

ಪಿಎಂ ಯುವ ಬರಹಗಾರರ ಮಾರ್ಗದರ್ಶನ ಯೋಜನೆಗೆ ಮೈಸೂರಿನ ಮಹೇಶ್ ಹಿರೇಮಠ ಆಯ್ಕೆ



ದೆಹಲಿಯ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರೊಂದಿಗೆ ಪಿಎಂ ಯುವ ಬರಹಗಾರರಿಗೆ ಮಾರ್ಗದರ್ಶನ ನೀಡುವ ಯೋಜನೆ('ಪಿಎಂ ಸ್ಕೀಮ್ ಫಾರ್ ಮೆಂಟರಿಂಗ್ ಯಂಗ್ ಆಥರ್)ರಾಷ್ಟ್ರೀಯ ಮಟ್ಟದಲ್ಲಿ ನಡೆದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಯುವ ಬರಹಗಾರರು.

ಮೈಸೂರು, ಫೆ.14(ಎಂಟಿವೈ)–ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯವು ಯುವ ಬರಹಗಾರರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಜಾರಿಗೆ ತಂದಿರುವ ಪಿಎಂ ಯುವ ಬರಹಗಾರರಿಗೆ ಮಾರ್ಗದರ್ಶನ ನೀಡುವ ಯೋಜನೆ('ಪಿಎಂ ಸ್ಕೀಮ್ ಫಾರ್ ಮೆಂಟರಿಂಗ್ ಯಂಗ್ ಆಥರ್)ರಾಷ್ಟ್ರೀಯ ಮಟ್ಟದಲ್ಲಿ ನಡೆದ ಸ್ಪರ್ಧೆಗೆ ಕರ್ನಾಟಕದಿಂದ ಮೈಸೂರಿನ ಯುವ ಬರಹಗಾರ ಮಹೇಶ್ ಹಿರೇಮಠ ಆಯ್ಕೆಯಾಗಿದ್ದಾರೆ.

ಈ ಸ್ಪರ್ಧೆಗೆ ಭಾರತದ ವಿವಿಧ ಭಾಷೆಗಳಿಂದ ಸುಮಾರು 30 ಸಾವಿರಕ್ಕೂ ಅಧಿಕ ಯುವ ಬರಹಗಾರರ ಹೆಸರು ಪ್ರಸ್ತಾಪವಾಗಿತ್ತು. ಅವುಗಳಲ್ಲಿ ಅಂತಿಮವಾಗಿ 200 ಪ್ರಸ್ತಾವನೆಗಳನ್ನು ಆಯ್ಕೆ ಮಾಡಿ, 2023ರ ಅ.25 ಮತ್ತು 26ರಂದು ನವದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್ ನಲ್ಲಿ ಉನ್ನತ ತಜ್ಞರ ಸಮಿತಿಯು 200 ಯುವ ಬರಹಗಾರರ ನೇರ ಸಂದರ್ಶನ ನಡೆಸಿ, ಅಂತಿಮವಾಗಿ 41 ಯುವ ಬರಹಗಾರರನ್ನು ಮಾತ್ರ ಆಯ್ಕೆ ಮಾಡಿತ್ತು. ಹೀಗೆ ಆಯ್ಕೆಯಾದ ಯುವ ಬರಹಗಾರರಲ್ಲಿ ಕನ್ನಡ ಭಾಷೆಯಿಂದ ಮಹೇಶ್ ಹಿರೇಮಠ ಅವರು ಮಾತ್ರ ಆಯ್ಕೆಯಾಗಿದ್ದಾರೆ.

ಈ ಯೋಜನೆಯಲ್ಲಿ ಆಯ್ಕೆಯಾಗುವ ಯುವ ಬರಹಗಾರರಿಗೆ ಪ್ರತಿ ತಿಂಗಳು 50 ಸಾವಿರ ರೂ.ಗಳ ಗೌರವಧನ ನೀಡಿ, 6 ತಿಂಗಳುಗಳ ಕಾಲ ಪುಸ್ತಕ ಬರವಣಿಗೆ ನೀಡಲಾಗುತ್ತದೆ. ನಂತರ ನ್ಯಾಷನಲ್ ಬುಕ್ ಟ್ರಸ್ಟ್ ನವದೆಹಲಿ ಈ ಸಂಸ್ಥೆ ಪುಸ್ತಕ ಪ್ರಕಟಿಸಿ, ಭಾರತದ 22 ಭಾಷೆಗಳಿಗೆ ಈ ಪುಸ್ತಕವನ್ನು ಅನುವಾದ ಮಾಡಲಾಗುತ್ತದೆ. ರಾಷ್ಟ್ರಪತಿಗಳು ಯುವ 2.0 ಯೋಜನೆಗೆ ಆಯ್ಕೆಯಾದ 41 ಯುವ ಬರಹಗಾರರನ್ನು ಫೆ.10ರಂದು ನವದೆಹಲಿಯಲ್ಲಿರುವ ರಾಷ್ಟ್ರಪತಿ ಭವನಕ್ಕೆ ಆಹ್ವಾನಿಸಿ ವಿಶೇಷ ಔತಣಕೂಟ ಏರ್ಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ. ಹೀಗೆ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಿಂದ ಅಭಿನಂದನೆಗೆ ಪಾತ್ರ ರಾದ ವಿವಿಧ ಭಾಷೆಗಳ ಯುವ ಬರಹಗಾರರಲ್ಲಿ ಮಹೇಶ್ ಹಿರೇಮಠ ಅವರು ಮಾತ್ರ ಕನ್ನಡ ಭಾಷೆಯನ್ನು ಪ್ರತಿನಿಧಿಸಿದ್ದರು.



ಕರ್ನಾಟಕದಿಂದ ಆಯ್ಕೆಯಾಗಿರುವ ಮೈಸೂರಿನ ಯುವ ಬರಹಗಾರ ಮಹೇಶ್ ಹಿರೇಮಠ್.

ಮಹೇಶ್ ಹಿರೇಮಠ ಅವರ ಪುಸ್ತಕ ಪ್ರಸ್ತಾವನೆಯ ವಿಶೇಷತೆ: ಈ ಸ್ಪರ್ಧೆಗೆ ಯುವ ಬರಹಗಾರ ಮಹೇಶ್ ಹಿರೇಮಠ ಅವರ 'ಪ್ರಜಾಪ್ರಭುತ್ವದ ರಾಯಭಾರಿಗಳು' ಪುಸ್ತಕ ಆಯ್ಕೆಯಾಗಿದೆ. ಪ್ರಜಾಪ್ರಭುತ್ವದ ರಾಯಭಾರಿಗಳು ಪ್ರಸ್ತಾವನೆಯು ಕನ್ನಡ ವಚನ ಸಾಹಿತ್ಯದಲ್ಲಿರುವ ಪ್ರಜಾತಾಂತ್ರಿಕ ಮೌಲ್ಯಗಳ ಮೇಲೆ ಬೆಳಕು ಚೆಲ್ಲುತ್ತದೆ. 12ನೇ ಶತಮಾನದ ಸುಮಾರು 211ಕ್ಕೂ ಹೆಚ್ಚು ವಚನಕಾರರ 25 ಸಾವಿರಕ್ಕೂ ಹೆಚ್ಚು ವಚನಗಳಲ್ಲಿ ಅಡಗಿರುವ ಪ್ರಜಾತಾಂತ್ರಿಕ ವಿಚಾರಧಾರೆಗಳನ್ನು 21ನೇ ಶತಮಾನದ ಯುವ ಪೀಳಿಗೆಗೆ ತಲುಪಿಸುವ ಮಹತ್ವದ ಉದ್ದೇಶವನ್ನು 'ಪ್ರಜಾಪ್ರಭುತ್ವದ ರಾಯಭಾರಿ'ಗಳು ಪುಸ್ತಕ ಹೊಂದಿದೆ.

ಮೂಲತಃ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಿರೇಮಸಳಿ ಗ್ರಾಮದ ಮಹೇಶ್ ಹಿರೇಮಠ ಅವರು ತಮ್ಮ ಪದವಿ ವ್ಯಾಸಾಂಗವನ್ನು ಧಾರವಾಡದ ಪ್ರತಿಷ್ಠಿತ ಕರ್ನಾಟಕ ಕಾಲೇಜಿನಲ್ಲಿ ಅಪರಾಧ ಶಾಸ್ತ್ರ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಪೂರೈಸಿದ್ದಾರೆ. ನಂತರ ಮೈಸೂರು ವಿಶ್ವವಿದ್ಯಾಲಯದಿಂದ ಎಂಎಸ್ಸಿ ಇನ್ ಎಲೆಕ್ಟ್ರಾನಿಕ್ ಮೀಡಿಯಾ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ. ಸದ್ಯ ಮೈಸೂರಿನಲ್ಲಿ ನೆಲೆಸಿರುವ ಮಹೇಶ್ ಹಿರೇಮಠ ಅವರು ತಮ್ಮ 20ನೇ ವಯಸ್ಸಿನಲ್ಲೇ ಧರ್ಮ ಮತ್ತು ಕಾಮದ ನಡುವಿನ ಸಂಘರ್ಷದ ಕಥಾಹಂದರವನ್ನು ಹೊಂದಿರುವ 'ಆ ನೆನಪುಗಳು' ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಇನ್ನು ವಿದ್ಯಾರ್ಥಿದೆಸೆಯಿಂದಲೂ ಬರಹ ಮತ್ತು ಸಾಕ್ಷ್ಯಚಿತ್ರ ನಿರ್ಮಾಣದಲ್ಲಿ ವಿಶೇಷ ಆಸಕ್ತಿ ಹೊಂದಿರುವ ಮಹೇಶ್ ಹಿರೇಮಠ ಅವರು ಮೂರು ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಅವರು ನಿರ್ದೇಶಿಸಿರುವ ಸಾಕ್ಷ್ಯಚಿತ್ರಗಳು ಕೇಂದ್ರ ಸರ್ಕಾರದ ವಿಜ್ಞಾನ ಪ್ರಸಾರ ಆಯೋಜಿಸಿದ್ದ "ರಾಷ್ಟ್ರೀಯ ವಿಜ್ಞಾನ ಚಲನ ಚಿತ್ರೋತ್ಸವ"ಕ್ಕೆ ಆಯ್ಕೆಯಾಗಿ, ಮುಂಬೈ, ಕೋಲ್ಕತ್ತಾ ಮತ್ತು ಗುವಾಹಟಿಯಲ್ಲಿ ಪ್ರದರ್ಶನಗೊಂಡಿವೆ.

ಮೈಸೂರು ಮಿತ್ರ ಗುರುವಾರ 15 ಫೆಬ್ರವರಿ 2024

ಪಾಲಿಬೆಟ್ಟದಲ್ಲಿ ಸರ್ವಧರ್ಮ ಸಮ್ಮೇಳನ

ಸಿದ್ದಾಪುರ, ಫೆ.14–ಇತಿಹಾಸ ಪ್ರಸಿದ್ಧ ಪಾಲಿಬೆಟ್ಟ ಆರ್ಕಾಡ್ ಪಟ್ಟಾಣ್ ಬಾಬಶಾಹ್ ವಲಿಯುವರ ಉರೂಸ್‌ನ ಸರ್ವಧರ್ಮ ಸಮ್ಮೇಳನ ದರ್ಗಾ ಆವರಣದಲ್ಲಿ ನಡೆಯಿತು.

ಸಮ್ಮೇಳನದಲ್ಲಿ ಮಾತನಾಡಿದ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಕನ್ನಡ ಮಠದ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಸರ್ವಧರ್ಮದ ಸಮನ್ವಯ ಕೇಂದ್ರಗಳಿಂದ ಶಾಂತಿ, ಸಹಬಾಳ್ವೆ, ನೆಮ್ಮದಿಯ ಜೀವನ ನಡೆಸಲು ಸಾಧ್ಯ. ಇಂತಹ ಸರ್ವಧರ್ಮ ಸಮ್ಮೇಳನಗಳ ಮೂಲಕ ಭಾವೈಕ್ಯತೆಯೊಂದಿಗೆ ಒಗ್ಗೂಡಿ ಆಚರಣೆಗಳು ಮಾಡಿದ್ದಲ್ಲಿ ಸಹೋದರತ್ವ ನಿರ್ಮಾಣವಾಗಲು ಸಾಧ್ಯವಾಗಲಿದೆ. ನಾವು ನಡೆಯುವ ದಾರಿಗಳು ಬೇರೆ ಇರಬಹುದು. ಆದರೆ, ತಲುಪುವ ಗುರಿ ಮಾತ್ರ ಭಗವಂತನ ಸನ್ನಿಧಿಗೆ. ಶರಣರ ಹಿತವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು. ಪ್ರತಿಯೊಬ್ಬರು ಧಾರ್ಮಿಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.



ಪಾಲಿಬೆಟ್ಟ ಆರ್ಕಾಡ್ ಪಟ್ಟಾಣ್ ಬಾಬಶಾಹ್ ವಲಿಯುವರ ಉರೂಸ್‌ನ ಸರ್ವಧರ್ಮ ಸಮ್ಮೇಳನದಲ್ಲಿ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಪಾಲಿಬೆಟ್ಟದ ಸಿಎಸ್‌ಐ ಚರ್ಚ್‌ನ ರೆ.ಫಾ.ಶಶಿಕುಮಾರ್, ರಾಜ್ಯ ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಶಾಫಿ ಸಹದಿ ಮತ್ತಿತರರು ಭಾಗವಹಿಸಿದ್ದರು.

ಪಾಲಿಬೆಟ್ಟದ ಸಿಎಸ್‌ಐ ಚರ್ಚ್‌ನ ರೆ.ಫಾ.ಶಶಿಕುಮಾರ್ ಮಾತನಾಡಿ, ದೇವರು ಮಾನವನ ರೂಪದಲ್ಲಿ ಬದುಕಲು ಅವಕಾಶ ಕಲ್ಪಿಸಿದ್ದಾನೆ. ಎಲ್ಲಾ ಧರ್ಮಗಳ ಬೋಧನೆಯನ್ನು ಅನುಸರಿಸಿದರೆ ನಾವು ಯಾರನ್ನು ದ್ವೇಷಿಸುವುದಿಲ್ಲ. ಎಲ್ಲಾ ಧರ್ಮಗಳ ಸಾರಾಂಶ ಒಂದೇ, ಅದು ಶಾಂತಿ ಸಹಬಾಳ್ವೆಯ ಸಂಕೇತವಾಗಿದೆ. ಇಂತಹ ಸರ್ವಧರ್ಮ ಸಮ್ಮೇಳನಗಳು ಹೆಚ್ಚಾಗಿ ನಡೆದಲ್ಲಿ ಸೌಹಾರ್ದ ಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದರು.

ರಾಜ್ಯ ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಶಾಫಿ ಸಹದಿ ಮಾತನಾಡಿ, ನಾವೆಲ್ಲರೂ ಒಂದೇ ಎಂಬ ಭಾವನೆಯೊಂದಿಗೆ ಭಾವೈಕ್ಯತೆಯಿಂದ ಬಾಳಿದಲ್ಲಿ ಯಾವುದೇ ಕಾರಣಕ್ಕೂ ನಮ್ಮನ್ನ ಯಾರಿಂದಲೂ ಬೇರ್ಪಡಿಸಲು ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ರಾಜಕೀಯ ಲಾಭಕ್ಕಾಗಿ ಮಂದಿರ, ಮಸೀದಿ, ಚರ್ಚ್‌ಗಳನ್ನು ಬಳಸಿಕೊಂಡು ಕೋಮು ಭಾವನೆಗಳೊಂದಿಗೆ ಅಶಾಂತಿ ಸೃಷ್ಟಿಸಲು ಮುಂದಾಗುತ್ತಿರುವುದು ವಿಷಾದನೀಯ ಎಂದರು.

ಸಮಸ್ತ ಕೇಂದ್ರ ಮುಶಾವರ ಸದಸ್ಯ ಎಂ.ಎಂ.ಅಬ್ದುಲ್ಲ ಫೈಜಿ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷ ಪಿ.ಎ.ಅನೀಫ್, ವಿರಾಜಪೇಟೆ ಪಪಂ ಸದಸ್ಯ ಕೆ.ಎಚ್.ಮೊಹಮ್ಮದ್ ರಾಫಿ, ಅನ್ವಾರಲ್ ಉದಾ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಶ್ರಫ್ ಅಸಹನಿ, ಪಾಲಿಬೆಟ್ಟ ಜಮಾ ಮಸೀದಿ ಸಮಿತಿಯ ಅಧ್ಯಕ್ಷ ಪಿ.ಕೆ.ಇಸ್ಮಾಯಿಲ್ ಹಾಜಿ, ಖತೀಬ್ ಅಲಿ ಸಖಾಫಿ, ಗ್ರಾಪಂ ಸದಸ್ಯ ಅಬ್ದುಲ್ ನಾಸರ್, ಕಮಿಟಿ ಉಪಾಧ್ಯಕ್ಷ ಸೈನುದ್ದಿನ್, ಪ್ರಧಾನ ಕಾರ್ಯದರ್ಶಿ ಸಮೀರ್ ಮುನ್ನ, ಕಾರ್ಯದರ್ಶಿ ಸಮೀರ್, ಖಜಾಂಚಿ ಮುಸ್ತಫ ಪ್ರಮುಖರಾದ ಬಶೀರ್, ಮುನೀರ್, ಫೈಸಲ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಗ್ರಾಮ ಪಂಚಾಯತಿಯೇ ಬುನಾದಿ



ವಿರಾಜಪೇಟೆ ಬಳಿಯ ಬಿಟ್ಟಂಗಾಲ ಗ್ರಾಮ ಪಂಚಾಯತಿಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಎ.ಎಸ್.ಪೊನ್ನಣ್ಣ ಗಿಡ ನೆಡುವ ಮೂಲಕ ಚಾಲನೆ ನೀಡಿದರು. ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಗ್ರಾಪಂ ಅಧ್ಯಕ್ಷ ಮೂಕಚಂಡ ಪ್ರಸನ್ನ ಸುಬ್ಬಯ್ಯ, ಉಪಾಧ್ಯಕ್ಷೆ ಸರಸು, ಸದಸ್ಯ ಎನ್.ಬೋಪಣ್ಣ, ಪಿಡಿಒ ವಿಶ್ವನಾಥ್ ಇದ್ದರು.

ವಿರಾಜಪೇಟೆ, ಫೆ.14–ಪ್ರಜಾಪ್ರಭುತ್ವ ವ್ಯವಸ್ಥೆಗೆ ಗ್ರಾಮ ಪಂಚಾಯತಿಯೇ ಬುನಾದಿ. ಗ್ರಾಮ ಮಟ್ಟದಲ್ಲಿ ಅಭಿವೃದ್ಧಿಯಾದರೆ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ವಿರಾಜಪೇಟೆ ಬಳಿ 60 ಲಕ್ಷ ರೂ. ವೆಚ್ಚದ ಬಿಟ್ಟಂಗಾಲ ಗ್ರಾಮ ಪಂಚಾಯತಿಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಗುಣಮಟ್ಟದೊಂದಿಗೆ ಶೀಘ್ರವಾಗಿ ಪಂಚಾಯತಿಯ ಕಟ್ಟಡ ನಿರ್ಮಾಣ ಪೂರ್ಣಗೊಳ್ಳಬೇಕು. ಇದೊಂದು ಮಾದರಿ ಪಂಚಾಯತಿಯಾಗಿ ರೂಪುಗೊಳ್ಳಲಿ ಎಂದ ತಿಳಿಸಿದರು.

ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿ, ಗ್ರಾಮಗಳ ಅಭಿವೃದ್ಧಿಯಿಂದ ದೇಶವೇ ಅಭಿವೃದ್ಧಿ ಆಗಲಿದೆ. ಕೇಂದ್ರ ಸರ್ಕಾರ ಗ್ರಾಮಾಭಿವೃದ್ಧಿಯ ಚಿಂತನೆಯಲ್ಲಿ ವಿಶೇಷ ಯೋಜನೆಗಳನ್ನು ರೂಪಿಸಿ, ಪ್ರತಿ ಗ್ರಾಮ ಪಂಚಾಯತಿಯಲ್ಲಿ ನೂತನ ಕಟ್ಟಡಕ್ಕೆ ಅನುದಾನ ನೀಡುತ್ತಿದೆ. ತಮ್ಮ ಅನುದಾನದಲ್ಲಿ 5 ಲಕ್ಷ ರೂ. ನೀಡುವುದಾಗಿ ಭರವಸೆ ನೀಡಿದರು.

ಗ್ರಾಪಂ ಅಧ್ಯಕ್ಷ ಮೂಕಚಂಡ ಪ್ರಸನ್ನ ಸುಬ್ಬಯ್ಯ ಮಾತನಾಡಿ, ಕಟ್ಟಡ ನಿರ್ಮಾಣಕ್ಕೆ ಸೂಕ್ತ ಸ್ಥಳ ಸಿಕ್ಕಿರಲಿಲ್ಲ. ಆದರೆ, ದಾನಿಗಳಾದ ನೇಚರ್ ಪ್ಯಾರಡೈಸ್ ಸಂಸ್ಥೆಯ ಮುಖ್ಯಸ್ಥರಾದ ಪೊನ್ನಿರ ಚೇತನ ಮತ್ತು ಅಪ್ಪಂಡೇರಂಡ ದಿನು ಅವರು ಜಾಗ ನೀಡಿದ್ದರಿಂದ ಕಟ್ಟಡ ನಿರ್ಮಾಣಕ್ಕೆ ಇಂದು ಭೂಮಿಪೂಜೆ ನೆರವೇರಿಸಲಾಗಿದೆ. ಕಟ್ಟಡ ನಿರ್ವಹಣಾ ಸಮಿತಿಯ ಕೆ.ಸಂಧ್ಯ ಉತ್ತಪ್ಪ, ಎನ್.ಸವಿನ್ ಬೋಪಣ್ಣ, ಸಿ.ರಾಜ ಸೋಮಣ್ಣ ನೇತೃತ್ವದಲ್ಲಿ ಕಾಮಗಾರಿ ನಡೆಯಲಿದೆ ಎಂದರು.

ಗ್ರಾಪಂ ಉಪಾಧ್ಯಕ್ಷೆ ಸರಸು, ಸದಸ್ಯ ಎನ್.ಬೋಪಣ್ಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿಶ್ವನಾಥ್ ಮತ್ತಿತರರು ಉಪಸ್ಥಿತರಿದ್ದರು.

ಸಹಾಯಧನ ಯೋಜನೆಗೆ ಅರ್ಜಿ ಆಹ್ವಾನ

ಮಡಿಕೇರಿ: ಪರಿಶಿಷ್ಟ ಜಾತಿಯ ಪತ್ರಕರ್ತರಿಗೆ ಎಲೆಕ್ಟ್ರಾನಿಕ್ ಹಾಗೂ ಡಿಜಿಟಲ್ ಮಾಧ್ಯಮದಲ್ಲಿ ಉದ್ಯಮ ಸ್ಥಾಪಿಸಲು ಸಹಾಯಧನ ನೀಡಲು ಅರ್ಜಿ ಸಲ್ಲಿಸಲಾಗಿದೆ.

ಪರಿಶಿಷ್ಟ ಜಾತಿಯ ಯಾವುದೇ ಪದವಿ ಪಡೆದು ಎಲೆಕ್ಟ್ರಾನಿಕ್ ಹಾಗೂ ಡಿಜಿಟಲ್ ಮಾಧ್ಯಮದಲ್ಲಿ 10 ವರ್ಷ ಸೇವಾನುಭವ ಹೊಂದಿರುವ ಹಾಗೂ ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಯ ಪ್ರಮುಖ ಮಾಧ್ಯಮ ಮುದ್ರಣ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಹೆಸರು ನಮೂದಿಸಿರುವ ಪತ್ರಕರ್ತರು ಅರ್ಜಿ ಸಲ್ಲಿಸಬಹುದು.

ಜಿಲ್ಲೆಯ ಅರ್ಹ ಪತ್ರಕರ್ತರು ಇಲಾಖೆಯ ವೆಬ್‌ಸೈಟ್ www.sw.kar.nic.inನಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಈ ವಿಳಾಸಕ್ಕೆ ಫೆ.26ರೊಳಗೆ ಸಲ್ಲಿಸಬೇಕು. ಮಾಹಿತಿಗೆ ಇಲಾಖೆಯ ದೂ.ಸಂ: 08272–225531 ಅನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿಗಳ ಕಾಯಕಲ್ಪಕ್ಕೆ ಅನೇಕ ಯೋಜನೆ

ಮಡಿಕೇರಿ, ಫೆ.14–ರೋಟರಿ ಸಂಸ್ಥೆಗಳು ಅಂಗನವಾಡಿ ಕೇಂದ್ರಗಳ ಕಾಯಕಲ್ಪಕ್ಕೆ ಅನೇಕ ಯೋಜನೆಗಳನ್ನು ರೂಪಿಸಿದ್ದು, ಈ ಮೂಲಕ ಚಿಣ್ಣರ ಕಲಿಕೆಗೆ ಅಗತ್ಯ ಸೌಕರ್ಯ ಕಲ್ಪಿಸಲಾಗುವುದು ಎಂದು ರೋಟರಿ ಜಿಲ್ಲೆ 3181ರ ಗವರ್ನರ್ ಹೆಚ್.ಆರ್.ಕೇಶವ್ ತಿಳಿಸಿದರು.

ಕೊಡಗು, ದಕ್ಷಿಣ ಕನ್ನಡ, ಮೈಸೂರು, ಚಾಮರಾಜನಗರ ಕಂದಾಯ ಜಿಲ್ಲೆಗಳಲ್ಲಿ 87 ರೋಟರಿ ಸಂಸ್ಥೆಗಳಿದ್ದು, 3800 ಸದಸ್ಯರಿದ್ದಾರೆ. ಅಂಗನವಾಡಿಗಳೇ ಮಕ್ಕಳ ಮೊದಲ ಪಾಠಶಾಲೆ, ಅಂಗನವಾಡಿ ಕಾರ್ಯಕರ್ತೆಯರೇ ಕಂದಮ್ಮಗಳ ಮೊದಲ ಗುರು. ಇಂತಹ ಅಂಗನವಾಡಿಗಳಿಗೆ ಈ ವರ್ಷದಲ್ಲಿ ಮೂಲಸೌಕರ್ಯ ಸೇರಿದಂತೆ ಮಳೆ ಕೊಯ್ಲುನಂತಹ ವಿಭಿನ್ನ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ವಿಶ್ವ ಮಟ್ಟದಲ್ಲಿ ಪೋಲಿಯೋ ನಿರ್ಮೂಲನೆಯಲ್ಲಿ ರೋಟರಿ ಸಂಸ್ಥೆ ಬಹಳ ಮುಖ್ಯ ಪಾತ್ರ ವಹಿಸಿದ್ದು, ಪ್ರಸ್ತುತ ಕೇವಲ 10 ಪೋಲಿಯೋ



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರೋಟರಿ ಜಿಲ್ಲೆ 3181ರ ಗವರ್ನರ್ ಹೆಚ್.ಆರ್.ಕೇಶವ್ ಮಾತನಾಡಿದರು. ಸಹಾಯಕ ಗವರ್ನರ್ ದೇವಣಿರ ತಿಲಕ್, ವಲಯ ಸೇನಾನಿ ಎಸ್.ಎಸ್.ಸಂಪತ್ ಕುಮಾರ್, ರೋಟರಿ ಮಿಸ್ಟಿ ಹಿಲ್ಸ್ ಕಾರ್ಯದರ್ಶಿ ರತ್ನಾಕರ್ ರೈ, ನಿರ್ದೇಶಕರಾದ ಬಿ.ಜಿ.ಅನಂತಶಯನ, ಎಚ್.ಟಿ.ಅನಿಲ್ ಇದ್ದರು.

ಪ್ರಕರಣಗಳು ಮಾತ್ರ ಜಗತ್ತಿನಲ್ಲಿ ವರದಿಯಾಗಿವೆ. ಸದ್ಯದಲ್ಲೇ ಪೋಲಿಯೋ ಮುಕ್ತ ವಿಶ್ವವಾಗಲಿದೆ. ಇದಕ್ಕೆ ರೋಟರಿ ಸಂಸ್ಥೆ ಅನೇಕ ವರ್ಷಗಳಿಂದ ಮುಖ್ಯ ಪಾತ್ರ ವಹಿಸಿದೆ ಎಂದು ಶ್ಲಾಘಿಸಿದರು.

ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಪ್ರಮೋದ್ ಕುಮಾರ್ ರೈ ಮಾತನಾಡಿ, 10 ವರ್ಷಗಳಿಂದ ರೋಟರಿ ಮಿಸ್ಟಿ ಹಿಲ್ಸ್‌ನಿಂದ ಮಕ್ಕಳ ದಸರಾವನ್ನು ಯಶಸ್ವಿಯಾಗಿ ಆಯೋಜಿಸಲಾಗುತ್ತಿದೆ. ಈ ವರ್ಷವೂ ಅನೇಕ ಅಂಗನವಾಡಿ ಕೇಂದ್ರಗಳಿಗೆ ನೆರವು ನೀಡಲಾಗಿದೆ. ವೈದ್ಯಕೀಯ, ಆರೋಗ್ಯ ಸೇವಾ ಯೋಜನೆಗಳನ್ನೂ ಮಿಸ್ಟಿ ಹಿಲ್ಸ್ ವತಿಯಿಂದ ಜಾರಿಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ರೋಟರಿ ಸಹಾಯಕ ಗವರ್ನರ್ ದೇವಣಿರ ತಿಲಕ್, ವಲಯ ಸೇನಾನಿ ಎಸ್.ಎಸ್.ಸಂಪತ್ ಕುಮಾರ್, ರೋಟರಿ ಮಿಸ್ಟಿ ಹಿಲ್ಸ್ ಕಾರ್ಯದರ್ಶಿ ರತ್ನಾಕರ್ ರೈ, ನಿರ್ದೇಶಕ ಬಿ.ಜಿ.ಅನಂತಶಯನ ಇದ್ದರು.

ಇಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ

ಮಡಿಕೇರಿ, ಫೆ.14– ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅಧ್ಯಕ್ಷತೆಯಲ್ಲಿ ಫೆ.15ರಂದು ಸಂಜೆ 4.30ಕ್ಕೆ ಡಿಸಿ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್‌ಎಸ್‌ಆರ್‌ಪಿ ಶುಲ್ಕ ಕಡಿತಕ್ಕಾಗಿ ಮನವಿ ಸಲ್ಲಿಕೆ

ಮಡಿಕೇರಿ, ಫೆ.14–ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ ಅಳವಡಿಸಲು ನಿಗದಿಪಡಿಸಿದ ಶುಲ್ಕ ಕಡಿತಗೊಳಿಸುವಂತೆ ಒತ್ತಾಯಿಸಿ ಸೋಷಿಯಲ್ ಡೆಮಾಕ್ರಟಿಕ್ ಟ್ರೇಡ್ ಯೂನಿಯನ್‌ನ ಕೊಡಗು ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಅವರಿಗೆ ಮನವಿ ಸಲ್ಲಿಸಲಾಯಿತು.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಆದೇಶದಂತೆ ವಾಹನಗಳಿಗೆ ಗರಿಷ್ಠ ಭದ್ರತೆ ಹಾಗೂ ಸುರಕ್ಷತೆ ದೃಷ್ಟಿಯಿಂದ ರಾಜ್ಯದಲ್ಲಿ ಹೆಚ್‌ಎಸ್‌ಆರ್‌ಪಿ ಅಳವಡಿಸಲು ಶುಲ್ಕ ನಿಗದಿಪಡಿಸಲಾಗಿದೆ. ಇದು ಆಟೋರಿಕ್ಷಾ, ಟ್ಯಾಕ್ಸಿ ಮತ್ತಿತರ ವಾಹನಗಳ ಚಾಲಕ, ಮಾಲೀಕರಿಗೆ ಹೊರೆಯಾಗಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಚಾಲಕರ ಒಂದು ದಿನದ ಗಳಿಕೆಯ ಹಣವನ್ನು ಹೆಚ್‌ಎಸ್‌ಆರ್‌ಪಿ ಅಳವಡಿಕೆಗೆ ವ್ಯಯ ಮಾಡಬೇಕಾದ ಅನಿವಾರ್ಯತೆ ಎದುರಾಗಲಿದೆ. ದಿನ ಬಳಕೆಯ ಅಗತ್ಯ ವಸ್ತುಗಳ ದುಬಾರಿ ಬೆಲೆಯ ಹೊರೆಯೊಂದಿಗೆ ಹೆಚ್‌ಎಸ್‌ಆರ್‌ಪಿಗಾಗಿ ಹಣ ವ್ಯಯ ಮಾಡಲು ಶ್ರಮಿಕ ವರ್ಗದ ಚಾಲಕರಿಗೆ ಅಸಾಧ್ಯವಾಗಲಿದೆ. ಹೆಚ್‌ಎಸ್‌ಆರ್‌ಪಿ ಬಗ್ಗೆ ಸಾಕಷ್ಟು ಮಾಹಿತಿಯ ಕೊರತೆ ಇರುವುದರಿಂದ ಜಾಗೃತಿ ಮೂಡಿಸುವ ಅಗತ್ಯವಿದೆ. ಅಲ್ಪ ಆದಾಯದ ಚಾಲಕರ ಹಿತದೃಷ್ಟಿಯಿಂದ ಶುಲ್ಕ ಕಡಿತಗೊಳಿಸಬೇಕು ಎಂದು ಯೂನಿಯನ್‌ನ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.

ಯೂನಿಯನ್‌ನ ಜಿಲ್ಲಾಧ್ಯಕ್ಷ ಕೆ.ಹೆಚ್.ಅಣ್ಣ ಶರೀಫ್, ಪ್ರಧಾನ ಕಾರ್ಯದರ್ಶಿ ಎಂ.ಎ.ಅಬ್ದುಲ್ ರಜಾಕ್ ಹಾಗೂ ಕೋಶಾಧಿಕಾರಿ ಕೆ.ಎಂ.ಯೂಸೂಫ್ ಹಾಜರಿದ್ದರು.



ಹೆಚ್‌ಎಸ್‌ಆರ್‌ಪಿ ಶುಲ್ಕ ಕಡಿತಗೊಳಿಸುವಂತೆ ಒತ್ತಾಯಿಸಿ ಸೋಷಿಯಲ್ ಡೆಮಾಕ್ರಟಿಕ್ ಟ್ರೇಡ್ ಯೂನಿಯನ್‌ನ ಕೊಡಗು ಜಿಲ್ಲಾ ಘಟಕದಿಂದ ಡಿಸಿ ವೆಂಕಟ್‌ರಾಜಾ ಅವರಿಗೆ ಮನವಿ ಸಲ್ಲಿಸಲಾಯಿತು.

ನಾತಂಗಲ್‌ನಲ್ಲಿ ಕಾರ್ಮಿಕ ಮಹಿಳೆ ಆತ್ಮಹತ್ಯೆ

ಮಡಿಕೇರಿ, ಫೆ.14–ಕಾಫಿ ತೋಟದ ಕೆಲಸಕ್ಕೆ ಬಂದಿದ್ದ ಅಸ್ಸಾಂ ಮೂಲದ ಕಾರ್ಮಿಕ ಮಹಿಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ನಾತಂಗಲ್‌ನಲ್ಲಿ ಬುಧವಾರ ನಡೆದಿದೆ.

ನಾತಂಗಲ್‌ನ ಚೆಪ್ಪುಡಿರ ಕಾವೇರಪ್ಪ ಎಂಬುವರ ಕಾಫಿ ತೋಟದ ಲೈನ್‌ಮನೆಯಲ್ಲಿ ವಾಸವಿದ್ದ ಅಸ್ಸಾಂ ಮೂಲದ ಅಭಿಜಾ ಬೇಗಂ(24) ಆತ್ಮಹತ್ಯೆಗೆ ಶರಣಾದ ಮಹಿಳೆ.

ತೋಟದಲ್ಲಿ ಕಾಫಿ ಕುಯ್ಯುತ್ತಿದ್ದ ಕಾರ್ಮಿಕರು ಮಧ್ಯಾಹ್ನ ಊಟಕ್ಕೆಂದು ಲೈನ್ ಮನೆಗೆ ಬಂದಾಗ ಈಕೆ ಆತ್ಮಹತ್ಯೆ ಮಾಡಿಕೊಂಡಿರುವುದು ಪತ್ತೆಯಾಗಿದೆ. ಕೂಡಲೇ ತೋಟದ ರೈಟರ್ ಶಶಿ, ತೋಟದ ಮಾಲೀಕರಿಗೆ ವಿಷಯ ತಿಳಿಸಿದ್ದಾರೆ. ಆದರೆ, ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ.

ಕುಟ್ಟ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕುಟ್ಟ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಶವ ಹಸ್ತಾಂತರಿಸಲಾಯಿತು.

ಗಾಂಜಾ ಸಾಗಿಸುತ್ತಿದ್ದ ನಾಲ್ವರ ಬಂಧನ

ಕೊಳ್ಳೇಗಾಲ, ಫೆ.14–ತಾಲೂಕಿನ ನರೀಪುರ ರಸ್ತೆಯಲ್ಲಿ ಕ್ಯಾಂಟರ್‌ನಲ್ಲಿ ಪ್ಲೈವುಡ್ ಶೀಟ್ ಸಾಗಿಸುವ ಸೋಗಿನಲ್ಲಿ 1 ಕೋಟಿ 10 ಲಕ್ಷ ರೂ. ಮೌಲ್ಯದ 221 ಕೆಜಿ ಒಣಗಾಂಜಾ ಸಾಗಿಸುತ್ತಿದ್ದ ನಾಲ್ವರನ್ನು ಗ್ರಾಮಾಂತರ ಠಾಣೆ ಪೊಲೀಸರು ಮಂಗಳವಾರ ರಾತ್ರಿ ಬಂಧಿಸಿದ್ದಾರೆ.

ಬೆಂಗಳೂರು, ದಾವಣಗೆರೆ, ಯಾದಗಿರಿ, ಹರಿಹರ ಮೂಲದ ಸೆಂಥಿಲ್ ಕುಮಾರ್, ರವಿಕುಮಾರ್, ಉಮಾಶಂಕರ್ ಹಾಗೂ ವಿನಾಯಕ ಅಲಿಯಾಸ್ ವಿನಯ್ ಬಂಧಿತ ಆರೋಪಿಗಳು. ಬಂಧಿತ ಆರೋಪಿಗಳು ಬೆಂಗಳೂರು ಕಡೆಯಿಂದ ಪ್ಲೈವುಡ್ ಶೀಟ್ ತುಂಬಿದ ಕ್ಯಾಂಟರ್‌ನಲ್ಲಿ ಒಣ ಗಾಂಜಾ ಸಾಗಿಸುತ್ತಿದ್ದರು. ಈ ವೇಳೆ ಕೊಳ್ಳೇಗಾಲ–ಮಳವಳ್ಳಿ ಮುಖ್ಯ ರಸ್ತೆಯಿಂದ ನರೀಪುರ ಸಮೀಪದ ಮಧುವನಹಳ್ಳಿ ಕಡೆಗೆ ತೆರಳುವ ಬೈಪಾಸ್ ಬಳಿ ಡಿವೈಎಸ್‌ಪಿ ಎಂ.ಧರ್ಮೇಂದ್ರ, ವೃತ್ತ ನಿರೀಕ್ಷಕ ಶಿವಮಾದಯ್ಯ, ಗ್ರಾಮಾಂತರ ಠಾಣೆ ಪಿಎಸ್‌ಐ ಗಣೇಶ್ ಹಾಗೂ ಸಿಬ್ಬಂದಿ, ಕ್ಯಾಂಟರ್ ತಡೆದು ಪರಿಶೀಲಿಸಿದಾಗ ಗಾಂಜಾ ಪತ್ತೆಯಾಗಿದೆ.

ಬಂಧಿತರಿಂದ 221 ಕೆಜಿ ಒಣ ಗಾಂಜಾ, ಕ್ಯಾಂಟರ್, 9 ಲಕ್ಷ ರೂ. ಮೌಲ್ಯದ ಪ್ಲೈವುಡ್ ಶೀಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ನಂತರ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಕ್‌ಅಪ್ ವಾಹನ ಡಿಕ್ಕಿ: ಮಹಿಳೆ ಸಾವು

ಚಾಮರಾಜನಗರ, ಫೆ.14–ಪಿಕ್‌ಅಪ್ ವಾಹನ ಬೈಕ್‌ಗೆ ಡಿಕ್ಕಿ ಹೊಡೆದು ಮಹಿಳೆ ಮೃತಪಟ್ಟಿರುವ ಘಟನೆ ನಗರದ ಸೋಮವಾರಪೇಟೆ ಬೈಪಾಸ್ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ. ಗುಂಡ್ಲುಪೇಟೆ ತಾಲೂಕಿನ ಕಂದೇಗಾಲ ಗ್ರಾಮದ ಅನಿತಾ (45) ಮೃತಪಟ್ಟ ಮಹಿಳೆ. ಆಕೆಯ ಪತಿ ಮಾದೇಶಪ್ಪ ಗಾಯಗೊಂಡಿದ್ದು, ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.


ನಗರದ ನಂದಿಭವನದಲ್ಲಿ ಮದುವೆ ಮುಗಿಸಿಕೊಂಡು ದಂಪತಿ ಬೈಕ್‌ನಲ್ಲಿ ಹೊಸಹಳ್ಳಿಯ ಸಂಬಂಧಿಕರ ಮನೆಗೆ ಹೋಗಿದ್ದರು. ನಂತರ ಅಲ್ಲಿಂದ ನಗರದ ಕಡೆಗೆ ವಾಪಸ್ ಬರುತ್ತಿದ್ದಾಗ ಸೋಮವಾರಪೇಟೆ ಬೈಪಾಸ್ ಬಳಿ ತಮಿಳುನಾಡು ನೋಂದಣಿಯ ಪಿಕ್‌ಅಪ್ ವಾಹನ ಡಿಕ್ಕಿ ಹೊಡೆದಿದೆ. ಬೈಕ್ ಹಿಂಬದಿ ಕುಳಿತಿದ್ದ ಅನಿತಾ ತಲೆಗೆ ತೀವ್ರ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ನಗರದ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.26, 27ಕ್ಕೆ ಬೆಂಗಳೂರಿನಲ್ಲಿ ಉದ್ಯೋಗ ಮೇಳ

- ಜಿಲ್ಲೆಯ ಉದ್ಯೋಗಾಕಾಂಕ್ಷಿಗಳು ನೋಂದಾಯಿಸಿಕೊಳ್ಳಿ
- ಜಿಲ್ಲಾಧಿಕಾರಿ ಶಿಲ್ಪನಾಗ್ ಮಾಹಿತಿ

ಚಾಮರಾಜನಗರ, ಫೆ.14–ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ರಾಜ್ಯ ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಫೆ.26 ಹಾಗೂ 27ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದ್ದು, ಉದ್ಯೋಗ ಮೇಳದಲ್ಲಿ ಜಿಲ್ಲೆಯ ಯುವಜನರು, ಉದ್ಯೋಗಾಂಕಾಂಕ್ಷಿಗಳು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಉದ್ಯೋಗ ಮೇಳ ಸಂಬಂಧ ನಡೆದ ಜಿಲ್ಲಾ ಕೌಶಲ್ಯ ಮಿಷನ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಉದ್ಯೋಗ ಮೇಳದಲ್ಲಿ ರಾಜ್ಯದ ಎಲ್ಲಾ ವಲಯಗಳಿಂದ 500ಕ್ಕೂ ಹೆಚ್ಚು ಪ್ರತಿಷ್ಠಿತ, ಬಹುರಾಷ್ಟ್ರೀಯ ಉದ್ಯೋಗದಾತ ಸಂಸ್ಥೆಗಳು ಭಾಗವಹಿಸುವ ನಿರೀಕ್ಷೆಯಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ,



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಡಿಸಿ ಶಿಲ್ಪನಾಗ್ ಅಧ್ಯಕ್ಷತೆಯಲ್ಲಿ ಉದ್ಯೋಗ ಮೇಳ ಸಂಬಂಧ ಸಭೆ ನಡೆಯಿತು. ಪಿ.ಲಕ್ಷ್ಮಿ, ಎ.ಮಹಮ್ಮದ್ ಅಕ್ಬರ್, ಮಂಜುನಾಥ್,ಎಂ.ಸವಿತಾ, ಮಂಜುನಾಥ್ ಪ್ರಸನ್ನ ಇದ್ದರು.

ಡಿಪ್ಲೊಮಾ, ನರ್ಸಿಂಗ್, ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್, ಇತರೆ ವಿದ್ಯಾರ್ಹತೆ ಹೊಂದಿರುವ ಜಿಲ್ಲೆಯ ಅಭ್ಯರ್ಥಿಗಳು ಪಾಲ್ಗೊಳ್ಳಲು ನೋಂದಣಿ ಮಾಡಿಸುವಂತೆ ಸಲಹೆ ನೀಡಿದರು.

ಉದ್ಯೋಗಾಕಾಂಕ್ಷಿಗಳು ಸ್ಕಿಲ್ ಕನೆಕ್ಟ್ ಪೋರ್ಟಲ್ ಮುಖಾಂತರ ನೋಂದಾಯಿಸಿಕೊಳ್ಳಬೇಕು. ಜಿಲ್ಲೆಯ ಉದ್ಯೋಗ ಅಭ್ಯರ್ಥಿಗಳಿಗೆ ನೋಂದಾಯಿಸಿ ನೆರವಾಗಲು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಶಿಬಿರಗಳನ್ನು ತೆರೆಯಬೇಕು. ಜಿಲ್ಲಾಡಳಿತ ಭವನದ ಪ್ರವೇಶ ದ್ವಾರದಲ್ಲೇ ಪ್ರತ್ಯೇಕ ಕೌಂಟರ್ ತೆರೆದು ಅಲ್ಲಿಯೂ ನೋಂದಣಿಗೆ ವ್ಯವಸ್ಥೆ ಮಾಡಬೇಕು. ತಾಲೂಕು ಕಚೇರಿಗಳಲ್ಲೂ ಹೆಲ್ಪ್‌ಡೆಸ್ಕ್ ತೆರೆದು ನೋಂದಣಿ ಮಾಡಿ ಉದ್ಯೋಗಾಕಾಂಕ್ಷಿಗಳಿಗೆ ಮಾಹಿತಿ ನೀಡಬೇಕು ಎಂದರು.

ಜಿಲ್ಲೆಯ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದ್ಯೋಗ ಮೇಳದ ಸದುಪಯೋಗ ಪಡೆಯಬೇಕು. ಹೀಗಾಗಿ ಜಿಲ್ಲೆಯ ವಿದ್ಯಾ ಸಂಸ್ಥೆಗಳು, ವಿವಿಧ ಇಲಾಖೆಗಳ ಸಹಕಾರ ಪಡೆದು ಉದ್ಯೋಗಾಕಾಂಕ್ಷಿಗಳು ಭಾಗವಹಿಸಲು ಸಿದ್ಧತೆ ಕೈಗೊಳ್ಳಬೇಕು. ಅಧಿಕಾರಿಗಳು ನಗರ ಸ್ಥಳೀಯ ಸಂಸ್ಥೆ ಸ್ವಸಹಾಯ ಸಂಘಗಳ ನೆರವು ಪಡೆದು ವ್ಯಾಪಕ ಪ್ರಚಾರ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಎ.ಮಹಮ್ಮದ್ ಅಕ್ಬರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಂಜುನಾಥ್, ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ.ಸವಿತಾ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ್ ಪ್ರಸನ್ನ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಎಂ.ವಿ.ಸುಧಾ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಸುರೇಶ್, ಜಿಲ್ಲೆಯ ವಿವಿಧ ಕೈಗಾರಿಕಾ ಸಂಸ್ಥೆಗಳ ಉದ್ಯಮಿಗಳು, ಅವರ ಪ್ರತಿನಿಧಿಗಳು, ಇತರರಿದ್ದರು.

ವಿಜೃಂಭಣೆಯ ಕೆಸ್ತೂರು ಮಾರಮ್ಮನ ಉತ್ಸವ



ಯಳಂದೂರು ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ಸಹಸ್ರಾರು ಭಕ್ತರೊಂದಿಗೆ ಮಾರಮ್ಮನ ಹಾಲರವಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಯಳಂದೂರು, ಫೆ.14–ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ಮಂಗಳವಾರ ರಾತ್ರಿ ಸಹಸ್ರಾರು ಭಕ್ತರೊಂದಿಗೆ ಗ್ರಾಮ ದೇವತೆ ಕೆಸ್ತೂರು ಮಾರಮ್ಮನ ಹಾಲರವಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಎಲ್ಲಾ ಕೋಮಿನ ಯಜಮಾನರ ಸಮ್ಮುಖದಲ್ಲಿ ದೇವಸ್ಥಾನ ಮುಂಭಾಗದ ಬಾವಿಕೆರೆಯಲ್ಲಿ ಜಲಪೂಜೆ ನೆರವೇರಿಸಿ ಹಬ್ಬಗಳಿಗೆ ಚಾಲನೆ ನೀಡಲಾಯಿತು. ಗ್ರಾಮದ ಎಲ್ಲಾ ದೇವಾಲಯ ಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಿ, ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಬೃಹತ್ ಖರ್ಜೂವಿನಲ್ಲಿ ಮಾರಮ್ಮನ ಉತ್ಸವ ಮೂರ್ತಿಯನ್ನು ಇರಿಸಿ ವಿವಿಧ ಪೂಜಾ ಕಾರ್ಯ ನೆರವೇರಿಸಲಾಯಿತು. ಸಿಡಿಮದ್ದು, ಬಾಣಬಿರುಸುಗಳು ಜೋರಾಗಿತ್ತು. ಇಲ್ಲಿ ಸಿಡಿಯುವ ಮದ್ದು ಸುತ್ತಮುತ್ತಲ ಹತ್ತೂರಿಗೆ ಕೇಳಿಸಬೇಕೆಂದು ವಾಡಿಕೆ. ಅದಕ್ಕೆ ಹೇಳೋದು ಹತ್ತೂರು ಉತ್ಸವಕ್ಕಿಂತ ಕೆಸ್ತೂರು ಮಾರಮ್ಮ ಚಂದ ಅಂತ. ಕುಂಭಮೇಳ, ಸತ್ತಿಗೆ ಸೂರಪಾನಿ, ಕೊಂಬು ಕಹಳೆ, ಪೆಂಜು, ಮಂಗಳವಾದ್ಯಗಳೊಂದಿಗೆ ಖರ್ಜೂ ಬಸವೇಶ್ವರ ಗುಡಿಗೆ ಸಾಗಿ ನಂತರ ವಾಪಸ್ ಮೆರವಣಿಗೆ ನಡೆಸಲಾಯಿತು.

ಆ.10, ಬಿ.ರಾಚಯ್ಯ ಸ್ಮಾರಕ ಲೋಕಾರ್ಪಣೆ: ಎಆರ್‌ಕೆ

ಚಾಮರಾಜನಗರ: ರಾಜಕೀಯ ಮುತ್ಸದ್ದಿಗಳಾಗಿ ಜನಾನುರಾಗಿದ್ದ ಮಾಜಿ ರಾಜ್ಯಪಾಲ ಹಾಗೂ ತಮ್ಮ ತಂದೆ ದಿ.ಬಿ.ರಾಚಯ್ಯ ಅವರ ಸ್ಮಾರಕವನ್ನು ಆ.10ರಂದು ಲೋಕಾರ್ಪಣೆಗೊಳಿಸಲಾಗುವುದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಅಲೂರಿನ ಬಿ.ರಾಚಯ್ಯ ಅವರ ಪುಣ್ಯಭೂಮಿಯಲ್ಲಿ ಕುಟುಂಬ ಸದಸ್ಯರು ಹಾಗೂ ಗಣ್ಯರೊಂದಿಗೆ 24 ವರ್ಷದ ಸಂಸ್ಮರಣೆ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಿ, ಮಾತನಾಡಿದ ಅವರು, 2013ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಸಿದ್ದರಾಮಯ್ಯ 1 ಕೋಟಿ ರೂ. ನೀಡಿ, ರಾಚಯ್ಯ ಅವರ ಸ್ಮಾರಕ ನಿರ್ಮಾಣಕ್ಕೆ ಚಾಲನೆ ನೀಡಿದ್ದರು. ನಂತರ ಸಮಾಜ ಕಲ್ಯಾಣ ಸಚಿವರಾಗಿದ್ದ ಶ್ರೀರಾಮುಲು 52 ಲಕ್ಷರೂ. ನೀಡಿದ್ದರು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ 1.25 ಕೋಟಿ ರೂ. ನೀಡಿದ್ದರು. ಸ್ಮಾರಕ ಕಾಮಗಾರಿ ಪೂರ್ಣಗೊಳ್ಳಲು ಸಿದ್ದರಾಮಯ್ಯ ಮತ್ತೆ 2 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದರು.

ಮಾಜಿ ಶಾಸಕರಾದ ಎಸ್.ಜಯಣ್ಣ, ಜಿ.ಎನ್.ನಂಜುಂಡಸ್ವಾಮಿ ಮಾತನಾಡಿ, ಬಿ.ರಾಚಯ್ಯ ಅವರು ಮೇರು ವ್ಯಕ್ತಿತ್ವವುಳ್ಳ ಸಜ್ಜನ ರಾಜಕಾರಣಿಯಾಗಿದ್ದರು. ಅವರು ತಮ್ಮ ರಾಜಕೀಯ ಜೀವನದಲ್ಲಿ ನೇರ ನಡೆ ನುಡಿ ಹಾಗೂ ಸಾಮಾಜಿಕ ಬದ್ಧತೆ ಇಟ್ಟುಕೊಂಡು, ಜನಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಎಲ್ಲಾ ವರ್ಗದವರ ಬಡವರಿಗೆ ನ್ಯಾಯ ಕಲ್ಪಿಸಿಕೊಟ್ಟಿದ್ದರು ಎಂದು ಸ್ಮರಿಸಿದರು.

ಜಿಪಂ ಮಾಜಿ ಸದಸ್ಯ ಆರ್.ಬಾಲರಾಜು ಮಾತನಾಡಿದರು. ಕಾರ್ಯದಲ್ಲಿ ರಾಚಯ್ಯ ಅವರ ಪುತ್ರಿಯರಾದ ಪ್ರಭಾವತಿ ಬಸವರಾಜು, ತ್ರಿವೇಣಿ ಬಿ.ಬಿ.ಲಿಂಗಯ್ಯ, ವರಲಕ್ಷ್ಮಿ ವೆಂಕಟೇಶ್‌ಪ್ರಸಾದ್, ಮಂಜುಳಾ ಕೃಷ್ಣಮೂರ್ತಿ, ಆರ್.ಕೆ.ಶ್ರೀವರ್ಧನ್, ಡಾ.ರೋಷಿಣಿ, ಪ್ರದೀಪ್ ಕುಮಾರ್, ಡಾ.ಹೊಂಗನೂರು ನಂಜಯ್ಯ, ಹೊಂಗನೂರು ಚೇತನ್ ಹಾಗೂ ಕುಟುಂಬದವರು, ಮಾಜಿ ಸಚಿವ ಬಿ.ಬಿ.ನಿಂಗಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ತೋಟೇಶ್ ಮತ್ತಿತರರು ಹಾಜರಿದ್ದರು.



ಆಲೂರಿನಲ್ಲಿ ಬಿ.ರಾಚಯ್ಯ ಅವರ ಪುಣ್ಯಭೂಮಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ, ಜಿಪಂ ಮಾಜಿ ಸದಸ್ಯ ಆರ್.ಬಾಲರಾಜು, ಕುಟುಂಬದವರು ನಮನ ಸಲ್ಲಿಸಿದರು.

ಹನಿ ನೀರಾವರಿ ಅಳವಡಿಕೆಗೆ ಸಹಾಯಧನ

ಚಾಮರಾಜನಗರ: ತೋಟಗಾರಿಕೆ ಇಲಾಖೆಯಿಂದ 2023–24ನೇ ಸಾಲಿನ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ (ಪಿಎಂಕೆ ಎಸ್‌ವೈ) ಸೂಕ್ಷ್ಮ ಹನಿ ನೀರಾವರಿ ಯೋಜನೆಯಡಿ ಸಹಾಯಧನ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಶೇ.90ರಷ್ಟು ಹಾಗೂ ಇತರೆ ವರ್ಗದ ರೈತರಿಗೆ ಶೇ.75ರ ಸಹಾಯಧನ ನಿಗದಿಪಡಿಸಲಾಗಿದೆ. ಭಾವಚಿತ್ರ, ಪಹಣಿ, ಚೆಕ್‌ಬಂದಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಪುಸ್ತಕ, ಜಾತಿ ಪ್ರಮಾಣ ಪತ್ರ ಇನ್ನಿತರ ಅಗತ್ಯ ದಾಖಲಾತಿಗಳೊಂದಿಗೆ ಆಯಾ ತಾಲೂಕಿನ ತೋಟಗಾರಿಕೆ ಇಲಾಖೆ ಕಚೇರಿಯಲ್ಲಿ ಹೆಸರನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳಬೇಕು. ಮಾಹಿತಿಗಾಗಿ ಆಯಾಯ ತಾಲೂಕಿನ ತೋಟಗಾರಿಕೆ ಇಲಾಖೆಯ ಕಚೇರಿಯನ್ನು ಸಂಪರ್ಕಿಸಬಹುದು.

ವಚನ ಸಾಹಿತ್ಯಕ್ಕೆ ಬುನಾದಿ ಹಾಕಿದ ದೇವರ ದಾಸಿಮಯ್ಯ

ಕೊಳ್ಳೇಗಾಲ, ಫೆ14–ಹನ್ನೊಂದನೆ ಶತಮಾನದಲ್ಲಿ ದೇವರ ದಾಸಿಮಯ್ಯ ಅವರು ವಚನ ಸಾಹಿತ್ಯಕ್ಕೆ ಬುನಾದಿ ಹಾಕಿಕೊಟ್ಟರು. ಬಳಿಕ 12ನೇ ಶತಮಾನದಲ್ಲಿ ವಚನಗಳ ಸಾಹಿತ್ಯಕ್ಕೆ ಮಹತ್ವ ಬಂತು ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್‌ಶೆಟ್ಟರ್ ಹೇಳಿದರು.

ಪಟ್ಟಣದಲ್ಲಿ ಗಿರೀಶ್ ಬಾಬು ನಿರ್ಮಿಸಿರುವ ದೇವರ ದಾಸಿಮಯ್ಯ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದ ಅವರು, ದೇವರ ದಾಸಿಮಯ್ಯ ಪುಣ್ಯ ಪುರುಷರು, ಆದ್ಯ ವಚನಕಾರರು, ತಪಸ್ವಿ ಪುರುಷರು. ಅವರ ಚಿಂತನೆಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಪ್ರತಿಯೊಬ್ಬ ಮಾನವನು ಸಂಸ್ಕಾರವಂತ ಜೀವನ ಸಾಗಿಸಿ ಎಂಬ ಸಂದೇಶವನ್ನು ದೇವರ ದಾಸಿಮಯ್ಯ ಸಾರಿದ್ದಾರೆ. ಇಂತಹ ಮಹಾಪುರುಷನನ್ನು ಪಡೆದ ದೇವಾಂಗ ಸಮಾಜವೇ ಧನ್ಯ ಎಂದರು.

ಯಾದಗಿರಿಯ ಮದ್ದನೂರು ಸಂಸ್ಥಾನ ಮಠದ ಶ್ರೀ ಡಾ.ಈಶ್ವರಾನಂದ ಸ್ವಾಮೀಜಿ ಮಾತನಾಡಿ, ಗಿರೀಶ್ ಬಾಬು ಅವರು ಕಳೆದ ವರ್ಷ ದೇವರ ಮಹರ್ಷಿ ಮಹಾದ್ವಾರ ನಿರ್ಮಿಸಿದ್ದರು. ಈ ವರ್ಷ ಅದ್ಭುತವಾಗಿ ದೇವರ ದಾಸಿಮಯ್ಯ ಅವರ ಪುತ್ಥಳಿ ನಿರ್ಮಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪೂಲಾ ಕುಮಾರ ಸ್ವಾಮೀಜಿ, ಪರಸಂ ಮಹೇಶ್ ಸ್ವಾಮೀಜಿ, ಮಲ್ಲಿಕಾರ್ಜುನಸ್ವಾಮೀಜಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಮಾಜಿ ಶಾಸಕರಾದ ಹರ್ಷವರ್ಧನ್, ಎಸ್.ಬಾಲರಾಜು, ವಿಧಾನಪರಿಷತ್ ಮಾಜಿ ಸದಸ್ಯ ಎಂ.ಡಿ.ಲಕ್ಷ್ಮೀನಾರಾಯಣ್, ಎನ್.ಗಿರೀಶ್ ಬಾಬು, ನಗರಸಭೆ ಸದಸ್ಯರ ಎ.ಪಿ.ಶಂಕರ್, ಪವಿತ್ರ ರಮೇಶ್ ಇನ್ನಿತರಿದ್ದರು.



ಹೈಕಮಾಂಡ್ ತೀರ್ಮಾನ ಅಂತಿಮ

ಹೈಕಮಾಂಡ್ ನನಗೆ ಲೋಕಸಭೆಗೆ ಸ್ಪರ್ಧಿಸಲು ಸೂಚಿಸಿದರೆ ನಾನು ಸಿದ್ಧನಿದ್ದೇನೆ. ಚಾ.ನಗರ ಲೋಕಸಭಾ ಕ್ಷೇತ್ರಕ್ಕೆ ಅಭ್ಯರ್ಥಿ ಯಾರಾಗಬೇಕು ಎಂಬುದನ್ನ ಪಕ್ಷವೇ ತೀರ್ಮಾನಿಸುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ತಿಳಿಸಿದರು. ಕೊಳ್ಳೇಗಾಲದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಕೊಳ್ಳೇಗಾಲ, ಚಾ.ನಗರ ಹೊಸತೇನೂ ಅಲ್ಲ. ಕಂದಾಯ ಸಚಿವನಾಗಿದ್ದ ವೇಳೆ ಹಲವು ಬಾರಿ ಇಲ್ಲಿಗೆ ಭೇಟಿ ನೀಡಿದ್ದೇನೆ. ಮುಖ್ಯಮಂತ್ರಿಯಾದ ಬಳಿಕ ಜಿಲ್ಲೆಗೆ ಮೂರು ಬಾರಿ ಬಂದಿದ್ದೇನೆ ಎಂದರು.

ಬಾಡಿಗೆ ತಾಯ್ತನ: ವಯೋಮಿತಿ ಪ್ರಶ್ನಿಸಿ ಅರ್ಜಿ

ಕೇಂದ್ರದ ನಿಲುವಿಗೆ ಹೈಕೋರ್ಟ್ ಸೂಚನೆ

ನವದೆಹಲಿ, ಫೆ.14– ಬಾಡಿಗೆ ತಾಯ್ತನಕ್ಕೆ ಮಹಿಳೆಯು 23ರಿಂದ 50ರ ವಯೋಮಿತಿಯವರಾಗಿರಬೇಕು ಎಂಬ ಕಾನೂನು ಪ್ರಶ್ನಿಸಿ ದಂಪತಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ನಿಲುವು ಸ್ಪಷ್ಟಪಡಿಸುವಂತೆ ದೆಹಲಿ ಹೈಕೋರ್ಟ್ ಕೇಂದ್ರಕ್ಕೆ ಸೂಚಿಸಿದೆ. ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ ಅವರಿದ್ದ ಪೀಠವು ಈ ಅರ್ಜಿಯ ವಿಚಾರಣೆ ನಡೆಸಿತು. ಸರ್ಕಾರದ ಈ ನಿಯಮ ಸಂತಾನ ಪಡೆಯಬೇಕೆಂದಿರುವ ನಮ್ಮಂತಹವರಿಗೆ ಆಗಿರುವ ಅನ್ಯಾಯ ಎಂದು 51 ವರ್ಷದ ದಂಪತಿ ಅರ್ಜಿಯಲ್ಲಿ ಹೇಳಿದ್ದರು.

ವಿಜ್ಞಾನಕ್ಕೆ ಕೆಲವೊಂದು ನಿಲುವುಗಳಿವೆ. ವಿಜ್ಞಾನದೊಂದಿಗೆ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಹಾಗೆಯೇ ಮತ್ತೊಬ್ಬರ ಬದುಕಿನೊಂದಿಗೆ ಆಟವಾಡಲೂ ಬಾರದು. ಕೆಲವೊಮ್ಮೆ ಮಗು ವಿರೂಪ ಹೊಂದುವ ಅಪಾಯವೂ ಇದೆ ಎಂದು ಪೀಠ ಅಭಿಪ್ರಾಯಪಟ್ಟಿತು.



ಮಗು ಪಡೆಯಬೇಕೆಂಬ ಉದ್ದೇಶಿತ ಮಹಿಳೆಯು ನಿರ್ದಿಷ್ಟ ವಯೋಮಾನ ದಾಟಿರುವುದರಿಂದ ವೈದ್ಯಕೀಯ ಪ್ರಮಾಣ ಪತ್ರ ನೀಡಲೂಬಾರದು ಎಂದು ವೈದ್ಯಕೀಯ ಮಂಡಳಿಯು ದಂಪತಿಯ ಅರ್ಜಿಯನ್ನು ತಿರಸ್ಕರಿಸಿತ್ತು. ಹೀಗಾಗಿ ಅರ್ಜಿದಾರರು ಹೈಕೋರ್ಟ್ ಮೊರೆ ಹೋಗಿದ್ದರು. ಮದುವೆಯಾಗಿ 19 ವರ್ಷಗಳು ಕಳೆದರೂ ಮಕ್ಕಳಾಗಲಿಲ್ಲ. ಕೃತಕ ಗರ್ಭಧಾರಣೆಗೆ 2 ಬಾರಿ ಪ್ರಯತ್ನಿಸಿದರೂ ಅದೂ ಫಲ ನೀಡಲಿಲ್ಲ. ಹೀಗಾಗಿ ಬಾಡಿಗೆ ತಾಯಿಯ ಮೂಲಕ ಮಗು ಪಡೆಯಲು ನಿರ್ಧರಿಸಿದೆವು. ಆದರೆ ವೈದ್ಯಕೀಯ ಮಂಡಳಿ ತಮ್ಮ ಅರ್ಜಿಯನ್ನು ತಿರಸ್ಕರಿಸಿದೆ. ಇಲ್ಲಿ ವಾಸ್ತವವನ್ನು ಪರಿಗಣಿಸದೇ ಕೇವಲ ಯಾಂತ್ರಿಕವಾಗಿ ಅರ್ಜಿಯನ್ನು ನೋಡಲಾಗಿದೆ ಎಂದು ಅರ್ಜಿಯಲ್ಲಿ ದಂಪತಿ ಆರೋಪಿಸಿದ್ದರು. ವೈದ್ಯಕೀಯ ಮಂಡಳಿ ಎದುರು ನಮ್ಮ ವಾದ ಮಂಡಿಸಲು ಅವಕಾಶವನ್ನೇ ನೀಡದೆ, ನೈಸರ್ಗಿಕವಾಗಿ ನ್ಯಾಯ ಪಡೆಯುವುದನ್ನು ತಡೆಯಲಾಗಿದೆ. ಯಾವುದೇ ಸಕಾರಣವಿಲ್ಲದೆ ಅರ್ಜಿದಾರರ ಹಕ್ಕುಗಳನ್ನು ಕಸಿದುಕೊಂಡು ಮೂಲಭೂತ ಹಕ್ಕುಗಳಿಂದ ವಂಚಿತರಾಗುವಂತೆ ಮಾಡಲಾಗಿದೆ ಎಂದು ಈ ದಂಪತಿ ತಮ್ಮ ಅರ್ಜಿಯಲ್ಲಿ ಆರೋಪಿಸಿದ್ದರು. ಅರ್ಜಿದಾರರ ಕೋರಿಕೆ ಕುರಿತು ಪ್ರಾಧಿಕಾರವು ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಪ್ರಕರಣದ ವಿಚಾರಣೆಯನ್ನು ಮೇ ನಲ್ಲಿ ನಡೆಸುವುದಾಗಿ ನ್ಯಾಯಾಲಯ ಹೇಳಿತು. ಪೀಠದಲ್ಲಿ ನ್ಯಾ. ಮನಮೀತ್ ಪಿ.ಎಸ್. ಅರೋರಾ ಅವರೂ ಇದ್ದರು.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಮೂವರ ಬಲಿ ಪಡೆದ ಅವೈಜ್ಞಾನಿಕ ಹಂಪ್ಸ್‌ಗಳಿದ್ದ ಸಮೀಪದಲ್ಲೇ ಮತ್ತೊಂದು ಮೃತ್ಯುಕೂಪ

● ಎಚ್ಚರ ತಪ್ಪಿದರೆ ತಪ್ಪದು ಆಪತ್ತು ● ಸುರಕ್ಷತೆಗೆ ಇಲ್ಲಿ ನಿರ್ಮಿಸಬೇಕಿದೆ ತಡೆಗೋಡೆ



ಮೈಸೂರಿನ ಬೋಗಾದಿ ರಸ್ತೆಯಲ್ಲಿ ಮಾರುತಿ ದೇವಸ್ಥಾನ ರಸ್ತೆ ಜಂಕ್ಷನ್‌ನಿಂದ ಬಿಸಿಲು ಮಾರಮ್ಮ ರಸ್ತೆಯ ಜಂಕ್ಷನ್‌ವರೆಗೆ ರಸ್ತೆಬದಿಯಲ್ಲಿ ತಡೆಗೋಡೆ ಇಲ್ಲದಿರುವುದು. ಜೊತೆಗೆ ಇದೇ ಚಿತ್ರದಲ್ಲಿ ತಗ್ಗು ಪ್ರದೇಶದ ಗಂಗೋತ್ರಿ ಹುಡ್ಕೋ ಬಡಾವಣೆ ಮತ್ತು ಬಡಾವಣೆ ಪಡುವಣ ರಸ್ತೆಯನ್ನು ಕಾಣಬಹುದು.

ಮೈಸೂರು, ಫೆ14(ಪಿಎಂ)– ಮೂವರನ್ನು ಬಲಿ ಪಡೆದ ಅವೈಜ್ಞಾನಿಕ ಹಂಪ್ಸ್‌ಗಳಿದ್ದ ಸಮೀಪದಲ್ಲೇ ಮತ್ತೊಂದು ಮೃತ್ಯುಕೂಪ ಆಹುತಿಗಾಗಿ ಕಾದು ಕುಳಿತಿದೆ. ಹೌದು, ಬೋಗಾದಿ ರಸ್ತೆಯಲ್ಲಿ ಮಾರುತಿ ದೇವಸ್ಥಾನ ರಸ್ತೆ ಜಂಕ್ಷನ್‌ನಿಂದ ಬಿಸಿಲು ಮಾರಮ್ಮ ರಸ್ತೆಯ ಜಂಕ್ಷನ್‌ವರೆಗೆ ರಸ್ತೆಬದಿಯಲ್ಲಿ ಕಂದಕ (ಗಂಗೋತ್ರಿ ಹುಡ್ಕೋ ಬಡಾವಣೆ ಇರುವ ತಗ್ಗು ಪ್ರದೇಶ) ಇದ್ದು, ಎಚ್ಚರ ತಪ್ಪಿದರೆ ವಾಹನ ಸವಾರರು ಅನಾಹುತಕ್ಕೀಡಾಗುವ ಸನ್ನಿವೇಶ ತಪ್ಪಿದ್ದಲ್ಲ.

ಹಾಗಾಗಿ ಇದೇ ರಸ್ತೆಯ ಮಾನಸ ಗಂಗೋತ್ರಿ ಹಾಗೂ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಆವರಣಕ್ಕೆ ಹೊಂದಿಕೊಂಡಂತೆ ರಸ್ತೆಬದಿಯಲ್ಲಿ ನಿರ್ಮಿಸಿರುವ ಕಾಂಕ್ರಿಟ್ ತಡೆಗೋಡೆಯಂತೆ ಸದರಿ ತಗ್ಗು ಪ್ರದೇಶವಿರುವ ರಸ್ತೆಬದಿಯಲ್ಲೂ ತಡೆಗೋಡೆ ನಿರ್ಮಿಸಿ ಸುರಕ್ಷತೆಗೆ ಆದ್ಯತೆ ನೀಡಬೇಕೆಂಬುದು ಸಾರ್ವಜನಿಕರ ಆಗ್ರಹವಾಗಿದೆ.

ಬೋಗಾದಿ ರಸ್ತೆಯ ಮಾನಸ ಗಂಗೋತ್ರಿಯ ಮುಖ್ಯದ್ವಾರದ ಎದುರು ಹಾಗೂ ಇದೇ ರಸ್ತೆಯ ಮಾರುತಿ ದೇವಸ್ಥಾನ ರಸ್ತೆಯ ಜಂಕ್ಷನ್‌ನಲ್ಲಿ ಹಾಕಲಾಗಿದ್ದ ಅವೈಜ್ಞಾನಿಕ ಹಂಪ್ಸ್‌ಗೆ ಮೂವರು ಬಲಿಯಾಗಿದ್ದರು. ಇಲ್ಲಿಗೆ ಸನಿಹದಲ್ಲಿ ತಗ್ಗು ಪ್ರದೇಶವು ರಸ್ತೆಬದಿಯಲ್ಲೇ ಇದ್ದು, ಕಾಂಕ್ರಿಟ್ ತಡೆಗೋಡೆ ಅಥವಾ ಕಬ್ಬಿಣದ ಮೆಸ್ ಬೇಲಿಯನ್ನು ನಿರ್ಮಿಸಿ ವಾಹನ ಸವಾರರು ಹಾಗೂ ಪಾದಚಾರಿಗಳ ಸುರಕ್ಷತೆಗೆ ಆದ್ಯತೆ ನೀಡಬೇಕೆಂಬ ಒತ್ತಾಯ ನಾಗರಿಕರಿಂದ ಕೇಳಿ ಬಂದಿದೆ.

ಈ ರಸ್ತೆಯ ಮಗ್ಗುಲಲ್ಲೇ ಇರುವ ತಗ್ಗು ಪ್ರದೇಶದಲ್ಲಿ ಗಂಗೋತ್ರಿ ಹುಡ್ಕೋ ಬಡಾವಣೆ ಇದ್ದು, ಭಾರಿ ವಾಹನಗಳು ಅನಾಹುತಕ್ಕೆ ಒಳಗಾಗಿ ಇತ್ತ ಉರುಳಿದರೆ ಇಲ್ಲಿನ ನಿವಾಸಿಗಳ ಮನೆಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ, ಜೀವಕ್ಕೂ ಕುತ್ತು ತರುವ ಅಪಾಯ ಎದುರಾಗಬಹುದು. ರಸ್ತೆಯಿಂದ ಸುಮಾರು 15 ಅಡಿಯಷ್ಟು ಆಳವು ಈ ತಗ್ಗು ಪ್ರದೇಶದಲ್ಲಿದ್ದು, ನಿಧಾನವಾಗಿ ಚಲಿಸಬೇಕೆಂಬ ಮುನ್ಸೂಚನೆ ನೀಡುವ ಯಾವುದೇ ಫಲಕಗಳೂ ಇಲ್ಲಿ ಇಲ್ಲದೇ ಇರುವುದು ಅನಾಹುತಕ್ಕೆ ಹೇಳಿ ಮಾಡಿಸಿದಂತಾಗಿದೆ.

ಅದೃಷ್ಟವಶಾತ್ ಈವರೆಗೆ ಯಾವುದೇ ಅನಾಹುತ ಸಂಭವಿಸಿಲ್ಲ. ಆದರೆ ಈಗಲಾದರೂ ಎಚ್ಚೆತ್ತು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದಿದ್ದರೆ, ಭಾರಿ ಅವಘಡಕ್ಕೆ ಎಡೆಮಾಡಿದಂತಾಗಲಿದೆ ಎನ್ನುತ್ತಾರೆ ಸ್ಥಳೀಯರು. ಪ್ರತಿದಿನ ಇಲ್ಲಿ ನೂರಾರು ವಾಹನಗಳು ಸಂಚರಿಸುತ್ತವೆ. ಅಲ್ಲದೆ, ಇಲ್ಲಿ ನಡೆದು ಸಾಗುವವರ ಸಂಖ್ಯೆಯೂ ಹೆಚ್ಚಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ಇದೇ ರಸ್ತೆ ಬದಿಯಲ್ಲಿ ನಡೆದು ಸಾಗುವುದು ಇದೆ. ದುರಂತವೆಂದರೆ ಇಲ್ಲಿ ಪಾದಚಾರಿಗಳ ಅನುಕೂಲಕ್ಕಾಗಿ ವ್ಯವಸ್ಥಿತವಾದ ಫುಟ್‌ಪಾತ್ ಸಹ ನಿರ್ಮಿಸಿಲ್ಲ. ಇತ್ತೀಚೆಗಷ್ಟೇ ಈ ರಸ್ತೆಯಲ್ಲಿ ರಸ್ತೆ ವಿಭಜಕ ನಿರ್ಮಿಸಲಾಯಿತು. ಆದರೆ ಉಳಿದಂತೆ ಇಲ್ಲಿ ಸಂಭವಿಸಬಹುದಾದ ಅನಾಹುತಗಳನ್ನು ತಡೆಗಟ್ಟಲು ಸುರಕ್ಷತಾ ಕ್ರಮಗಳ ಬಗ್ಗೆ ಸ್ಥಳೀಯ ಆಡಳಿತ ಆಲೋಚಿಸದಂತೆ ಕಾಣುತ್ತಿಲ್ಲ ಎಂಬ ದೂರು ನಾಗರಿಕರಿಂದ ಕೇಳಿ ಬರುತ್ತಿದೆ.

ಅಂದು ಇಲ್ಲಿದ್ದ ಅವೈಜ್ಞಾನಿಕ ಹಂಪ್‌ಗಳಿಂದ ಮೂವರು ಸಾವನ್ನಪ್ಪಿದ ಬೆನ್ನಲ್ಲೇ ಇದೇ ರಸ್ತೆಯ ಕುಕ್ಕರಹಳ್ಳಿ ಕೆರೆ ಬಳಿ ಮರದ ಒಣ ರೆಂಬೆ ಮುರಿದು ಬಿದ್ದು ಹಿರಿಯ ನಾಗರಿಕರೊಬ್ಬರು ಬಲಿಯಾದರು. ಸ್ಥಳೀಯ ಆಡಳಿತದ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದರಿಂದ ಬೋಗಾದಿ ರಸ್ತೆ ಕೆಲವೇ ದಿನಗಳಲ್ಲಿ ನಾಲ್ವರನ್ನು ಬಲಿ ಪಡೆದ ಅಪಖ್ಯಾತಿಗೆ ಒಳಗಾಗಿದೆ ಎಂದು ನಾಗರಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ಕಳೆದ ಜನವರಿಯಲ್ಲಿ ಇಲ್ಲಿ ಹಾಕಲಾಗಿದ್ದ ಅವೈಜ್ಞಾನಿಕ ಹಂಪ್‌ಗಳಿಂದ ಅಪಘಾತದಲ್ಲಿ ಮೂವರು ಸಾವನ್ನಪ್ಪಿದರೆ, 20ಕ್ಕೂ ಹೆಚ್ಚು ಅಪಘಾತಗಳಿಂದ ಹಲವರು ಗಾಯಗೊಂಡರು. ಹುಡುಕುತ್ತಾ ಹೋದರೆ ಮೈಸೂರು ನಗರದಲ್ಲಿ ಇಂತಹ ನೂರೆಂಟು ಅವ್ಯವಸ್ಥೆಗಳಿವೆ ಎಂದು ಸಾರ್ವಜನಿಕರು ದೂರುತ್ತಿದ್ದು, ಮೈಸೂರು ನಗರ ಎಷ್ಟು ಸುರಕ್ಷಿತ ಎನ್ನುವ ಪ್ರಶ್ನೆ ಕಾಡುವಂತಾಗಿದೆ.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ರಸ್ತೆ ಸಂರಕ್ಷತಾ ಸಮಿತಿಯು ಆಗಾಗ್ಗೆ ನಗರದಲ್ಲಿ ಸಂಚರಿಸಿ ಸುರಕ್ಷಾ ಕ್ರಮಗಳ ಸಂಬಂಧ ಪರಿಶೀಲಿಸಬೇಕು. ಅವ್ಯವಸ್ಥೆಗಳನ್ನು ಸರಿಪಡಿಸಿ ನಾಗರಿಕರ ಸುರಕ್ಷತೆಗೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಆಗ್ರಹ ಸಾರ್ವಜನಿಕರಿಂದ ಕೇಳಿ ಬಂದಿದೆ.

▶ ಇಲ್ಲಿನ ರಸ್ತೆಬದಿಯಲ್ಲಿ ಇರುವ ತಗ್ಗು ಪ್ರದೇಶದ ಗಂಗೋತ್ರಿ ಹುಡ್ಕೋ ಬಡಾವಣೆಯ ಪಡುವಣ ರಸ್ತೆಬದಿಯಲ್ಲಿ ಕಾಂಕ್ರಿಟ್ ತಡೆಗೋಡೆಯನ್ನು ಮೂರ್ನಾಲ್ಕು ಅಡಿಯಷ್ಟು ನಿರ್ಮಿಸಲಾಗಿದೆ. ಅದರ ಮುಂದಕ್ಕೆ ಕಲ್ಲು ಚಪ್ಪಡಿಗಳನ್ನು ಅಳವಡಿಸಲಾಗಿದೆ. ಮುಂದುವರೆದಂತೆ ಇರುವ ಬೋಗಾದಿ ರಸ್ತೆಯ ಬದಿಯಲ್ಲಿ ವ್ಯವಸ್ಥಿತ ಫುಟ್‌ಪಾತ್ ನಿರ್ಮಿಸಿ, ಕಾಂಕ್ರಿಟ್ ಅಥವಾ ಕಬ್ಬಿಣದ ಮೆಸ್ ಮಾದರಿಯ ತಡೆಗೋಡೆ ನಿರ್ಮಿಸಬೇಕು. ಆ ಮೂಲಕ ಯಾವುದೇ ಅಪಘಾತಕ್ಕೆ ಆಸ್ಪದ ನೀಡದಂತೆ ಸೂಕ್ತ ಕ್ರಮ ವಹಿಸಬೇಕೆಂಬ ಒತ್ತಾಯ ನಾಗರಿಕರಿಂದ ಕೇಳಿಬಂದಿದೆ.



ಗಂಗೋತ್ರಿ ಹುಡ್ಕೋ ಬಡಾವಣೆಯ ಪಡುವಣ ರಸ್ತೆಯಲ್ಲಿ ಮಕ್ಕಳು ಆಟವಾಡುತ್ತಿರುವ ದೃಶ್ಯ. ಬೋಗಾದಿ ರಸ್ತೆಯಿಂದ ತೆಗೆದ ಚಿತ್ರ.

ಕೇಂದ್ರದ ವಿವಿಧ ಯೋಜನೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ



ಮೈಸೂರಿನ ಅಗ್ರಹಾರ ಶಂಕರಮಠ ರಸ್ತೆಯ ನಟರಾಜ ಕಲ್ಯಾಣ ಮಂಟಪ ಎದುರು ಕೇಂದ್ರದ ವಿವಿಧ ಯೋಜನೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಮೈಸೂರು, ಫೆ.14(ಎಂಕೆ)– 'ನಮ್ಮ ಸಂಕಲ್ಪ ವಿಕಸಿತ ಭಾರತ' ಅಭಿಯಾನದಡಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಮೈಸೂರಿನ ಅಗ್ರಹಾರ ಶಂಕರಮಠ ರಸ್ತೆಯ ನಟರಾಜ ಕಲ್ಯಾಣ ಮಂಟಪ ಎದುರು ವಿವಿಧ ಇಲಾಖೆ ಹಾಗೂ ಬ್ಯಾಂಕ್ ಸಿಬ್ಬಂದಿಗಳಿಂದ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಜನ್ ಧನ್ ಯೋಜನೆ, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮ ಯೋಜನೆ, ಪ್ರಧಾನ ಮಂತ್ರಿ ಸುರಕ್ಷ ಭೀಮ ಯೋಜನೆ, ಅಟಲ್ ಪಿಂಚಣಿ ಯೋಜನೆ, ಸ್ವ–ನಿಧಿ ಯೋಜನೆ, ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ, ಉಜ್ವಲ್ ಯೋಜನೆ (ಉಚಿತ ಗ್ಯಾಸ್ ಕನೆಕ್ಷ್) ಕುರಿತು ಸವಿವರವಾಗಿ ತಿಳಿಸಿಕೊಡಲಾಯಿತು.

ಆಯುಷ್ಮಾನ್ ಕಾರ್ಡ್ ಸದ್ಬಳಕೆ, ಕೇಂದ್ರ ಸರ್ಕಾರದ ಪಿಂಚಣಿ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಬೀದಿ ಬದಿ ವ್ಯಾಪಾರಿಗಳ ಆರ್ಥಿಕ ಸ್ವಾವಲಂಬನೆಗಾಗಿ ಸಾಲ–ಸೌಲಭ್ಯ, ಬಳಿಕ 18 ವೃತ್ತಿಗಳಲ್ಲಿ ತೊಡಗಿರುವವರು ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯಡಿ ಸಾಲ–ಸೌಲಭ್ಯ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿಕೊಡಲಾಯಿತು. ಹಾಗೆಯೇ ತಿಂಗಳಿಗೊಮ್ಮೆಯಾದರೂ ಎಟಿಎಂ ಬಳಕೆ ಮಾಡುವುದರಿಂದ ಮರಣಾ ನಂತರ 2 ಲಕ್ಷ ರೂ., ಇನ್ಶೂರೆನ್ಸ್ ಪಡೆದುಕೊಳ್ಳಬಹುದು ಎಂದು ವಿವರಿಸಲಾಯಿತು. ಬಳಿಕ ಅಭಿಯಾನದ ಕ್ಯಾಲೆಂಡರ್ ಬಿಡುಗಡೆ ಮಾಡಿ, ವಿತರಣೆ ಮಾಡಲಾಯಿತು.

ಲೀಡ್ ಬ್ಯಾಂಕ್ ಸಂಪರ್ಕ ಅಧಿಕಾರಿ ವೆಂಕಟೇಶ್, ಯುಕೋ ಬ್ಯಾಂಕ್ ಮ್ಯಾನೇಜರ್ ಸಂಜನಾ, ಅಸಿಸ್ಟೆಂಟ್ ಮ್ಯಾನೇಜರ್ ಆಶಾ, ಪಂಜಾಬ್ ಅಂಡ್ ಸಿಂಧ್ ಬ್ಯಾಂಕ್‌ನ ಮಾನಸಿ ಗುಪ್ತಾ, ನಗರ ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಬಿಜೆಪಿ ಮುಖಂಡರಾದ ಸಂದೇಶ್, ಶಿವರಾಜ್, ಮಧುಸೂದನ್ ಮತ್ತಿತರರಿದ್ದರು.

ಶ್ರದ್ಧಾಭಕ್ತಿಯ ಸಾಮೂಹಿಕ ಅಕ್ಷರಾಭ್ಯಾಸ



ಮೈಸೂರಿನ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಸಾಮೂಹಿಕ ಅಕ್ಷರಭ್ಯಾಸ ಹಾಗೂ ಸರಸ್ವತಿ ಪೂಜೆಯನ್ನು ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಲಾಗಿತ್ತು.

ಮೈಸೂರು,ಫೆ.14–ಮೈಸೂರಿನ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಸಾಮೂಹಿಕ ಅಕ್ಷರಭ್ಯಾಸ ಹಾಗೂ ಸರಸ್ವತಿ ಪೂಜೆಯನ್ನು ವಿಶ್ವೇಶ್ವರನಗರದಲ್ಲಿರುವ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಲಾಗಿತ್ತು. 150ಕ್ಕೂ ಹೆಚ್ಚು ಮಕ್ಕಳು ಅಕ್ಷರಾಭ್ಯಾಸದಲ್ಲಿ ಪಾಲ್ಗೊಂಡಿದ್ದರು. ಮೈಸೂರಿನ ಅವನಿ ಶೃಂಗೇರಿ ಮಠದ ವೇದಬ್ರಹ್ಮ ನಾಗರಾಜ ಶಾಸ್ತ್ರಿಗಳ ನೇತೃತ್ವದಲ್ಲಿ ಸರಸ್ವತಿ ಪೂಜೆ ಪ್ರಾರಂಭಿಸಿ ಆನಂತರ ಪೋಷಕರು ಮಕ್ಕಳಿಗೆ ಕೈಹಿಡಿದು ಅಕ್ಕಿಯಲ್ಲಿ ಓಂಕಾರ ಮತ್ತು ಗಣೇಶನಾಮ ಹಾಗೂ ಕನ್ನಡದಲ್ಲಿ ಅ ಆ ಇ ಈ ಮುಂತಾದವುಗಳನ್ನು ಬರೆಸುವುದರ ಬರೆಯುವ ಮೂಲಕ ಅಕ್ಷರಾಭ್ಯಾಸ ಮಾಡಿಸಿದರು.

ಈ ವೇಳೆ ಮಹರ್ಷಿ ಶಿಕ್ಷಣ ಸಂಸ್ಥೆಯ ಕಾರ್ಯ ನಿರ್ವಹಣಾಧಿಕಾರಿ ತೇಜಸ್ ಶಂಕರ್ ಮಾತನಾಡಿ, ಪುರಾಣ ನಂಬಿಕೆ ಪ್ರಕಾರ ಸರಸ್ವತಿ ಪೂಜಾ ಪ್ರಕಾರ ಮಕ್ಕಳ ನಾಲಿಗೆ ಮೇಲೆ ಸರಸ್ವತಿದೇವಿ ನೆಲೆಸಿ ಮಕ್ಕಳ ಶೈಕ್ಷಣಿಕ ಬದುಕು ಉತ್ತಮವಾಗಿರುತ್ತವೆ ಎಂಬ ನಂಬಿಕೆಯಿದೆ ಎಂದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಸಾಮೂಹಿಕ ವಿವಾಹವನ್ನು ಸರಳ ರೀತಿಯಲ್ಲಿ ಸರ್ಕಾರದ ವತಿಯಿಂದ ತಂದಿರುವ ಸಪ್ತಪದಿ ಯೋಜನೆಯಂತೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ವತಿಯಿಂದ ರಾಜ್ಯದ ಎಲ್ಲಾ ಶಾಲೆಗಳಲ್ಲೂ ಹಮ್ಮಿಕೊಳ್ಳುವಂತೆ ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು.


ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸವಿತಾ ಘಾಟ್ಕೆ, ಶಾಲೆಯ ಹಿರಿಯ ಪ್ರಾಂಶುಪಾಲ ಕೆ.ಆರ್.ಗೋಪಾಲಸ್ವಾಮಿ, ಶಿಕ್ಷಕರಾದ ರಾಘವೇಂದ್ರ, ಪ್ರಿಯಾಂಕ, ಅನಿತಾ ಹಾಗೂ ಇನ್ನಿತರರಿದ್ದರು.

ಅಕ್ರಮ ಲೇಔಟ್ ನಿರ್ಮಾಣ: ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಇತರರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಫೆ.14–ನಕಲಿ ದಾಖಲೆ ಸೃಷ್ಟಿಸಿ ಲೇಔಟ್ ನಿರ್ಮಾಣ ಮಾಡಿರುವ ಆರೋಪದ ಮೇರೆಗೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಅವರ ಪತ್ನಿ ಎಲ್. ಕುಸುಮಾ, ಮುಡಾ ಅಧಿಕಾರಿಗಳು ಹಾಗೂ ಗ್ರಾಪಂ ಪಿಡಿಓ ವಿರುದ್ಧ ನ್ಯಾಯಾಲಯದ ಆದೇಶದ ಮೇರೆಗೆ ಮೈಸೂರಿನ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು ತಮ್ಮ ಪತ್ನಿ ಕುಸುಮಾ ಹೆಸರಿನಲ್ಲಿ ಜಯಪುರ ಹೋಬಳಿಯ ಉದ್ಬೂರು ಸರ್ವೆ ನಂ.315 ಮತ್ತು 317ರಲ್ಲಿ ಒಟ್ಟು 9 ಎಕರೆ 21 ಗುಂಟೆ ಜಮೀನು ಹೊಂದಿದ್ದು, ಈ ಜಮೀನಿಗೆ ಸಂಪರ್ಕ ರಸ್ತೆ ಇಲ್ಲದಿದ್ದರೂ ಇದೆ ಎಂಬಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ನಿವೇಶನಗಳನ್ನಾಗಿ ಪರಿವರ್ತಿಸಿದ್ದಾರೆ. ಇವರ ಕಾನೂನುಬಾಹಿರ ಕೃತ್ಯಕ್ಕೆ ಮುಡಾ ಅಧಿಕಾರಿಗಳು, ಉದ್ಬೂರು ಗ್ರಾಪಂ ಪಿಡಿಓ ಇನ್ನಿತರರು ಸಹಕರಿಸಿದ್ದಾರೆ ಎಂದು ಆದೀಶ್ ಸಾಗರ್ ಎಂಬುವರು ನೀಡಿದ ದೂರಿನನ್ವಯ ಭಾರತೀಯ ದಂಡ ಸಂಹಿತೆ 120ಬಿ, 406, 409, 420, 425, 427, 464, 465, 468, 471ರಡಿ ಪ್ರಕರಣ ದಾಖಲಿಸಲಾಗಿದೆ.

ಎಂಕೆಎಸ್ ಸ್ಪಷ್ಟನೆ: ಆಧಾರರಹಿತವಾದ ಆರೋಪಗಳನ್ನು ಮುಂದಿಟ್ಟುಕೊಂಡು, ಒತ್ತಡ ತಂದು ಕೇಸ್ ದಾಖಲಿಸುವ ಪ್ರಯತ್ನ ನಡೆಯುತ್ತಲೇ ಇತ್ತು. ಈಗ ಕೋರ್ಟ್ ಮೂಲಕ ಪ್ರಕರಣ ದಾಖಲಿಸಲಾಗಿದೆ. ನಮ್ಮ ಬಳಿ ಸಮರ್ಪಕ ದಾಖಲೆಗಳಿವೆ. ಅವುಗಳನ್ನು ಹಾಜರುಪಡಿಸಿ, ನ್ಯಾಯ ಪಡೆಯುತ್ತೇವೆ. ನಂತರ ಪತ್ರಿಕಾಗೋಷ್ಠಿಯಲ್ಲಿ ಎಲ್ಲಾ ಮಾಹಿತಿ ಹಂಚಿಕೊಳ್ಳುತ್ತೇನೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸ್ಪಷ್ಟಪಡಿಸಿದ್ದಾರೆ.



ಮೈಸೂರು ತಾಲೂಕು ಜಯಪುರ ಗ್ರಾಮ ಪಂಚಾಯಿತಿಗೆ ನೂತನ ಉಪಾಧ್ಯಕ್ಷರಾಗಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಬೆಂಬಲಿತರೂ ಆದ ದಾರಿಪುರದ ಸುಮಾ ಬಸವರಾಜ್ ಅವಿರೋಧವಾಗಿ ಆಯ್ಕೆಯಾದರು. ನೂತನ ಉಪಾಧ್ಯಕ್ಷರನ್ನು ಅಧ್ಯಕ್ಷ ಮಹದೇವಯ್ಯ, ಕಾರ್ಯದರ್ಶಿ ನಾಗವೇಣಿ, ಗ್ರಾಪಂ ಸದಸ್ಯರು ಆತ್ಮೀಯವಾಗಿ ಅಭಿನಂದಿಸಿದರು. ಚುನಾವಣಾಧಿಕಾರಿಯಾಗಿ ದೇವೇಂದ್ರಪ್ಪ ಕಾರ್ಯನಿರ್ವಹಿಸಿದರು. ಗ್ರಾಪಂ ಸದಸ್ಯರಾದ ಜಯಪುರ ಎಂ.ನಾಗರಾಜು, ಬಿ.ರೇಣುಕಾ, ಆಶಾ ಕೆಂಪಚಾರಿ, ಮಹಾದೇವಿ, ರೇಣುಕಾ, ಮಂಗಳಮ್ಮ, ನವೀನಮ್ಮ, ನಂಜಮ್ಮಣಿ, ಬರಡನಪುರ ಬಸವಣ್ಣ, ಮರಿಸಿದ್ದೇಗೌಡ, ಹರೀಶ, ಭೈರೇಶ, ಬಸವಣ್ಣ ಉಪಸ್ಥಿತರಿದ್ದರು.

ಹೆಚ್.ಎಲ್.ಸತೀಶ್ ನಿಧನ



ಮೈಸೂರು, ಫೆ.14– ಕೆನರಾ ಬ್ಯಾಂಕ್ ನೌಕರರ ಸಂಘದ ಮೈಸೂರು ವಿಭಾಗದ ಮಾಜಿ ಸಹಕಾರ್ಯದರ್ಶಿ ಎಂ.ಎನ್. ರಮೇಶ್ ಅವರ ಸಹೋದರ ಹೆಚ್.ಎಲ್.ಸತೀಶ್ (55) ಇಂದು ಬೆಂಗಳೂರಿನಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ(ಫೆ.15) ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಸುಮನಹಳ್ಳಿ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಬಕಾರಿ ಹಗರಣ: ಕೇಜ್ರಿವಾಲ್‌ಗೆ 6ನೇ ಬಾರಿ ಇಡಿ ಸಮನ್ಸ್ ಜಾರಿ



ನವದೆಹಲಿ, ಫೆ14– ದೆಹಲಿ ಅಬಕಾರಿ ನೀತಿಯಲ್ಲಿ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜಾರಿ ನಿರ್ದೇಶನಾಲಯ(ಇ.ಡಿ) ಮತ್ತೊಂದು ಸಮನ್ಸ್ ಜಾರಿ ಮಾಡಿದ್ದು, ಫೆ. 19ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ. ಕೇಜ್ರಿವಾಲ್‌ಗೆ ನೀಡಿದ ಆರನೇ ಸಮನ್ಸ್ ಇದಾಗಿದೆ. ಮತ್ತೊಂದೆಡೆ ವಿಚಾರಣೆಗೆ ಹಾಜರಾಗದೇ ಇರುವುದರ ವಿರುದ್ಧ ಇ.ಡಿ ನ್ಯಾಯಾಲಯದ ಮೆಟ್ಟಿಲೇರಿದ್ದು, ಫೆ.17ರಂದು ವಿಚಾರಣೆಗೆ ಹಾಜರಾಗುವಂತೆ ದೆಹಲಿ ನ್ಯಾಯಾಲಯ ಆದೇಶಿಸಿದೆ.

ಅಬಕಾರಿ ನೀತಿ ಹಗರಣದಲ್ಲಿ ಕೇಜ್ರಿವಾಲ್ ಸೇರಿದಂತೆ ಇತರರ ಪಾತ್ರವನ್ನು ಬಯಲಿಗೆಳೆಯುವ ಉದ್ದೇಶವನ್ನು ತನಿಖಾ ಸಂಸ್ಥೆ ಹೊಂದಿದ್ದು, ವಿಚಾರಣೆಗೆ ಹಾಜರಾಗುವಂತೆ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಹಲವು ಬಾರಿ ಸಮನ್ಸ್ ಜಾರಿ ಮಾಡಿದ್ದರೂ ಉದ್ದೇಶಪೂರ್ವಕವಾಗಿ ಅವುಗಳನ್ನು ಕಡೆಗಣಿಸಿ ಅವಿಧೇಯತೆ ತೋರಿದ್ದಾರೆ ಎಂದು ನ್ಯಾಯಾಲಯದಲ್ಲಿ ಇ.ಡಿ ದೂರಿತ್ತು. ಕೇಜ್ರಿವಾಲ್ ಅವರಿಗೆ ಕಳೆದ ವರ್ಷ ನವೆಂಬರ್ 2 ಮತ್ತು ಡಿಸೆಂಬರ್ 21, ಈ ವರ್ಷ ಜನವರಿ 3 ಮತ್ತು 18, ಫೆಬ್ರುವರಿ 2ರಂದು ಸಮನ್ಸ್ ಜಾರಿ ಮಾಡಲಾಗಿತ್ತು. ಈ ಎಲ್ಲ ಸಮನ್ಸ್‌ಗಳನ್ನು ಕಾನೂನುಬಾಹಿರ ಮತ್ತು ರಾಜಕೀಯ ಪ್ರೇರಿತ ಎಂದು ಕರೆದಿರುವ ಕೇಜ್ರಿವಾಲ್ ಚುನಾವಣಾ ಪ್ರಚಾರಕ್ಕೆ ಹೋಗದಂತೆ ತಡೆಯಲು ಮಾಡಿರುವ ಪಿತೂರಿಯಾಗಿದೆ ಎಂದು ದೂರಿದ್ದರು.

ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ ಮೈಸೂರಲ್ಲಿ ಶ್ರದ್ಧಾಂಜಲಿ



ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.


ಮೈಸೂರು, ಫೆ.14(ಎಂಕೆ)– ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾದಲ್ಲಿ 5 ವರ್ಷದ ಹಿಂದೆ ನಡೆದ ಉಗ್ರರ ದಾಳಿಯಲ್ಲಿ ಹುತಾತ್ಮರಾದ ಯೋಧರನ್ನು ಸ್ಮರಿಸಲಾಯಿತು.

ನಗರದ ಚಾಮುಂಡಿಪುರಂ ವೃತ್ತದಲ್ಲಿ ಶ್ರೀರಾಮ ಗೆಳೆಯರ ಬಳಗದ ವತಿಯಿಂದ ಬುಧವಾರ ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರ ಭಾವಚಿತ್ರಗಳಿಗೆ ಪುಷ್ಪನಮನ ಹಾಗೂ ಕ್ಯಾಂಡಲ್ ಬೆಳಗಿಸಿ ಶ್ರದ್ಧಾಂಜಲಿ ಸಲ್ಲಿಸಿ, ಮೌನಾಚರಣೆ ಮೂಲಕ ಸ್ಮರಿಸಲಾಯಿತು. ಶ್ರೀರಾಮ ಗೆಳೆಯರ ಬಳಗದ ಸಿ.ಸಂದೀಪ್ ಮಾತನಾಡಿ, ಸೈನಿಕರು ಮತ್ತು ರೈತರು ದೇಶದ ಆಸ್ತಿಯಾಗಿದ್ದಾರೆ. ದೇಶದ ರಕ್ಷಣೆಗಾಗಿ ಹುತಾತ್ಮರಾದ ಯೋಧರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಇದೇ ವೇಳೆ ಭಾರತ ಮಾತೆಗೆ, ಹುತಾತ್ಮ ಯೋಧರಿಗೆ ಜೈಕಾರ ಕೂಗಲಾಯಿತು. ಬಳಗದ ಬಸವರಾಜು(ಬಸಪ್ಪ), ಲಕ್ಷ್ಮಣ್, ಮಹೇಶ್, ಬಸವರಾಜು, ಅಜಯ್ ಶಾಸ್ತ್ರಿ, ಕಿಶೋರ್, ನಿತೀನ್, ಧರ್ಮೇಂದ್ರ, ರಾಜೇಂದ್ರ, ಶ್ರೀಧರ್, ಪುರುಷೋತ್ತಮ್, ಗಿರಿ, ಶೇಖರ್, ಸುರೇಶ್, ಭಾಸ್ಕರ್, ಸುರೇಂದರ್, ಅಭಿನವ್, ದಿನೇಶ್ ಮತ್ತಿತರರಿದ್ದರು.

ಅಡುಗೆ ಎಣ್ಣೆ, ಆಹಾರ ಪದಾರ್ಥಗಳ ದರ ಇಳಿಕೆ

ಬೆಳ್ಳುಳ್ಳಿ ದರ ಗಗನದತ್ತ...!





ಮೈಸೂರು, ಫೆ.14(ಎಂಕೆ)– ಅಡುಗೆ ಎಣ್ಣೆ ಇನ್ನಷ್ಟು ಅಗ್ಗ... ಬೆಳ್ಳುಳ್ಳಿ 400 ರೂ.ಗಳತ್ತ... ಈರುಳ್ಳಿ ನೂರಕ್ಕೆ ನಾಲ್ಕರಿಂದ ಐದು ಕೆ.ಜಿ...!

ಲೋಕಸಭಾ ಚುನಾವಣೆ ಸಮೀಪವಾಗುತ್ತಿರುವ ಹಿನ್ನೆಲೆಯಲ್ಲಿ ದುಬಾರಿ ಆಹಾರ ಪದಾರ್ಥಗಳು ಕಡಿಮೆ ಬೆಲೆಯಲ್ಲಿ ದೊರೆಯುವಂತಾಗಿದೆ. ಕೆ.ಜಿಗೆ 100 ರೂ. ಸಮೀಪದಲ್ಲಿರುವ ರಾಜಮುಡಿ ಅಕ್ಕಿ ಸೇರಿದಂತೆ ಇನ್ನಿತರೆ ಅಕ್ಕಿಗಳ ದುಬಾರಿ ಬೆಲೆಯಿಂದ ಹೈರಾಣಾಗಿದ್ದ ಸಾರ್ವಜನಿಕರಲ್ಲಿ ಕೇಂದ್ರ ಸರ್ಕಾರದ 'ಭಾರತ್ ರೈಸ್' ಕೊಂಚ ನಿರಾಳ ತಂದರೆ, ಲೀಟರ್‌ಗೆ 200 ರೂ.ಗಳ ಸನಿಹದಲ್ಲಿದ್ದ ಅಡುಗೆ ಎಣ್ಣೆ ಬೆಲೆ ಗಣನೀಯವಾಗಿ ಕಡಿಮೆಯಾಗಿದೆ.

ಬಹುಬೇಡಿಕೆಯ ಅಡುಗೆ ಎಣ್ಣೆ ಬ್ರ್ಯಾಂಡ್‌ಗಳಾದ ಸನ್‌ಪ್ಯೂರ್, ಗೋಲ್ಡ್ ವಿನ್ನರ್, ಫಾರ್ಚೂನ್, ಇಮಾಮಿ ಇನ್ನಿತರೆ ಅಡುಗೆ ಎಣ್ಣೆಗಳು ಲೀಟರ್‌ಗೆ 110 ರೂ.ನಂತೆ ಮಾರಾಟವಾಗುತ್ತಿದೆ. ಪಾಮ್ ಆಯಿಲ್ ಲೀಟರ್‌ಗೆ 85 ರೂ. ಇದ್ದರೆ ಕೊಬ್ಬರಿ ಹಾಗೂ ಹರಳೆಣ್ಣೆ ಒಂದು ಲೀಟರ್‌ಗೆ 180 ರೂ.ನಂತೆ ಮಾರಾಟ ಮಾಡಲಾಗುತ್ತಿದೆ. ವರ್ಷದ ಹಿಂದೆ 200 ರೂಗಳ ಸನಿಹದಲ್ಲಿದ್ದ ಅಡುಗೆ ಎಣ್ಣೆಯ ಬೆಲೆ ಗಣನೀಯವಾಗಿ ಕಡಿಮೆಯಾಗಿರುವುದು ಗ್ರಾಹಕರ ಮೊಗದಲ್ಲಿ ಸಂತಸ ತಂದಿದೆ.

ಹಾಗೆಯೇ ವನಸ್ಪತಿ ಇನ್ನಿತರೆ ತುಪ್ಪಕ್ಕೆ ಕೆ.ಜಿಗೆ 95–100 ರೂ. ಇದ್ದರೆ ದಿನಬಳಕೆ ಆಹಾರ ಪದಾರ್ಥಗಳು, ದಿನಸಿ ಕಾಳುಗಳ ಹಾಗೂ ಅಕ್ಕಿ ಬೆಲೆಯಲ್ಲಿ ಏರಿಕೆಯಾಗಿದ್ದು, ಕೇಂದ್ರ ಸರ್ಕಾರದಿಂದ ಕೆ.ಜಿಗೆ 29 ರೂ.ನಂತೆ ನೀಡುತ್ತಿರುವ 'ಭಾರತ್ ರೈಸ್' ನಿಂದಾಗಿ ದುಬಾರಿ ಅಕ್ಕಿಯಿಂದ ಹೈರಾಣಾಗಿದ್ದವರು ಕೊಂಚ ನಿಟ್ಟುಸಿರು ಬಿಡುವಂತಾಗಿದೆ. ಗುಣಮಟ್ಟದ ಭಾರತ್ ರೈಸ್‌ನೊಂದಿಗೆ ಬೇಳೆ ಕಾಳು ನೀಡುತ್ತಿರುವುದು ಕೂಡ ಸಾಕಷ್ಟು ಅನುಕೂಲವಾಗುತ್ತಿದ್ದು, ಭಾರಿ ಬೇಡಿಕೆ ವ್ಯಕ್ತವಾಗಿದೆ.

ಈರುಳ್ಳಿ ಕೆಳಗೆ, ಬೆಳ್ಳುಳ್ಳಿ ಮೇಲೆ!: ಅಡುಗೆ ತಯಾರಿಸಲು ಅತೀ ಅವಶ್ಯವಾದ ಈರುಳ್ಳಿ–ಬೆಳ್ಳುಳ್ಳಿ ಬೆಲೆ ತದ್ವಿರುದ್ಧವಾಗಿದೆ. ಈರುಳ್ಳಿ 100 ರೂ.ಗೆ 4 ರಿಂದ 5 ಕೆ.ಜಿ ಮಾರಾಟವಾದರೆ, ಬೆಳ್ಳುಳ್ಳಿ ಕೆ.ಜಿಗೆ 300 ರಿಂದ 400 ರೂ.ವರೆಗೆ ಮಾರಾಟವಾಗುತ್ತಿದೆ. ಈರುಳ್ಳಿ ಹಾಗೂ ಬೆಳ್ಳುಳ್ಳಿ ಗಾತ್ರಕ್ಕೆ ಅನುಗುಣವಾಗಿ ಮಾರಾಟವಾಗುತ್ತಿದ್ದು, ಬೆಳ್ಳುಳ್ಳಿ ಬಳಕೆ ಮಾಡುವುದನ್ನು ಒಂದಷ್ಟು ದಿನ ನಿಲ್ಲಿಸಿದರೆ ಒಳ್ಳೆಯದು ಎನ್ನುವಂತಾಗಿದೆ ಎಂದು ಹಲವು ಗ್ರಾಹಕರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಬರಗಾಲ ಮತ್ತು ಹವಾಮಾನ ವೈಪರೀತ್ಯದಿಂದಾಗಿ ಇಳುವರಿ ಕುಂಠಿತಗೊಂಡಿರುವ ಹಿನ್ನೆಲೆಯಲ್ಲಿ ಮಾರುಕಟ್ಟೆಗೆ ಬರುವ ಬೆಳ್ಳುಳ್ಳಿ ಪ್ರಮಾಣ ಕಡಿಮೆಯಾಗಿರುವುದರಿಂದ ಸಗಟು ಮಾರಾಟ ದರದಲ್ಲಿ ಭಾರಿ ಏರಿಕೆಯಾಗಿದೆ. ಮೂರು ತಿಂಗಳ ಹಿಂದೆಯಷ್ಟೇ ಕೆ.ಜಿಗೆ 100–150 ರೂ. ಇದ್ದ ಬೆಳ್ಳುಳ್ಳಿ ಬೆಲೆ ಏಕಾಏಕಿ ಜಾಸ್ತಿಯಾಗಿರುವುದು ಗ್ರಾಹಕರ ಜೇಬಿಗೆ ಬಿಸಿ ಮುಟ್ಟಿದೆ.

ಹಣ್ಣು–ತರಕಾರಿ ಯಥಾಸ್ಥಿತಿ: ಉಳಿದಂತೆ ಹಣ್ಣು– ತರಕಾರಿ ಬೆಲೆಗಳಲ್ಲಿ ಯಥಾಸ್ಥಿತಿ ಇದ್ದು, ಕ್ಯಾರೆಟ್–ಬೀಟ್‌ರೂಟ್ ಕೆ.ಜಿಗೆ 40 ರೂ., ಬೀನಿಸ್ 50–60, ಟೊಮೆಟೊ 20 ಸೇರಿದಂತೆ ಇತರೆ ತರಕಾರಿಗಳ ಬೆಲೆಯಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ. ಆದರೆ ದಿನ ದಿನಕ್ಕೆ ಬಿಸಿಲಿನ ತಾಪ ಹೆಚ್ಚಾದಂತೆ ನಿಂಬೆಹಣ್ಣಿಗೆ ಡಿಮ್ಯಾಂಡ್ ಜಾಸ್ತಿಯಾಗುತ್ತಿದ್ದು, 10 ರೂ.ಗೆ ಎರಡು (ದೊಡ್ಡ ಗಾತ್ರದ್ದು) ಮಾರಾಟ ಮಾಡಲಾಗುತ್ತಿದೆ.

ಕೇಂದ್ರದ ಅನುದಾನ ತಾರತಮ್ಯ ವಿರೋಧಿಸಿ ಫೆ. 21ರಿಂದ 23ರವರೆಗೆ

48 ಗಂಟೆ ಅಹೋರಾತ್ರಿ ಧರಣಿ



ಮೈಸೂರು ಹುಣಸೂರು ರಸ್ತೆಯಲ್ಲಿರುವ ಜಲದರ್ಶಿನಿ ಅತಿಥಿ ಗೃಹದಲ್ಲಿ ಅಹೋರಾತ್ರಿ ಧರಣಿಯ ಪೂರ್ವಸಿದ್ಧತೆ ಕುರಿತು ಕನ್ನಡ ಪರ ಸಮಾನ ಮನಸ್ಕರ ವೇದಿಕೆಯ ಮುಖಂಡರು ಬುಧವಾರ ಸಭೆ ನಡೆಸಿದರು.

ಮೈಸೂರು, ಫೆ.14(ಎಸ್‌ಪಿಎನ್)– ರಾಜ್ಯಕ್ಕೆ ನ್ಯಾಯಯುತವಾಗಿ ಸೇರಬೇಕಾದ ಜಿಎಸ್‌ಟಿ ಹಣವನ್ನು ಕೇಂದ್ರ ಸರ್ಕಾರ ಕೂಡಲೇ ನೀಡಬೇಕೆಂದು ಆಗ್ರಹಿಸಿ ಮೈಸೂರಿನ ಕನ್ನಡ ಪರ ಸಮಾನ ಮನಸ್ಕರ ವೇದಿಕೆಯು ಫೆ. 21ರಿಂದ 23ರವರೆಗೆ 48 ಗಂಟೆಗಳ ಕಾಲ ಅಹೋರಾತ್ರಿ ಧರಣಿ ನಡೆಸಲು ತೀರ್ಮಾನಿಸಿದೆ.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಜಲದರ್ಶಿನಿ ಅತಿಥಿಗೃಹದಲ್ಲಿ ವೇದಿಕೆಯ ಮುಖಂಡರಾದ ಟಿ. ಗುರುರಾಜ್, ಡಾ. ಬಿ.ಜೆ. ವಿಜಯಕುಮಾರ್, ಉಗ್ರನರಸಿಂಹೇಗೌಡ ಇನ್ನಿತರರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಫೆ. 21ರಂದು ಬೆಳಗ್ಗೆ 10 ಗಂಟೆಯಿಂದ 23ರಂದು ಬೆಳಗ್ಗೆ 10 ಗಂಟೆವರೆಗೆ ದೇವರಾಜ ಮಾರುಕಟ್ಟೆ ಮುಂಭಾಗವಿರುವ ಚಿಕ್ಕ ಗಡಿಯಾರದ ಬಳಿ ಅಹೋರಾತ್ರಿ ಧರಣಿ ನಡೆಸಲು ತೀರ್ಮಾನಿಸಿತು.

ಕರ್ನಾಟಕದಿಂದ ಹೆಚ್ಚಿನ ಪ್ರಮಾಣದ ತೆರಿಗೆ ಕೇಂದ್ರ ಸರ್ಕಾರಕ್ಕೆ ಪಾವತಿಯಾಗುತ್ತಿದ್ದರೂ, ಕೇಂದ್ರವು ರಾಜ್ಯಕ್ಕೆ ಕಡಿಮೆ ಪಾಲು ನೀಡುತ್ತಿದೆ. ನ್ಯಾಯಯುತವಾಗಿ ಸಲ್ಲಬೇಕಾದ ರಾಜ್ಯದ ಪಾಲನ್ನು ನೀಡುತ್ತಿಲ್ಲ. ಇದರಿಂದಾಗಿ ರಾಜ್ಯದ ಅಭಿವೃದ್ಧಿ ಕುಂಠಿತವಾಗುವ ಅಪಾಯವಿದೆ. ಹೀಗಾಗಿ ರಾಜ್ಯಕ್ಕೆ ನೀಡಬೇಕಾದ 1.87 ಲಕ್ಷ ಕೋಟಿ ರೂ. ಜಿಎಸ್‌ಟಿ ಬಾಕಿಯನ್ನು ನೀಡಬೇಕೆಂದು ಆಗ್ರಹಿಸಿ, ಕೇಂದ್ರ ಸರ್ಕಾರದ ವಿರುದ್ಧ ಪಕ್ಷಾತೀತವಾಗಿ ಈ ಧರಣಿ ನಡೆಸಲಾಗುತ್ತಿದೆ ಎಂದು ಮುಖಂಡರು ಘೋಷಿಸಿದರು.

ಈ ಸಭೆಯಲ್ಲಿ ಮಾತನಾಡಿದ ವಿಶ್ರಾಂತ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ, ಕೇಂದ್ರ ಸರ್ಕಾರವು ರಾಜ್ಯದ ಪಾಲಿನ ಜಿಎಸ್‌ಟಿ ಹಣವನ್ನು ಪೂರ್ಣ ಪ್ರಮಾಣದಲ್ಲಿ ನೀಡಬೇಕು. ಆದರೆ, ಕೇಂದ್ರವು ಉತ್ತರಭಾರತದ ರಾಜ್ಯಗಳಿಗೆ ಹೆಚ್ಚಿನ ಪ್ರಮಾಣದ ಹಣ ನೀಡುತ್ತಿದ್ದು, ದಕ್ಷಿಣಭಾರತದ ರಾಜ್ಯಗಳಿಗೆ ಅನ್ಯಾಯ ಎಸಗುತ್ತಿದೆ ಎಂದು ಆರೋಪಿಸಿದರಲ್ಲದೇ, ಕೂಡಲೇ ದಕ್ಷಿಣ ಭಾರತದ ರಾಜ್ಯಗಳಿಗೆ ಬಾಕಿ ಜಿಎಸ್‌ಟಿ ಹಣವನ್ನು ನೀಡುವ ಮೂಲಕ ಕೇಂದ್ರ ಸರ್ಕಾರ ಅನ್ಯಾಯವನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು. ವೇದಿಕೆ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿಗೆ ಬೆಂಬಲ ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಾಮಾಜಿಕ ಹೋರಾಟಗಾರ ವಿಜಯಕುಮಾರ್ ಮಾತನಾಡಿ, ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ದಕ್ಷಿಣಭಾರತದ ರಾಜ್ಯಗಳು ಹೆಚ್ಚಿನ ಪ್ರಮಾಣದಲ್ಲಿ ತೆರಿಗೆಯನ್ನು ಕೇಂದ್ರಕ್ಕೆ ನೀಡುತ್ತಿವೆ. ಆದರೆ ಕೇಂದ್ರ ಸರ್ಕಾರದಿಂದ ಈ ರಾಜ್ಯಗಳಿಗೆ ಸಣ್ಣ ಪ್ರಮಾಣದ ತೆರಿಗೆ ಹಣ ಮಾತ್ರ ವಾಪಸ್ ಬರುತ್ತಿದೆ. ಕೇಂದ್ರದ ಈ ನೀತಿಯನ್ನು ವಿರೋಧಿಸಿ, ದಕ್ಷಿಣ ರಾಜ್ಯಗಳ ತೆರಿಗೆ ಪಾಲು ನ್ಯಾಯಯುತವಾಗಿ ನೀಡಬೇಕೆಂದು ಆಗ್ರಹಿಸಿ ಅಹೋರಾತ್ರಿ ಧರಣಿ ನಡೆಸಲಾಗುತ್ತಿದೆ ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಜಿಪಂ ಮಾಜಿ ಸದಸ್ಯ ಅಮೀತ್ ದೇವರಹಟ್ಟಿ, ಮಾಜಿ ಮೇಯರ್ ದಕ್ಷಿಣಾಮೂರ್ತಿ, ಕನ್ನಡ ಕಾವಲುಪಡೆ ರಾಜ್ಯಾಧ್ಯಕ್ಷ ಮೋಹನ್ ಕುಮಾರ್‌ಗೌಡ, ಹೋರಾಟಗಾರರಾದ ಲಿಂಗರಾಜು ಚಿತ್ತಣ್ಣವರ್, ಕೆ. ಬಾಲಕೃಷ್ಣ, ಪ್ರೊ. ನಂಜರಾಜೇ ಅರಸ್, ರಂಗಾಯಣ ಕಲಾವಿದರಾದ ಮಹದೇವ್, ಮೈಮ್ ರಮೇಶ್, ರಾಮು, ಶ್ರೀಕಂಠಸ್ವಾಮಿ, ರಂಗಕರ್ಮಿಗಳಾದ ಸಿ. ಬಸವಲಿಂಗಯ್ಯ, ಜನಾರ್ಧನ್ (ಜನ್ನಿ), ದಲಿತ ಮುಖಂಡ ಹರಿಹರ ಆನಂದಸ್ವಾಮಿ, ಸಾ.ರಾ. ಸುದರ್ಶನ್, ಚೋರನಹಳ್ಳಿ ಶಿವಣ್ಣ, ಪ್ರದೀಪ್ ಮುಮ್ಮಡಿ, ದೇವನೂರು ಪುಟ್ಟನಂಜಯ್ಯ, ಅಮ್ಜದ್ ಖಾನ್, ಎಂ.ಎಫ್. ಕಲೀಂ, ರಾಜೇಂದ್ರ, ನಾಗಭೂಷಣ್, ಸುಶೀಲ, ಸವಿತಾ ಮಲ್ಲೇಶ್, ಜಗದೀಶ್ ಸೂರ್ಯ, ಸೋಸಲೆ ಸಿದ್ದರಾಜು, ಡಾ. ಲಕ್ಷ್ಮೀನಾರಾಯಣ್, ಜಗನ್ನಾಥ್, ಅರವಿಂದ ಶರ್ಮಾ, ಎನ್. ಭಾಸ್ಕರ್, ನೆಲೆ–ಹಿನ್ನೆಲೆ ಗೋಪಾಲ ಕೃಷ್ಣ, ಸಾಹಿತಿ ಬಿ.ಎಂ. ಪ್ರವೀಣ್, ಹರೀಶ್‌ಕುಮಾರ್, ಪಿ. ರಾಜು, ಎನ್.ಎಸ್. ವೇಣು ಗೋಪಾಲ್, ನಟರಾಜ್, ಶಿವಣ್ಣ ಸಿಎಂ ಪ್ರತಾಪ್, ವಿಜಯ್ ಇನ್ನಿತರರಿದ್ದು ಅನೇಕ ಸಲಹೆಗಳನ್ನು ನೀಡಿದರು.

ಕುಂದು ಕೊರತೆ ಸಭೆಯಾಗಿ ಮಾರ್ಪಟ್ಟ ಬಜೆಟ್ ಸಭೆ

ರಸ್ತೆ ಬದಿ ವ್ಯಾಪಾರ ತೆರವುಗೊಳಿಸಿ, ನಿರುಪಯುಕ್ತ ತರಕಾರಿ ಮಾರುಕಟ್ಟೆ ಬೇಡ, ಫುಟ್‌ಪಾತ್ ವ್ಯಾಪಾರಿಗಳಿಗೆ ಲೈಸೆನ್ಸ್ ಕೊಡಬೇಡಿ, ಅಜೆಂಡಾವಿಲ್ಲದ ಮೀಟಿಂಗ್ ಯಾಕೆ....



ತಿ.ನರಸೀಪುರ ಪುರಸಭೆ ವತಿಯಿಂದ ಸ್ತ್ರೀ ಶಕ್ತಿ ಭವನದಲ್ಲಿ ಕರೆಯಲಾಗಿದ್ದ 2024-25ನೇ ಸಾಲಿನ ಆಯ-ವ್ಯಯ ಪೂರ್ವಭಾವಿ ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ ಮಾತನಾಡಿದರು.

ಪ್ರತಿ ವಾರ್ಡ್ ಅಭಿವೃದ್ಧಿಗೆ ತಲಾ 50 ಲಕ್ಷ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಮಹದೇವಪ್ಪನವರು ಒಂದು ತಿಂಗಳ ಹಿಂದೆ ಪುರಸಭೆ ಇಂಜಿನಿಯರ್ ಹಾಗೂ ಸದಸ್ಯರನ್ನು ಕರೆಸಿ ಪ್ರತಿ ವಾರ್ಡ್ ಅಭಿವೃದ್ಧಿಗೆ ತಲಾ 50 ಲಕ್ಷ ರೂ. ಗಳಂತೆ 13 ರಿಂದ 14 ಕೋಟಿ ಅನುದಾನ ಬಿಡುಗಡೆ ಮಾಡಿಕೊಟ್ಟಿದ್ದಾರೆ.ಮುಂದಿನ 15 ದಿನದಲ್ಲಿ ಅನುಮೋದನೆ ಸಿಗಲಿದೆ. -ಸೋಮು, ಮಾಜಿ ಅಧ್ಯಕ್ಷ

ತಿ.ನರಸೀಪುರ, ಫೆ.14- ಪಟ್ಟಣದ ಸೌಂದರ್ಯ ಕಾಪಾಡಲು ರಸ್ತೆಬದಿ ವ್ಯಾಪಾರವನ್ನು ತೆರವುಗೊಳಿಸಿ, ನಿರುಪಯುಕ್ತವಾಗಿರುವ ತರಕಾರಿ ಮಾರುಕಟ್ಟೆ ಬೇಡ, ಫುಟ್‌ಪಾತ್ ವ್ಯಾಪಾರಿಗಳಿಗೆ ಲೈಸೆನ್ಸ್ ನೀಡುವುದು ಬೇಡ, ಅಜೆಂಡಾ ಸಿದ್ಧಪಡಿಸದೇ ಮೀಟಿಂಗ್ ಯಾಕಾಗಿ ಕರೆದಿದ್ದೀರಿ, ಪಿಟೀಲು ಚೌಡಯ್ಯ ಸ್ಮಾರಕ ಭವನಕ್ಕೆ ಮೀಸಲಿಟ್ಟಿರುವ ಜಾಗದಲ್ಲಿ ತರಕಾರಿ ವ್ಯಾಪಾರಿಗಳಿಗೆ ಅವಕಾಶ ಕೊಡಿ, ಹದಗೆಟ್ಟ ರಸ್ತೆ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಿ, ಉದ್ಯಾನವನಗಳು ಹಾಗೂ ಸ್ಮಶಾನ ಅಭಿವೃದ್ಧಿಪಡಿಸಲು ಅನುದಾನ ಮೀಸಲಿಡಿ.

ಇದು ತಿ.ನರಸೀಪುರ ಸ್ತ್ರೀ ಶಕ್ತಿ ಭವನದಲ್ಲಿ ಪುರಸಭೆ ವತಿಯಿಂದ ಆಯೋಜಿಸಿದ್ದ 2024-25ನೇ ಸಾಲಿನ ಆಯ-ವ್ಯಯ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರು, ಮುಖಂಡರು, ಮಾಜಿ ಸದಸ್ಯರಿಂದ ಕೇಳಿ ಬಂದ ಸಲಹೆ ಹಾಗೂ ದೂರುಗಳು.

ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಆಯ-ವ್ಯಯ ಪೂರ್ವಭಾವಿ ಸಭೆ, ಕುಂದು ಕೊರತೆ ಸಭೆಯಾಗಿ ಮಾರ್ಪಟ್ಟಿತು.

ಸಭೆಯಲ್ಲಿ ಕೆಲ ಸದಸ್ಯರು ಸಭೆಯ ಉದ್ದೇಶ ಅರಿಯದೇ ಮುಖ್ಯಾಧಿಕಾರಿಗಳನ್ನು ದೂರುವುದಕ್ಕೆ ವೇದಿಕೆಯಾಗಿ ಬಳಸಿಕೊಂಡರು. ಸಾಮಾನ್ಯವಾಗಿ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಹಿಂದಿನ ಬಜೆಟ್‌ನಲ್ಲಿನ ಮುಖ್ಯಾಂಶಗಳ ಆಧಾರದ ಮೇಲೆ ಮುಂದಿನ ಬಜೆಟ್ ಮಂಡನೆ ವೇಳೆ ಯಾವ ಕಾರ್ಯಕ್ರಮಕ್ಕೆ ಎಷ್ಟು ಅನುದಾನ ಮೀಸಲಿಡಬೇಕು. ಪುರಸಭೆಗೆ ಆದಾಯ ಕ್ರೋಢೀಕರಣಕ್ಕೆ ಅನುಸರಿಸಬೇಕಾದ ಮಾರ್ಗಗಳು ಸೇರಿದಂತೆ ಮತ್ತಿತರೆ ವಿಷಯಗಳ ಬಗ್ಗೆ ಸಲಹೆ ಸೂಚನೆ ನೀಡಬೇಕು. ಆದರೆ ಇಂದು ನಡೆದ ಪೂರ್ವಭಾವಿ ಸಭೆಯಲ್ಲಿ ದೂರು, ಕುಂದು ಕೊರತೆ ಹೇಳಿಕೊಳ್ಳುವುದಕ್ಕಷ್ಟೇ ಮೀಸಲಾದಂತೆ ಕಂಡು ಬಂದಿತು.

ಮೊದಲಿಗೆ ಮುಖಂಡ ಟಿ.ಎನ್.ಗುರುಪ್ರಸಾದ್ ಮಾತನಾಡಿ, ಪಟ್ಟಣದೆಲ್ಲೆಡೆ ರಸ್ತೆ ಬದಿ ವ್ಯಾಪಾರಿಗಳು ರಸ್ತೆ ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ಸಾರ್ವಜನಿಕ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದೆ. ರಸ್ತೆ ತುಂಬೆಲ್ಲಾ ಫಾಸ್ಟ್‌ಫುಡ್ ತಳ್ಳುಗಾಡಿಗಳ ಹಾವಳಿ ಮಿತಿ ಮೀರಿದೆ. ಇವರಿಂದ ಪುರಸಭೆಗೆ ಕಂದಾಯ ಕಟ್ಟುವ ಹೋಟೆಲ್ ಮಾಲೀಕರಿಗೆ ತೀವ್ರ ನಷ್ಟ ಉಂಟಾಗುತ್ತಿದೆ. ನೀವು ಊರಿನ ಅಂದ ಕಾಪಾಡುವ ಕೆಲಸ ಮಾಡಬೇಕು. ಫುಟ್‌ಪಾತ್ ಅನ್ನು ಪಂಚರ್ ಅಂಗಡಿಗಳು, ವೆಲ್ಡಿಂಗ್ ಷಾಪ್, ಟೀ ಕ್ಯಾಂಟಿನ್‌ಗಳು ಆವರಿಸಿಕೊಂಡಿದ್ದು, ಕೂಡಲೇ ಅವುಗಳನ್ನು ತೆರವುಗೊಳಿಸಿ ಸಾರ್ವಜನಿಕ ಓಡಾಟಕ್ಕೆ ಮುಕ್ತವಾದ ವಾತಾವರಣ ನಿರ್ಮಿಸಿ ಎಂದು ಸಲಹೆ ನೀಡಿದರು.

ಪುರಸಭೆ ಮಾಜಿ ಅಧ್ಯಕ್ಷ ಸೋಮು ಮಾತನಾಡಿ, ಇನ್ನು ಮುಂದೆ ಬೀದಿ ಬದಿ ವ್ಯಾಪಾರಿಗಳಿಗೆ ಲೈಸೆನ್ಸ್ ಕೊಡಬೇಡಿ ಎಂದು ಮುಖ್ಯಾಧಿಕಾರಿಗಳಿಗೆ ತಿಳಿಸಿ, ಪುರಸಭೆಯಲ್ಲಿ ಖಾತೆ, ಇ-ಸ್ವತ್ತು ಮಾಡಿಸುವ ಸಾರ್ವಜನಿಕರಿಗೆ ನೇರವಾಗಿ ಕಚೇರಿಯಲ್ಲಿಯೇ ಕೆಲಸ ಮಾಡಿಸಲು ಹಾಗೂ ಮಧ್ಯವರ್ತಿಗಳಿಗೆ ಅವಕಾಶ ಕಲ್ಪಿಸುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಿ ಎಂದು ಸಲಹೆಯಿತ್ತರು.

ಮಾಜಿ ಸದಸ್ಯ ಶ್ರೀರಾಂಪುರ ಪ್ರಕಾಶ್ ಮಾತನಾಡಿ, ನೀವು ಯಾವುದೇ ಅಜೆಂಡಾ ಸಿದ್ಧಪಡಿಸಿಕೊಳ್ಳದೇ ಮೀಟಿಂಗ್ ಯಾಕೆ ಕರೆದಿದ್ದೀರಿ, ಪುರಸಭೆಯಿಂದ ಮಳಿಗೆಯನ್ನು ಹರಾಜು ಮೂಲಕ ನೀಡಲಾಗಿದೆ. ಆದರೆ ಮಳಿಗೆ ಪಡೆದವರು ಅದನ್ನು ಬೇರೆಯವರಿಗೆ ಬಾಡಿಗೆ ಕೊಟ್ಟು ತಾವು ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುತ್ತಿದ್ದಾರೆ ಎಂದರು.

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಪಿಟೀಲು ಚೌಡಯ್ಯ ಸ್ಮಾರಕಕ್ಕೆ ಮೀಸಲಿಟ್ಟಿರುವ ಜಾಗವನ್ನು ಫುಟ್‌ಪಾತ್ ವ್ಯಾಪಾರದಾರರಿಗೆ ನೀಡಿ. ಪುರಸಭೆಯಿಂದ ತರಕಾರಿ ಮಾರುಕಟ್ಟೆ ನಿರ್ಮಾಣ ಮಾಡಿ 6 ವರ್ಷಗಳಾಗಿದೆ. ಇನ್ನೂ ಅದನ್ನು ಉದ್ಘಾಟನೆ ಮಾಡಿಲ್ಲ. ಇದರಿಂದ ಕೋಟ್ಯಂತರ ರೂ.ಗಳ ನಷ್ಟ ಪುರಸಭೆಗಾಗಿದೆ. ಪುರಸಭೆ ವ್ಯಾಪ್ತಿಯಲ್ಲಿ ರಸ್ತೆಗಳು ಕಿರಿದಾಗಿದ್ದು, ಜನಸಂಖ್ಯೆ ಹೆಚ್ಚಿದೆ. ಜೊತೆಗೆ ವ್ಯಾಪಾರಸ್ಥರು ಹೆಚ್ಚಿದ್ದಾರೆ. ಹಾಗಾಗಿ ಸಂಚಾರಕ್ಕೆ ತೊಂದರೆ ಉಂಟಾಗಿದೆ ಎಂದು ಅಭಿಪ್ರಾಯ ಮಂಡಿಸಿದರು.

ದಸಂಸ ಆಲಗೂಡು ಶಿವ ಕುಮಾರ್ ಮಾತನಾಡಿ, ಪುರಸಭೆ ಮಾರುಕಟ್ಟೆಯನ್ನು ವೈಜ್ಞಾನಿಕ ರೀತಿಯಲ್ಲಿ ಕಟ್ಟದೇ ಹಂದಿ ಗೂಡಿನಂತೆ ಕಟ್ಟಿರುವುದರಿಂದ, ಅಲ್ಲಿ ಗಾಳಿ, ಬೆಳಕಿನ ವ್ಯವಸ್ಥೆ ಇಲ್ಲವಾಗಿ ವ್ಯಾಪಾರಸ್ಥರು ಅಲ್ಲಿಗೆ ಹೋಗುತ್ತಿಲ್ಲ. ಆಲಗೂಡು ಗ್ರಾಮದಲ್ಲಿ ಸ್ಮಶಾನ ಅಭಿವೃದ್ಧಿಪಡಿಸಿಲ್ಲ. ಗಿಡ-ಗಂಟಿಗಳು ಬೆಳೆದು ಸ್ಮಶಾನ ಅರಣ್ಯದಂತಾಗಿದೆ, ಸಾಮೂಹಿಕ ಶೌಚಾಲಯ ಕಟ್ಟಿದ್ದೀರಿ ಆದರೆ ಅದನ್ನು ಸಾರ್ವಜನಿಕ ಬಳಕೆಗೆ ನೀಡಿಲ್ಲ, ಪಟ್ಟಣ ಪ್ರವೇಶಿಸುವ ಜಾಗದಲ್ಲಿ ಸ್ವಾಗತ ಕಮಾನು ನಿರ್ಮಿಸಿಲ್ಲ ಎಂದು ದೂರಿದರು. ಸರ್ಕಾರಿ ಪದವಿ ಪೂರ್ವ ಕಾಲೇಜು ಬಳಿ ಡಾ.ಬಿ.ಆರ್.ಅಂಬೇಡ್ಕರ್ ವೃತ್ತ ಮಾಡಿದ್ದೀರಿ, ಅದನ್ನು ಅಭಿವೃದ್ಧಿಪಡಿಸಿ ಅಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸುವಂತೆ ಸಲಹೆಯಿತ್ತರು. ಕರೋಹಟ್ಟಿ ಮಹದೇವಯ್ಯ, ಗ್ರಾಪಂ ಮಾಜಿ ಸದಸ್ಯ ದಿವಾಕರ್ ಮಾತನಾಡಿ ಸಲಹೆ ನೀಡಿದರು.

ಈ ವೇಳೆ ಮಾತನಾಡಿದ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ ನಾನು ಪುರಸಭೆಯಲ್ಲಿ ಅಧಿಕಾರ ವಹಿಸಿಕೊಂಡ ವೇಳೆ 1.20 ಕೋಟಿ ಕಂದಾಯ ಬಾಕಿ ಉಳಿದುಕೊಂಡಿತ್ತು. ಕೇವಲ 10 ತಿಂಗಳ ಅವಧಿಯಲ್ಲಿ ಪರಿಶ್ರಮ ಪಟ್ಟು 2 ಕೋಟಿ ರೂ.ಕಂದಾಯ ವಸೂಲಾತಿ ಮಾಡಿದ್ದೇನೆ. ಬಾಕಿ 1 ಕೋಟಿ ರೂ. ವಸೂಲಾಗಬೇಕಿದ್ದು, ನೀವೆಲ್ಲರೂ ಸಹಕಾರ ನೀಡಿದರೆ ಅದನ್ನೂ ವಸೂಲಾತಿ ಮಾಡುತ್ತೇನೆ ಎಂದರು. ಆಲಗೂಡು ಗ್ರಾಮದ ಸ್ಮಶಾನ ಅಭಿವೃದ್ಧಿಗೆ ಸಂಬಂಧಿಸಿದಂತೆ ಖುದ್ದಾಗಿ ಭೇಟಿ ನೀಡಿ ಸಮಸ್ಯೆ ಬಗೆಹರಿಸಿಕೊಡುತ್ತೇನೆ. ಪಟ್ಟಣದಲ್ಲಿರುವ ಉದ್ಯಾನವನಗಳ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ ಎಂದರು. ಸಾರ್ವಜನಿಕರ ಸಲಹೆಯನ್ನು ಪರಿಗಣಿಸಿ ಬಜೆಟ್‌ನಲ್ಲಿ ಪಟ್ಟಣದ ಅಭಿವೃದ್ಧಿಗೆ ಅನುದಾನ ಹಂಚಿಕೆ ಮಾಡಲು ಪ್ರಯತ್ನಪಡುವುದಾಗಿ ಭರವಸೆ ನೀಡಿದರು.

ಪುರಸಭೆಯ ವ್ಯವಸ್ಥಾಪಕ ಮಹೇಂದ್ರ, ಸಮುದಾಯಾಧಿಕಾರಿ ಮಹದೇವು, ರಾಜೇಂದ್ರ, ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್, ಪುರಸಭಾ ಸದಸ್ಯರುಗಳಾದ ತುಂಬಲ ಪ್ರಕಾಶ್, ಎಸ್.ಕೆ.ಕಿರಣ್, ಮೆಡಿಕಲ್ ನಾಗರಾಜ್, ಎಲ್.ಮಂಜುನಾಥ್, ಸಿಸ್ಟಮ್ ಸಿದ್ದು, ಮುಖಂಡರಾದ ಈ.ರಾಜು, ಕಸಾಪ ಅಧ್ಯಕ್ಷ ಪುಟ್ಟಸ್ವಾಮಿ, ಫೈನಾನ್ಸ್ ರಾಜು, ಸೇವಾಶ್ರಯ ಫೌಂಡೇಷನ್ ಅಧ್ಯಕ್ಷ ಮಣಿಕಂಠರಾಜ್ ಗೌಡ, ಬೆಳಕು ಫೌಂಡೇಷನ್‌ನ ಅರವಿಂದ್, ರಾಜು ಮತ್ತಿತರರಿದ್ದರು.

ಫೆ.17, ಜಿಲ್ಲಾಮಟ್ಟದ ದೇಹದಾರ್ಢ್ಯ ಸ್ಪರ್ಧೆ

ಹೆಚ್.ಡಿ.ಕೋಟೆ, ಫೆ.14- ಪಟ್ಟಣದ ಅಂಬೇಡ್ಕರ್ ಭವನದ ಮುಂಭಾಗ ಫೆ.17 ರಂದು ಯಶು ಹೆಲ್ತ್ ಪಾಯಿಂಟ್ ಮಲ್ಟಿ ಜಿಮ್ ವತಿಯಿಂದ 14ನೇ ವರ್ಷದ ತಾಲೂಕು ಮತ್ತು ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಜಿಮ್ ಮಾಲೀಕ ಯಶವಂತ ತಿಳಿಸಿದರು.

ಹೆಚ್.ಡಿ. ಕೋಟೆ ಪಟ್ಟಣದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕಳೆದ 13 ವರ್ಷಗಳಿಂದ ತಾಲೂಕು ಮತ್ತು ಜಿಲ್ಲಾಮಟ್ಟದ ದೇಹದಾರ್ಢ್ಯ ಸ್ಪರ್ಧೆಯನ್ನು ಆಯೋಜಿಸುತ್ತ ಬರಲಾಗಿದೆ ಅದರಂತೆ ಈ ಬಾರಿಯೂ ಸಹ 14ನೇ ವರ್ಷದ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದರು.

ತಾಲೂಕು ಮಟ್ಟದಲ್ಲಿ ಮೊದಲ ಸ್ಥಾನ ಪಡೆದ ಸ್ಪರ್ಧಾಳುವಿಗೆ ಮಿಸ್ಟರ್ ಕೋಟೆ ಬಿರುದು, ಹತ್ತು ಸಾವಿರ ನಗದು ಮತ್ತು ಟ್ರೋಫಿ, ಉಳಿದ ಮೂವರಿಗೆ ಟ್ರೋಫಿ ಮತ್ತು ತಲಾ ಎರಡು ಸಾವಿರ ರೂ ಹಣವನ್ನು ಪ್ರಶಸ್ತಿ ರೂಪದಲ್ಲಿ ನೀಡಲಾಗುವುದು ಎಂದ ಅವರು, ಜಿಲ್ಲಾ ಮಟ್ಟದಲ್ಲಿ ವಿಜೇತರಾದವರಿಗೆ ಮಿಸ್ಟರ್ ಮೈಸೂರು ಬಿರುದು, ಹತ್ತು ಸಾವಿರ ನಗದು ಮತ್ತು ಟ್ರೋಫಿ. ಉಳಿದ ಮೂವರಿಗೆ ಟ್ರೋಫಿ ಮತ್ತು ತಲಾ ಎರಡು ಸಾವಿರ ರೂ. ಹಣವನ್ನು ಪ್ರಶಸ್ತಿ ರೂಪದಲ್ಲಿ ನೀಡಲಾಗುವುದು ಎಂದರು. ಇದೇ ಸಂದರ್ಭದಲ್ಲಿ ಎಚ್.ಡಿ. ಕೋಟೆ ಶಾಸಕರಾದ ಅನಿಲ್ ಚಿಕ್ಕಮಾದು ಅವರು ಜಂಗಲ್ ಲಾಡ್ಜ್ ಮತ್ತು ಅರಣ್ಯ ವಿಹಾರಧಾಮಗಳ ಅಧ್ಯಕ್ಷರಾದ ಹಿನ್ನೆಲೆ ಅವರಿಗೆ ಮತ್ತು ಅಂತರ ರಾಷ್ಟ್ರೀಯ ಕ್ರೀಡಾಪಟು ಸರಗೂರಿನ ನಾಗೇಂದ್ರರವರಿಗೆ ಅಭಿನಂದನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮಕ್ಕೆ ಜೆಡಿಎಸ್ ಮುಖಂಡ ಮಾಜಿ ಶಾಸಕ ಚಿಕ್ಕಣ್ಣ, ಬಿಜೆಪಿ ಮುಖಂಡ ಕೃಷ್ಣನಾಯಕ, ಕಾಂಗ್ರೆಸ್ ಮುಖಂಡ ಸತೀಶ್‌ಗೌಡ, ಜೆಡಿಎಸ್‌ನ ಜಯಪ್ರಕಾಶ್ ಚಿಕ್ಕಣ್ಣ, ಒಕ್ಕಲಿಗರ ಹಿತರಕ್ಷಣಾ ಸಮಿತಿಯ ಯುವ ಅಧ್ಯಕ್ಷ ಸತೀಶ್‌ಗೌಡ, ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಆದಿಕರ್ನಾಟಕ ಮಹಾಸಭಾದ ತಾಲೂಕು ಅಧ್ಯಕ್ಷ ಎಚ್.ಸಿ. ನರಸಿಂಹ ಮೂರ್ತಿ, ಆರಕ್ಷಕ ನಿರೀಕ್ಷಕ ಶಬ್ಬೀರ್ ಹುಸೇನ್, ಪುರಸಭಾ ಮುಖ್ಯಾಧಿಕಾರಿ ಸುರೇಶ್ ಸೇರಿದಂತೆ ಎಲ್ಲಾ ಪುರಸಭಾ ಸದಸ್ಯರು ಭಾಗವಹಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಪುರಸಭಾ ಸದಸ್ಯ ಪ್ರೇಮ್ ಸಾಗರ್, ಪೈಂಟ್ ನಾಗೇಗೌಡ, ರವಿಕುಮಾರ್ ಆರಾಧ್ಯ ಇದ್ದರು.

ಕೆ.ಆರ್.ನಗರ: ಮತ್ತೊಮ್ಮೆ ಮೋದಿ-2024 ಗೋಡೆ ಬರಹ ಕಾರ್ಯಕ್ರಮಕ್ಕೆ ಚಾಲನೆ



ಚೌಕಳ್ಳಿ ಹಾಗೂ ಇನ್ನಿತರ ಬೂತ್‌ಗಳಲ್ಲಿ ಗೋಡೆ ಬರಹ ಕಾರ್ಯಕ್ರಮಕ್ಕೆ ಬಿಜೆಪಿ ಜಿಲ್ಲಾ ಅಧ್ಯಕ್ಷ ಎಲ್.ಆರ್ ಮಹದೇವಸ್ವಾಮಿ ಚಾಲನೆ ನೀಡಿದರು.

ಕೆ.ಆರ್.ನಗರ, ಫೆ.14- ಭಾರತೀಯ ಜನತಾ ಪಾರ್ಟಿ ಜಿಲ್ಲಾ ಗ್ರಾಮಾಂತರ ವತಿಯಿಂದ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರೊಂದಿಗೆ ಜಿಲ್ಲಾ ಅಧ್ಯಕ್ಷರಾದ ಎಲ್.ಆರ್ ಮಹದೇವಸ್ವಾಮಿ ಅವರು ಮತ್ತೊಮ್ಮೆ ಮೋದಿ-2024 ಗೋಡೆ ಬರಹ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕ್ಷೇತ್ರದ ಚೌಕಳ್ಳಿ ಹಾಗೂ ಇನ್ನಿತರ ಬೂತ್‌ಗಳಲ್ಲಿ ಗೋಡೆ ಬರಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನರೇಂದ್ರ ಮೋದಿಜಿ ಅವರು ನೂರಾರು ಯೋಜನೆಗಳನ್ನು ದೇಶದ ಎಲ್ಲಾ ವರ್ಗದವರಿಗೂ ನೀಡಿ ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಬೇಕೆಂಬ ನಿಟ್ಟಿನಲ್ಲಿ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದ್ದು, ಮೋದಿಜಿ ಅವರನ್ನು ಭಾರತ ಸೇರಿದಂತೆ ಎಲ್ಲಾ ದೇಶಗಳೂ ಗೌರವಿಸುತ್ತಿವೆ. ಅದರಲ್ಲೂ ಇಂದು ಅಬುದಾಬಿಯಲ್ಲಿ ಅಲ್ಲಿನ ನಾಗರಿಕರ ಸಭೆಯನ್ನುದ್ದೇಶಿಸಿ ಮಾತನಾಡಿದ ಮೋದಿಜಿಯವರು ಭಾರತ ನಿಮ್ಮನ್ನು ಗೌರವಿಸುತ್ತದೆ ಎಂಬ 'ಕನ್ನಡ ಭಾಷೆ'ಯಲ್ಲಿ ಮಾತನಾಡಿರುವುದು ನಮ್ಮ ನಾಡು ನುಡಿಗೆ ಸಂದ ಗೌರವವಾಗಿರುತ್ತದೆ ಎಂದರು.

ಮೋದಿಜಿಯವರು ಒಬ್ಬ ಪ್ರಜ್ಞಾವಂತ ರಾಜಕಾರಣಿಯೂ ಹೌದು. ದೇಶದ ಸರ್ವತೋಮುಖ ಅಭಿವೃದ್ಧಿ, ನೀತಿ, ನಿಯಮ, ನಾಗರಿಕ ಸೇವಾ ಕಾರ್ಯಗಳು ಇವೆಲ್ಲವನ್ನೂ ತಿಳಿದ ಮಹಾನ್ ಜ್ಞಾನಿಯೂ ಹೌದೆಂದು ಬಣ್ಣಿಸಬಹುದಾಗಿದೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಿರ್ಲೆ ಶ್ರೀನಿವಾಸ್ ಗೌಡ, ಕ್ಷೇತ್ರದ ಅಧ್ಯಕ್ಷ ಮಂಜುನಾಥ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ್ ಜಯರಾಮೇಗೌಡ, ಗೋಡೆ ಬರಹ ಸಂಚಾಲಕ ಪರೀಕ್ಷಿತ್‌ರಾಜೇ ಅರಸ್, ಸಾರಾ ತಿಲಕ್, ಮಾರ್ಕಂಡಯ್ಯ, ಧರ್ಮ, ಅನಿಲ್, ಗುಂಡ, ಸ್ವಪ್ನ ನಾಗೇಶ್, ಕೃಷ್ಣಯ್ಯ, ಬೂತ್ ಅಧ್ಯಕ್ಷರು, ವಾರ್ಡ್ ಅಧ್ಯಕ್ಷರು, ಪುರಸಭಾ ಸದಸ್ಯರುಗಳು ಇನ್ನೂ ಮುಂತಾದ ಬಿಜೆಪಿ ಮುಖಂಡರುಗಳು, ಕಾರ್ಯಕರ್ತರಿದ್ದರು.

ವಿಜೃಂಭಣೆಯ ವರ್ಧಂತಿ ಪಲ್ಲಕ್ಕಿ ಉತ್ಸವ



ಸರಗೂರು ನಾಯಕ ಸಮಾಜದ ವತಿಯಿಂದ ಶ್ರೀ ಚಿಕ್ಕದೇವಮ್ಮನವರ 47ನೇ ವರ್ಷದ ವರ್ಧಂತಿ ಪೂಜಾ ಮಹೋತ್ಸವ ಹಾಗೂ ಪಲ್ಲಕ್ಕಿ ಉತ್ಸವ ಮೆರವಣಿಗೆ ನಡೆಸಲಾಯಿತು.

ಸರಗೂರು, ಫೆ.14- ಸರಗೂರಿನಲ್ಲಿ ವಿಜೃಂಭಣೆಯ ಶ್ರೀ ಚಿಕ್ಕದೇವಮ್ಮನವರ ವರ್ಧಂತಿ ಪಲ್ಲಕ್ಕಿ ಉತ್ಸವ ನಡೆಯಿತು. ಅದ್ದೂರಿಯಾಗಿ ನಡೆದ ಮೆರವಣಿಗೆಯನ್ನು, ಅಕ್ಕಪಕ್ಕದ ಗ್ರಾಮಗಳಿಂದ ತಂಡೋಪತಂಡವಾಗಿ ಆಗಮಿಸಿದ ಭಕ್ತರು ತಾಯಿಯ ದರ್ಶನ ಪಡೆದು ಪುನೀತರಾದರು.

ಸರಗೂರು ಪಟ್ಟಣದಲ್ಲಿ ಇಂದು ನಾಯಕ ಸಮಾಜದ ವತಿಯಿಂದ ಶ್ರೀ ಚಿಕ್ಕದೇವಮ್ಮನವರ 47ನೇ ವರ್ಷದ ಪೂಜಾ ಮಹೋತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಚಿಕ್ಕದೇವಮ್ಮನವರ ಹಬ್ಬವನ್ನು 5 ದಿನಗಳವರೆಗೆ ಕಳೆದ 46 ವರ್ಷದಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಪಟ್ಟಣವನ್ನು ತಳಿರು ತೋರಣ, ರಂಗೋಲಿ ಬಿಡಿಸಿ, ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ನೂತನವಾಗಿ ನವೀಕೃತಗೊಂಡಿರುವ ದೇವಾಲಯದಲ್ಲಿ ಬೆಳಗಿನ ಜಾವದಿಂದ ಹೋಮ ಹವನ ನಡೆಸಿ ಗಣಪತಿ ಹೋಮ ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ನವಗ್ರಹ ಹೋಮ, ದುರ್ಗಹೋಮ, ಕುಂಕುಮಾರ್ಚನೆ ಪೂಜಾ ಕೈಂಕರ್ಯಗಳು ಜರುಗಿದವು.

ಬೆಳಗ್ಗೆ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ನಡೆಸಿ ಚಿಕ್ಕದೇವಮ್ಮನವರ ಉತ್ಸವ ಮೂರ್ತಿಯನ್ನು ವಿವಿಧ ಹೂವುಗಳಿಂದ ಅಲಂಕರಿಸಿ, ಪಲ್ಲಕ್ಕಿ ಮೇಲೆ ಅಮ್ಮನವರನ್ನು ಕೂರಿಸಿ ಪೂರ್ಣ ಕುಂಭ ಕಳಸದೊಂದಿಗೆ ಪಟ್ಟಣದ ಪ್ರಮುಖ ರಸ್ತೆ ಮುಖಾಂತರ ಮಂಗಳವಾದ್ಯ, ಎತ್ತುಗಳ ಮೆರವಣಿಗೆ, ಸತ್ತಿಗೆ, ಬ್ಯಾಂಡ್‌ಸೆಟ್, ಚಂಡೆ, ವೀರಗಾಸೆ ಕುಣಿತ ಹಾಗೂ ಕಲಾತಂಡಗಳ ಜೊತೆಯಲ್ಲಿ ಮೆರವಣಿಗೆ ನಡೆಸಲಾಯಿತು, ಉತ್ಸವವು ದೇವಾಲಯಕ್ಕೆ ತಲುಪಿದ ನಂತರ ವಿಶೇಷ ಪೂಜೆ ನಡೆಸಿ ಮಹಾಮಂಗಳಾರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು.

ಮೆರವಣಿಗೆಯಲ್ಲಿ ಹೆಣ್ಣು ಮಕ್ಕಳು 101 ಪೂರ್ಣ ಕಳಸಹೊತ್ತು ಹರಕೆ ತೀರಿಸಿದರು. ಭಕ್ತಾದಿಗಳು ದಾರಿ ಉದ್ದಕ್ಕೂ ಮಜ್ಜಿಗೆ, ಪಾನಕ, ಕೋಸುಂಬರಿ ವಿತರಿಸಿದರು. ಮೆರವಣಿಗೆಯಲ್ಲಿ ನಾಯಕ ಸಮಾಜದ ಯಜಮಾನರು, ಮುಖಂಡರು ಹಾಗೂ ನಾಯಕ ಸಮಾಜದ ವಿವಿಧ ಸಂಘ ಸಂಸ್ಥೆಗಳು, ಮಹಿಳಾ ಸಂಘದವರು ಭಾಗವಹಿಸಿದ್ದರು ಪೂಜಾಕಾರ್ಯವನ್ನು ಪುರೋಹಿತ್ ಹರೀಶ್, ಸುಕೃತ್ ನೆರವೇರಿಸಿದರು.

ಪತ್ರಕರ್ತರಿಗೆ ಅಪಘಾತ ವಿಮೆ ಪಾಲಿಸಿ ಬಾಂಡ್ ವಿತರಣೆ

ನಂಜನಗೂಡು, ಫೆ.14- ಕೇಂದ್ರ ಸರ್ಕಾರ ಅಂಚೆ ಇಲಾಖೆಯಲ್ಲಿ ಕಡಿಮೆ ದರದ ಅಪಘಾತ ವಿಮೆ ಯೋಜನೆ ಜಾರಿಗೊಳಿಸಿದ್ದು, 10 ಲಕ್ಷ ರೂ.ವರೆಗೆ ನೆರವು ಪಡೆಯಬಹುದಾಗಿದೆ. ಪ್ರತಿಯೊಬ್ಬರೂ ಇದರ ಪ್ರಯೋಜನ ಪಡೆಯಬೇಕು ಎಂದು ನಂಜನಗೂಡು ಅಂಚೆ ಕಚೇರಿ ವಿಭಾಗೀಯ ಅಧೀಕ್ಷಕ ಗೋವಿಂದರಾಜು ತಿಳಿಸಿದರು.

ನಗರದ ತಾಲೂಕು ಪತ್ರಕರ್ತರ ಭವನದಲ್ಲಿ ನಡೆದ ಅಪಘಾತ ವಿಮೆ ಪಾಲಿಸಿ ಬಾಂಡ್ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇವಲ 399 ರೂ.ಗಳ ವಾರ್ಷಿಕ ಅಪಘಾತ ವಿಮೆಗೆ 10 ಲಕ್ಷ ರೂ. ನೆರವು ಪಡೆಯುವ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಇದಕ್ಕೆ ಬೇಡಿಕೆ ಹೆಚ್ಚಾಗುತ್ತಿದ್ದಂತೆ ಪ್ರೀಮಿಯಂ ಮೊತ್ತವನ್ನು 520 ರೂ.ಗಳಿಗೆ ಹೆಚ್ಚಿಸಲಾಗಿದೆ. ಎಲ್ಲಾ ವರ್ಗದ ಜನರು ಈ ಯೋಜನೆಯ ಪ್ರಯೋಜನ ಪಡೆಯಬಹುದಾಗಿದ್ದು, ಬಡ, ಮಧ್ಯಮ ವರ್ಗದ ಜನರಿಗೆ ವರದಾನವಾಗಿದೆ ಎಂದರು. ವಿಭಾಗೀಯ ಅಂಚೆ ಉಪ ಅಧೀಕ್ಷಕ ರಾಜು ಕಲ್ಲೇಶ್ ಮಾತನಾಡಿ, ಎಲ್ಲಾ ಅಗತ್ಯ ಸೇವೆಗಳು ಅಂಚೆ ಕಚೇರಿಯಲ್ಲಿ ಲಭ್ಯವಿದೆ. ಹಣ ಉಳಿತಾಯ, ವಿಮೆ ಸೇರಿದಂತೆ ಎಲ್ಲಾ ವಯೋಮಾನದವರಿಗೂ ಅನುಕೂಲವಾಗುವ ವಿಶೇಷ ಯೋಜನೆಗಳನ್ನು ರೂಪಿಸಲಾಗಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಪತ್ರಕರ್ತರಿಗೆ ಅಪಘಾತ ವಿಮೆ ಪಾಲಿಸಿ ಬಾಂಡ್ ವಿತರಿಸಲಾಯಿತು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯಕಾರಿಣಿ ಸದಸ್ಯರಾಗಿ ಅವಧಿ ಪೂರ್ಣಗೊಳಿಸಿದ ಹುಲ್ಲಹಳ್ಳಿ ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಅಭ್ಯುದ್ಯಯ ಸಹಕಾರ ಸಂಘದ ಅಧ್ಯಕ್ಷ ಕೆ.ದೀಪಕ್, ನಂಜನಗೂಡು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಗಂಗಾಧರ್, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಸತ್ಯನಾರಾಯಣ ಉಪಸ್ಥಿತರಿದ್ದರು.

ಕಲಾಪದಿಂದ ಹೊರಗುಳಿದು ವಕೀಲರ ಪ್ರತಿಭಟನೆ



ನ್ಯಾಯಾಲಯದ ಕಲಾಪದಿಂದ ಹೊರಗುಳಿದಿರುವ ಹುಣಸೂರು ವಕೀಲರು.

ಹುಣಸೂರು, ಫೆ.14- ರಾಮನಗರದ ಐಜೂರು ಪೊಲೀಸರು ವಕೀಲರ ಸಂಘದ 45 ಮಂದಿ ವಿರುದ್ಧ ಸುಳ್ಳು ಎಫ್‌ಐಆರ್ ದಾಖಲಿಸಿರುವುದನ್ನು ಖಂಡಿಸಿ ಬುಧವಾರ ವಕೀಲರು ನ್ಯಾಯಾಲಯದ ಕಲಾಪಗಳಿಂದ ಹೊರಗುಳಿದು ಪ್ರತಿಭಟನೆ ವ್ಯಕ್ತಪಡಿಸಿದರು.

ರಾಮನಗರದ ಜ್ಞಾನವಾಪಿ ಮಸೀದಿಯಲ್ಲಿ ಪೂಜೆಗೆ ಕೋರ್ಟ್ ಅವಕಾಶ ಕಲ್ಪಿಸಿದ್ದರ ಕುರಿತು ಫೇಸ್‌ಬುಕ್‌ನಲ್ಲಿ ಆಕ್ಷೇಪಾರ್ಹ ಪೋಸ್ಟ್ ಮಾಡಿದ್ದ ವಕೀಲ ಚಾಂದ್ ಪಾಷ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೆ ಪ್ರತಿಯಾಗಿ, ಐಜೂರು ಪೊಲೀಸರು ವಕೀಲರ ಸಂಘದ 45 ಮಂದಿ ವಿರುದ್ಧ ಸುಳ್ಳು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಆಪಾದಿಸಿ, ನ್ಯಾಯಾಲಯದ ಕಲಾಪಗಳಿಗೆ ಹೋಗದೆ ಹೊರಗುಳಿದು ಪ್ರತಿಭಟನೆ ವ್ಯಕ್ತಪಡಿಸಿದರು. ಸಂಘದ ಅಧ್ಯಕ್ಷ ಎಸ್.ಶಿವಣ್ಣೆಗೌಡ ಮಾತನಾಡಿ, ದೂರು ಮತ್ತು ಘಟನೆಯ ಸತ್ಯಾಸತ್ಯತೆ ಪರಿಶೀಲಿಸದ ಠಾಣೆ ಸಬ್‌ಇನ್‌ಸ್ಪೆಕ್ಟರ್ ಸಯ್ಯದ್ ತನ್ವೀರ್ ಹುಸೇನ್ ಪಾಷಾ ಪಕ್ಷಪಾತಿಯಾಗಿ ವಕೀಲರ ಸಂಘವನ್ನು ಗುರಿಯಾಗಿಟ್ಟುಕೊಂಡು ದುರುದ್ದೇಶದಿಂದ ಎಫ್‌ಐಆರ್ ದಾಖಲಿಸಿದ್ದು, ಅವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದರು.

ಪಾಷಾ ಅವರು ಮಾಡಿರುವ ಪೋಸ್ಟ್ ನ್ಯಾಯಾಂಗ ವ್ಯವಸ್ಥೆಗೆ ಚ್ಯುತಿ ತರುವಂತಿತ್ತು. ಈ ಕುರಿತು ಸಂಘ ನೀಡಿದ್ದ ನೋಟಿಸ್‌ಗೆ ಪ್ರತಿಕ್ರಿಯಿಸಿದ್ದ ಅವರು, ತಮ್ಮ ಪೋಸ್ಟ್‌ಗೆ ವಿಷಾದ ಕೂಡ ವ್ಯಕ್ತಪಡಿಸಿದ್ದರು. ಆದರೂ ಪೊಲೀಸರು ವಕೀಲರ ಸಂಘದ 45 ಜನರ ವಿರುದ್ಧ ಸುಳ್ಳು ಎಫ್‌ಐಆರ್ ದಾಖಲಿಸಿರುವುದು ಏಕಪಕ್ಷೀಯ ಕ್ರಮವಾಗಿದೆ ಎಂದರು.

ಪ್ರತಿಭಟನೆಯಲ್ಲಿ ಸಿ.ಹರೀಶ್‌ಕುಮಾರ್, ಹೆಚ್.ಜೆ.ಸಂದೀಪ್, ಪರಮೇಶ್, ತಾಂಡವಮೂರ್ತಿ, ಆರು ಜನ ನಿರ್ದೇಶಕರು ಸೇರಿದಂತೆ 150ಕ್ಕೂ ಹೆಚ್ಚು ವಕೀಲರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಈಗಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಸ್ಟ್ ಪಾಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಲಾಲ್ ಸಲಾಂ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಈಗಲ್ (ತೆ)	4 ಪ್ರದರ್ಶನಗಳು
ಪ್ರಭಾ	
ಪ್ರಣಯಂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.10ಕ್ಕೆ, ಮ.1.10ಕ್ಕೆ, ಈಗಲ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಪ್ರಣಯಂ (ಕ): ಬೆ.10.30ಕ್ಕೆ, ಜಸ್ಟ್ ಪಾಸ್ (ಕ): ಮ.1.20ಕ್ಕೆ, ಫೈಟರ್ (ಹಿಂ): ಸಂ.4ಕ್ಕೆ, ಪ್ರೇಮಲು (ಮ): ರಾ.7.15ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.10.15ಕ್ಕೆ.
ಸ್ಕ್ರೀನ್ 3	ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.10.40ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ, ಲವ್ವರ್ (ತ): ಮ.1.20ಕ್ಕೆ, ಉಪಾಧ್ಯಕ್ಷ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.10ಕ್ಕೆ, ರಾ.7.10ಕ್ಕೆ, ಲಾಲ್ ಸಲಾಂ (ತ): ಮ.1.10ಕ್ಕೆ, ಸಂ.4.10ಕ್ಕೆ, ಯಾತ್ರಾ 2 (ತೆ): ರಾ.10ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್ ದೂ : 2533444 / 2433456

ಸ್ಕ್ರೀನ್ 1	ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಲಾಲ್ ಸಲಾಂ (ತ): ಬೆ.9.40ಕ್ಕೆ, ಸಂ.4.05ಕ್ಕೆ, ಉಪಾಧ್ಯಕ್ಷ (ಕ): ಮ.12.50ಕ್ಕೆ, ರಾ.7.15ಕ್ಕೆ, ಈಗಲ್ (ತೆ): ರಾ.10.30ಕ್ಕೆ.
ಸ್ಕ್ರೀನ್ 3	ಒಂದು ಸರಳ ಪ್ರೇಮಕಥೆ (ಕ): ಬೆ.11.15ಕ್ಕೆ, ಈಗಲ್ (ತೆ): ಮ.2.25ಕ್ಕೆ, ಲವ್ವರ್ (ತ): ಸಂ.6.25ಕ್ಕೆ, ಲಾಲ್ ಸಲಾಂ (ತ): ರಾ.9.30ಕ್ಕೆ.
ಸ್ಕ್ರೀನ್ 4	ಫೈಟರ್ (ಹಿಂ): ಮ.12.05ಕ್ಕೆ, ಉಪಾಧ್ಯಕ್ಷ (ಕ): ಮ.3.35ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.50ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ ದೂ : 0821-2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.


PVR CINEMAS ಪಿವಿಆರ್ ಸಿನಿಮಾಸ್ ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ & 3ಡಿ)(ಹಿಂ): ಬೆ.11.15ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ಬೆ.11.50ಕ್ಕೆ, ಮ.3ಕ್ಕೆ, ಸಂ.6.20ಕ್ಕೆ, ಅನ್ವೇಶಿಪಿನ್ ಕಂಡೆತುಂ (ಮ): ರಾ.9.30ಕ್ಕೆ, ಜಸ್ಟ್ ಪಾಸ್ (ಕ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.2.55ಕ್ಕೆ, ರಾ.10.25ಕ್ಕೆ, ಲವ್ವರ್ (ತ): ಮ.12.15ಕ್ಕೆ, ಸಂ.6.40ಕ್ಕೆ, ಈಗಲ್ (ತೆ): ಮ.3.20ಕ್ಕೆ, ರಾ.9.45ಕ್ಕೆ, ಲಾಲ್ ಸಲಾಂ (ತ): ಬೆ.11.40ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀ ದಿಡ್ಡಿಯಮ್ಮ ತಾಯಿಯ ಉತ್ಸವಮೂರ್ತಿ ಪ್ರತಿಷ್ಠಾಪನೆ


ಬೆಟ್ಟದಪುರ, ಫೆ.14- ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಪುಟ್ಟಣ್ಣ ಕಣಗಾಲ್ ಗ್ರಾಮದಲ್ಲಿ ಫೆ.17 ರಿಂದ ಮೂರು ದಿನಗಳ ಕಾಲ ಗ್ರಾಮದ ಮಹಾಶಕ್ತಿಯಾಗಿರುವ ಶ್ರೀ ದಿಡ್ಡಿಯಮ್ಮ ತಾಯಿಯ ಉತ್ಸವ ಮೂರ್ತಿ ಪ್ರತಿಷ್ಠಾಪನಾ ಮಹೋತ್ಸವ ನಡೆಯಲಿದೆ.



ಫೆ.17 ರ ಶನಿವಾರ ಬೆಳಿಗ್ಗೆ 7 ಗಂಟೆಗೆ ಪುಟ್ಟಣ್ಣ ಕಣಗಾಲಿನ ಕಾವೇರಿ ನದಿತೀರದಿಂದ ಪಂಚ ಕಳಶದೊಂದಿಗೆ ತಾಯಿ ಶ್ರೀ ದಿಡ್ಡಿಯಮ್ಮನ ಬೆಳ್ಳಿ ವಿಗ್ರಹವನ್ನು ವೀರಗಾಸೆ ಕುಣಿತ ಹಾಗೂ ಬಸವ ಮೆರವಣಿಗೆಯೊಂದಿಗೆ ರಾಜಬೀದಿಯಿಂದ ದೇವಿಯ ಸನ್ನಿಧಿವರೆಗೆ ಕರೆತರಲಾಗುವುದು.

ದೇವಸ್ಥಾನದ ಆವರಣದಲ್ಲಿ ಬೆಳಗ್ಗೆ 9 ರಿಂದ 12.30ರವರೆಗೆ ಫಲಸಮರ್ಪಣೆ, ಗಣಪತಿ ಪೂಜೆ, ಪುಣ್ಯಾಹವಾಚನವಿಧಿ, ಸ್ಥಳಶುದ್ಧಿ, ಕಳಶ ಸ್ಥಾಪನೆ, ಗಂಗಾಪೂಜೆ, ದೇವನಾಂದಿ, ಮಹಾಸಂಕಲ್ಪ, ಯುತ್ವಿಗರಣೆ, ಶ್ರೀ ದಿಡ್ಡಿಯಮ್ಮನ ಪೂಜೆ ಹಾಗೂ ಮಂಗಳಾರತಿ ನಡೆಯಲಿದೆ. ಬಳಿಕ ಸಂಜೆ 6:00 ರಿಂದ 8:30ರವರೆಗೆ ಗಣಪತಿ ಪೂಜೆ, ವಾಸ್ತು ಹೋಮ, ರಕ್ಷೋಘ್ನ ಹೋಮ, ವಾಸ್ತುಬಲಿ ಪೂಜೆ ನಡೆಯಲಿದೆ.

ಚಲುವನಾಯಕ ನಿಧನ



ಸರಗೂರು, ಫೆ.14- ನಾಯಕ ಸಮಾಜದ ಹಿರಿಯ ಮುಖಂಡರಾದ ಚಲುವನಾಯಕ (ಬಿಳಿನಾಯಕ) ಬುಧವಾರ ಬೆಳಿಗ್ಗೆ ನಿಧರಾಗಿದ್ದಾರೆ. ಅವರಿಗೆ 72 ವರ್ಷ ವಯಸ್ಸಾಗಿತ್ತು.

ಮೃತರು ಇಬ್ಬರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದು, ಅಂತ್ಯಕ್ರಿಯೆಯನ್ನು ಪಟ್ಟಣದ ನಾಯಕ ಸಮಾಜದ ರುದ್ರಭೂಮಿಯಲ್ಲಿ ಬುಧವಾರ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

PUBLIC NOTICE

My client Sri. P. Gudadmal Jain S/o late Parasmal intends to purchase the schedule property from its owner 1) Smt. Puttamma W/o Late. Shivanna, 2) Krishna S/o Late. Shivanna, 3) Smt. Shruthi D/o Late. Shivanna, 4) Sri Ravi S/o Late. Shivanna, 5) Smt. Latha D/o Late. Shivanna, 1 to 5 are residing at Mahadevanagara Village, Hullahalli Hobli, Nanjangud Taluk, and Mysuru District..6) Smt. Janaki D/o Late Raju and Muttamma residing at Balyamunduru Village, Ponnapet Taluk, Kodugu District, 7) Smt. Lakshmi W/o Late Natesh, 8) Sri. Shashikumar S/o Late. Natesh, 9) Smt. Sowmya N D/o Late. Natesh, 10) Sri. Sanjay N S/o Late. Natesh, 7 to 10 are residing at No. 98, 1 Cross, Giriyabovi Palya, Siddarthanagar Post, Nazarbad Mohalla, Mysuru District, 11) Gowramma D/o Late Raju and Muttamma, residing at Mahadevanagara Village, Hullahalli Hobli, Nanjangud Taluk, and Mysuru. 12) Sri. Prakash S/o Late. Raju and Muttamma, 13) Smt. Gopamma W/o Prakash, 14) Kumari Chandana.P, D/o Prakash, 15) Sri. Manoj. P S/o Prakash 11 to 15 are residing at No. 24/29, 9th Cross, 1st Main, Deepanjali Nagara, Bangalore City, all are the legal heirs of deceased Raju and Muttamma If any persons/s who has claims any right, interest, or title of any nature or any lien, charge or enforceable right in relation to the schedule property or has any objection of any nature to the transaction should lodge or report such claims and /or objections in writing with supporting documents to the undersigned within 7(Seven) days from the date of publication of this notice. In the event of no such claims or objections have received it will be presumed that no valid claims or objections subsists and my client would proceed to purchase the schedule property as if no such claim or objections exists or that they have been waived or abandoned.

SCHEDULE PROPERTY: All that piece and parcel of Site property bearing No: 1741, measuring East to West 60 feet, and North to South 153 feet in total 9180 Sq feet, situated at Main Road, Giriyabovi palya, kasaba Hobli, Mysuru Taluk and Mysuru District. and bounded on the East by: Road, West by: German press property, North by: Site No 1756/1 N 82/B, and South by: property no 14/1.

Sd/- Anandkumar, Advocate, BA, LLB, MBA
Mobile No. 9945734190
#882, 9th Cross, B block, Mahadevapura, Manandavadi Road, Mysuru.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಆದ ಮೈಸೂರು ನಗರ, ಕುವೆಂಪುನಗರ ಬಡಾವಣೆ, ಜಿ & ಹೆಚ್ ಬ್ಲಾಕ್, ಗಂಗೆ ಮುಖ್ಯ ರಸ್ತೆ 1ನೇ ಅಡ್ಡ ರಸ್ತೆಯಲ್ಲಿರುವ ಮನೆ ಸಂಖ್ಯೆ 1072ರಲ್ಲಿ ವಾಸವಾಗಿರುವ ಶ್ರೀ ಸುರೇಶ್ ಆಳ್ವ ರವರ ಧರ್ಮಪತ್ನಿ ಸುಮಾರು 54 ವರ್ಷ ವಯಸ್ಸಿನ ಶ್ರೀಮತಿ ಉಷಾ ಸುರೇಶ್‌ರವರು ನೀಡಿರುವ ಮಾಹಿತಿಯ ಅನುಸಾರವಾಗಿ ಸಾರ್ವಜನಿಕರಿಗೆ ಈ ಸಾರ್ವಜನಿಕ ಪ್ರಕಟಣೆಯನ್ನು ನಮೂದಿಸಿರುತ್ತಾರೆ.

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಚಿಕ್ಕಹಳ್ಳಿ ಗ್ರಾಮಕ್ಕೆ ಸೇರಿರುವ ಸರ್ವೆ ನಂ.94ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 11 ಗುಂಟೆಯಲ್ಲಿ 03 ಗುಂಟೆ ಖರಾಬು ಬಿಟ್ಟು 4 ಎಕರೆ 8 ಗುಂಟೆ ಕೃಷಿ ಜಮೀನಿನ ಪೈಕಿ ದಿನಾಂಕ 20/03/2006ರಂದು ಶ್ರೀ ನಾಗರಾಜು ಎಂಬುವವರಿಂದ ನೋಂದಾಯಿತ ಶುದ್ಧಕ್ರಯ ಪತ್ರದ ಅನುಸಾರವಾಗಿ ಪರಿಪೂರ್ಣ ಮಾಲೀಕಳಾಗಿ ಸ್ವಾಧೀನಾನುಭವದಲ್ಲಿರುತ್ತೇನೆ. ಸಂಬಂಧಿಸಿದಂತೆ ಮೈಸೂರು ತಾ|| ತಹಶೀಲ್ದಾರ್‌ರವರು, ಮೇಲ್ಕಂಡ ಕೃಷಿ ಜಮೀನಿಗೆ ಸಂಬಂಧಿಸಿದ ವಿಸ್ತೀರ್ಣಕ್ಕೂ ಖಾತೆದಾರರ ವಿಸ್ತೀರ್ಣಕ್ಕೂ ವ್ಯತ್ಯಾಸವಿರುವುದರಿಂದ ಮೈಸೂರಿನ ಉಪವಿಭಾಗಾಧಿಕಾರಿಗಳ ಮಾನ್ಯ ನ್ಯಾಯಾಲಯಕ್ಕೆ ಮೇಲ್ಮನವಿ ಸಂಖ್ಯೆ 485/2014-15ರ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಮೇಲ್ಕಂಡ ಮೇಲ್ಮನವಿಯು ದಿನಾಂಕ 19/12/2018ರಂದು ಮಾನ್ಯ ಉಪವಿಭಾಗಾಧಿಕಾರಿರವರು ಮೇಲ್ಕಂಡ ಸರ್ವೆ ನಂ.94ರಲ್ಲಿ 94/1 ಎ ಮತ್ತು 94/1 ಬಿ ತಪ್ಪು ಪೋಡುಗಳಾಗಿದ್ದವುಗಳನ್ನು ರದ್ದುಪಡಿಸಿ ತಹಶೀಲ್ದಾರ್ ಮೈಸೂರು ತಾಲ್ಲೂಕುರವರಿಗೆ ಸ್ಥಳ ಪರಿಶೀಲನೆ ಮಾಡಿ ಸ್ವತ್ತುಗಳಲ್ಲಿ ಸ್ವಾಧೀನಾನುಭವದಲ್ಲಿರುವವರಿಗೆ ತಿಳುವಳಿಕೆ ಪತ್ರಗಳನ್ನು ನೀಡಿ ಹೊಸದಾಗಿ ಪೋಡುಗಳನ್ನು ಮಾಡುವಂತೆ ಆದೇಶಿಸಲ್ಪಟ್ಟಿರುತ್ತಾರೆ. ತದನಂತರವಾಗಿ ಮಾನ್ಯ ಉಪವಿಭಾಗಾಧಿಕಾರಿಗಳ ದಿನಾಂಕ 19/12/2018ರಂದು ಆದೇಶ ಮಾಡಿರುವುದನ್ನು ಮೇಲ್ಕಂಡ ಪ್ರಕರಣದ 11ನೇ ಎದುರುದಾರರಾದ ಶ್ರೀ ಮಾಂಗಿಲಾಲ್‌ರವರು ಮೇಲ್ಕಂಡ ಆರ್.ಆರ್.ಟಿ. ಪ್ರಕರಣವು ಚಾಲ್ತಿಯಲ್ಲಿರುವಾಗಲೇ ಭೌತಿಕವಾಗಿ ತಮಗೆ ಮೇಲ್ಕಂಡ ಸರ್ವೆ ನಂಬರಿನಲ್ಲಿ ಯಾವುದೇ ಸ್ವತ್ತು ಇಲ್ಲದಿದ್ದರೂ ಕೂಡ ಕಾನೂನುಬಾಹಿರವಾಗಿ ತಾವು ಮಾಡಿಕೊಂಡಿದ್ದ ನೋಂದಾಯಿತ ಕ್ರಯಪತ್ರದ ಆಧಾರದ ಮೇಲೆ ಕೃಷಿ ಜಮೀನನ್ನು ದಿನಾಂಕ 28/12/2016ರಂದು ಖರೀದಿಸಿರುವ ಶ್ರೀ ಸಿ.ಎನ್.ಮಂಜೇಗೌಡರವರು ಮಾನ್ಯ ಉಪವಿಭಾಗಾಧಿಕಾರಿಗಳು ದಿನಾಂಕ 19/12/2018ರಂದು ಮಾಡಿದ್ದ ಆದೇಶವನ್ನು ಪ್ರಶ್ನಿಸಿ ಮೈಸೂರಿನಲ್ಲಿರುವ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿರವರ ಮಾನ್ಯ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 953/2020ರ ದಾವೆಯಲ್ಲಿ ನನ್ನನ್ನು ಮತ್ತು ನನ್ನ ಪತಿಯವರನ್ನು ಪ್ರತಿವಾದಿ ಸಂಖ್ಯೆ 7 ಮತ್ತು 8ರವರನ್ನಾಗಿ ಮಾಡಿರುತ್ತಾರೆ. ಮೇಲ್ಕಂಡ ಅಸಲು ದಾವೆಯ ಊರ್ಜಿತತೆಯನ್ನು ಪ್ರಶ್ನಿಸಿ ಮಾನ್ಯ ನ್ಯಾಯಾಲಯವನ್ನು ವಜಾಗೊಳಿಸಲ್ಪಟ್ಟಿರುತ್ತದೆ. ತದನಂತರವಾಗಿ ಮಾನ್ಯ ಉಪವಿಭಾಗಾಧಿಕಾರಿಗಳ ದಿನಾಂಕ 19/12/2018ರ ಆದೇಶವನ್ನು ದಿನಾಂಕ 9/5/2022ರಂದು ಮಾನ್ಯ ಜಿಲ್ಲಾಧಿಕಾರಿಗಳ ಮಾನ್ಯ ನ್ಯಾಯಾಲಯದಲ್ಲಿ ಪುನರೀಕ್ಷಣ ಪ್ರಕರಣ ಸಂಖ್ಯೆ 116/2022ರ ಪ್ರಕರಣವನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ಜಿಲ್ಲಾಧಿಕಾರಿರವರು ದಿನಾಂಕ 30/6/2023ರಂದು ಪುನರೀಕ್ಷಣ ಪ್ರಕರಣದ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಉಭಯಪಕ್ಷಕಾರರು "ಯಥಾಸ್ಥಿತಿಯನ್ನು ಕಾಪಾಡಬೇಕೆಂದು ಆದೇಶಿಸಲ್ಪಟ್ಟಿರುತ್ತಾರೆ. ಆ ಆದೇಶವು ಇಂದಿಗೂ ಚಾಲ್ತಿಯಲ್ಲಿರುತ್ತದೆ."

ಶ್ರೀ ಸಿ.ಎನ್.ಮಂಜೇಗೌಡರು ಭೌತಿಕವಾಗಿ ಅಸ್ತಿತ್ವದಲ್ಲಿದ್ದ ಸ್ವತ್ತಿಗೆ ಮಾಲೀಕನೆಂದು ಪರಿಭಾವಿಸಿಕೊಂಡು ನನ್ನ ಕಕ್ಷಿದಾರರ ಪರಿಪೂರ್ಣ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿರುವ ಭೌತಿಕ ಸ್ವತ್ತಿಗೆ ಸಂಬಂಧಿಸಿದಂತೆ ತಮ್ಮ ರಾಜಕೀಯ ಮತ್ತು ಆರ್ಥಿಕ ಪ್ರಭಾವವನ್ನು ಬಳಸಿ ಪ್ರಕಟಣೆಯಲ್ಲಿರುವ ಅನುಸೂಚಿ ಸ್ವತ್ತನ್ನು ಪರಭಾರೆ ಮಾಡುವ ಪ್ರಯತ್ನದಲ್ಲಿರುತ್ತಾರೆ. ಸಾರ್ವಜನಿಕರು ಸಿ.ಎನ್.ಮಂಜೇಗೌಡ ರವರಿಂದ ಯಾವುದೇ ನೋಂದಾಯಿತ ದಾಖಲೆಗಳನ್ನು ನೋಂದಾವಣೆ ಮಾಡಿಕೊಂಡಲ್ಲಿ ಅಂತಹ ನೋಂದಾಯಿತ ದಾಖಲೆಗಳು ನನ್ನ ಕಕ್ಷಿದಾರರ ಪರಿಪೂರ್ಣ ಮಾಲೀಕತ್ವ ಮತ್ತು ಸ್ವಾಧೀನಾನುಭವವನ್ನು ಯಾವುದೇ ರೀತಿಯಿಂದಲೂ ಬದ್ಧಪಡಿಸುವುದಿಲ್ಲ ಎಂದು ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ವಜನಿಕರಲ್ಲಿ ನಿವೇದನೆ ಮಾಡಿಕೊಳ್ಳುತ್ತಿದ್ದಾರೆ.

ಮೈಸೂರು ತಾ|| ವರುಣಾ ಹೋಬಳಿ, ಚಿಕ್ಕಹಳ್ಳಿ ಗ್ರಾಮಕ್ಕೆ ಸೇರಿರುವ ಸರ್ವೆ ನಂ.94/1 ಎ, ಒಟ್ಟು ವಿಸ್ತೀರ್ಣ 30 ಗುಂಟೆ ಕೃಷಿ ಜಮೀನು ಚಕ್ಕುಬಂದಿ :- ಪೂರ್ವಕ್ಕೆ : ಶ್ರೀ ಕೆ.ನಂಜೇಗೌಡರವರ ಧರ್ಮಪತ್ನಿ ಶ್ರೀಮತಿ ಗೌರಮ್ಮ ಚಿಕ್ಕಹಳ್ಳಿ ಗ್ರಾಮ ವರುಣಾ ಹೋಬಳಿ, ಮೈಸೂರು ತಾ||, ಪಶ್ಚಿಮಕ್ಕೆ : ಶ್ರೀ ಅಂಕಯ್ಯ ಚಿಕ್ಕಹಳ್ಳಿ ಗ್ರಾಮ ವರುಣಾ ಹೋಬಳಿ, ಮೈಸೂರು ತಾ||, ಉತ್ತರಕ್ಕೆ : ಶ್ರೀ ಟಿ.ಸಿ.ಅಂಬರೀಶ್ ಮತ್ತು ಶ್ರೀ ಬಿ.ಎ. ನಿತೇಶ್ ಮನೆ ಸಂಖ್ಯೆ 432, ಬಸವಪಟ್ಟಣ, ರಾಮನಾಥಪುರ ಹೋಬಳಿ, ಹಾಸನ ಜಿಲ್ಲೆ ಶ್ರೀ ಎ.ಟಿ. ಮಧುಕರ್, ಶ್ರೀ ಆದಪ್ಪಶೆಟ್ಟಿರವರ ಮಗ, ಮನೆ ಸಂಖ್ಯೆ 796, ಮನುಪಥ ರಸ್ತೆ, ಇ & ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು– 570 023., ದಕ್ಷಿಣಕ್ಕೆ : ಮೈಸೂರು–ನರಸೀಪುರ ಮುಖ್ಯ ರಸ್ತೆ

ಸಹಿ/–ಎಂ. ಬಸಪ್ಪ, ಬಿ.ಕಾಂ., ಎಲ್.ಎಲ್.ಬಿ.,ವಕೀಲರು/–ನೋಂ. ಕರ್ನಾಟಕ 842/1995,
ಕಛೇರಿ ಸಂಖ್ಯೆ 1493, ಶಾರದವಿಲಾಸ ರಸ್ತೆ, ಕೃಷ್ಣಮೂರ್ತಿಪುರಂ ಮೈಸೂರು – 570004
ಫೋ: 0821-4245651, ಮೊ: 9342124705, 9449571705

ನಗರಸಭಾ ಕಾರ್ಯಾಲಯ, ನಂಜನಗೂಡು

ನಂಜನಗೂಡು–571301, ಮೈಸೂರು ಜಿಲ್ಲೆ, ಕಛೇರಿ ದೂರವಾಣಿ: 08221–226236
ವೆಬ್‌ಸೈಟ್:www.nanjanaguducity.mrc.gov.in, ಇಮೇಲ್:ka.nanjangud.cmc@gmail.com

ಸಂಖ್ಯೆ:ನ.ಸ.ನಂ/ಆ.ಶಾ/ಟೆಂಡರ್ ಪ್ರಕಟಣೆ/03/2023–24 ದಿನಾಂಕ: 08.02.2024

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಕೆಪಿಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಕೆಪಿಪಿ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ **ನಂಜನಗೂಡು ನಗರಸಭೆಯ ಈ ಕೆಳಕಂಡಂತೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.** ಷರತ್ತು ಮತ್ತು ನಿಭಂದನೆಗಳನ್ನು ಹಾಗೂ ಸರಬರಾಜು ವಿವರವನ್ನು ಇ–ಪೋರ್ಟಲ್‌ನಲ್ಲಿ ನೋಡಬಹುದು ಮತ್ತು ಹೆಚ್ಚಿನ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ವಿವರವನ್ನು ಪಡೆಯಬಹುದು. **ಟೆಂಡರ್ ಕೆಪಿಪಿ ಪೋರ್ಟಲ್‌ನಲ್ಲಿ ಲಭ್ಯವಾಗುವ ದಿನಾಂಕ:08/02/2024. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:17/02/2024 ಸಂಜೆ 5.30 ಘಂಟೆಯವರೆಗೆ**

ಕ್ರ ಸಂ.	ಟೆಂಡರ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
1.	DMA/2023-24/IND1401	2.08	10,000/–
2.	DMA/2023-24/SE1726/CALL-2	20.79	52,000/–
3.	DMA/2023-24/SE2349	24.89	71,225/–

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಆರೋಗ್ಯ ಶಾಖಾ ಅಧಿಕಾರಿಗಳನ್ನು ಸಂಪರ್ಕಿಸಬಹುದು. ಕಾರಣಾಂತರಗಳಿಂದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಕೆಪಿಪಿ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು.

ಸಹಿ/– ಪೌರಾಯುಕ್ತರು
ನಗರಸಭೆ, ನಂಜನಗೂಡು

ಪುರಸಭಾ ಕಾರ್ಯಾಲಯ, ಮಳವಳ್ಳಿ.

ಸಂಖ್ಯೆ:ಪುಕಾಮ/ಂಇ/ಟೆಂಡರ್–02/2023–24 ದಿನಾಂಕ:09.02.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಚುರಪಡಿಸುವುದೇನೆಂದರೆ, ಮಳವಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2022–23 ನೇ ಸಾಲಿಗೆ ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿನ ಈ ಕೆಳಕಂಡಂತೆ ಕೈಗೊಳ್ಳಲಿರುವ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ KTTP ACT ರೀತ್ಯಾ ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಇ–ಪ್ರೊಕ್ಯೂರ್ಮೆಂಟ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಸಿವಿಲ್ ಹಾಗೂ ವಿದ್ಯುತ್ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ನ್ನು KW-1 & KW-2 ರ ನಿಯಮಗಳಂತೆ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಈ ಕೆಳಗೆ ನಿಗಧಿಪಡಿಸಿದ ಅವಧಿಯೊಳಗೆ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಪುರಸಭೆ ಮಳವಳ್ಳಿ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ **www.malavallitown.mrc.gov.in** ನಲ್ಲಿ ವೀಕ್ಷಿಸಬಹುದು. **Visit: https://kppp.karnataka.gov.in/**

(1) ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ : **09.02.2024 ರಿಂದ.** (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **17.02.24 upto 17.00 pm & Sl No (08) 19-02-24.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **19.02.2023 at 11.00 pm or any other convenient date.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **23.02.2023 at 11.00 pm.** (5) ಟೆಂಡರ್ ಫಾರಂ ಬೆಲೆ ರೂ.ಗಳಲ್ಲಿ : **ಇ–ಪೋರ್ಟಲ್ ನಲ್ಲಿರುವಂತೆ.** (6) ಕಾಮಗಾರಿ ಪೂರ್ಣಗೊಳಿಸುವ ಅವಧಿ : **60 ದಿನಗಳು (ಮಳೆಗಾಲ ಸೇರಿ)**

ಕ್ರ ಸಂ	ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂ	ಅಂದಾಜು ಮೊತ್ತ (ರೂ.	ಟೆಂಡರ್‌ಗಿಟ್ಟ ಮೊತ್ತ (ರೂ.	ಇ.ಎಂ.ಡಿ ಮೊತ್ತ	ಗುತ್ತಿಗೆದಾರರ ದರ್ಜೆ	ಗುತ್ತಿಗೆದಾರ ವರ್ಗ
1	DMA/2023-24/RD/ WORK_INDENT14603	39.00	32.59	39000/–	3ನೇ ದರ್ಜೆ ಹಾಗೂ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು	S C
2	DMA/2023-24/RD/ WORK_INDENT14605	7.00	5.73	17500/–	4ನೇ ದರ್ಜೆ ಹಾಗೂ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು	OTHER
3	DMA/2023-24/RD/ WORK_INDENT14607	14.00	11.70	17500/–		S C
4	DMA/2023-24/RD/ WORK_INDENT14608	29.00	24.23	58000/–	3ನೇ ದರ್ಜೆ ಹಾಗೂ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು	OTHER
5	DMA/2023-24/OW/WORK_INDENT14610	10.00	8.30	25000/–	4ನೇ ದರ್ಜೆ ಹಾಗೂ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು	OTHER
6	DMA/2023-24/OW/WORK_INDENT14615	13.00	10.85	32500/–		OTHER
7	DMA/2023-24/EL/ WORK_INDENT14616	4.00	3.34	10000/–		OTHER
8	DMA/2023-24/EL/ WORK_INDENT14619	14.00	11.83	17500/–	1ನೇ ದರ್ಜೆ ವಿದ್ಯುತ್ ಗುತ್ತಿಗೆದಾರರು	ST
9	DMA/2023-24/EL/ WORK_INDENT14620	10.00	8.46	25000/–	1ನೇ ದರ್ಜೆ ವಿದ್ಯುತ್ ಗುತ್ತಿಗೆದಾರರು	OTHER

ಸಹಿ/–ಮುಖ್ಯಾಧಿಕಾರಿ, ಪುರಸಭೆ, ಮಳವಳ್ಳಿ

ವಾಪಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/533/2023–24